quite unconvincing and un-understandable by any one of us. I request the Home Minister to make it clear.

Mr. SPEAKER.—It is not a point of order.

Sri V. SRINIVAS SHETTY.—It is a mistake, Sir.

Mr. SPEAKER.—Let me bring the matter to a close today. The first point is whether after the receipt of the F.I.R. the case can be said to be *sub judice* or whether the case can be said to be *sub judice* after the court receives the charge-sheet. That is one. The second is, when the magistrate makes an enquiry, whether it is an enquiry under section 202 of the Cr.P.C. or whether it is an investigation. If it is an investigation, is the Magistrate said to be in charge of the case and can the matter be said to be *sub judice*? These are the points to be considered. So far as the conventions are concerned, I must find out whether there are any conventions laid down by the Assembly of the Old Mysore State in this behalf and if there are any, I should like to respect them. So far as the contempt of court is concerned, of course there are two views. One view has been expressed by the Hon'ble Member Sri Subramanya and the other view has been expressed by the Hon'ble Member Sri Hanumanthaiya. A similar situation arose in Bombay where it was held that even if matters which are *sub judice* are discussed in the House, it does not amount to a contempt of court. But it does amount to a breach of the rules that we have framed. The Hon'ble Member Sri Hanumanthaiya said just now that those rules do not allow us to discuss matters which are *sub judice*. I will, therefore, give my thought to this matter and come to certain conclusions tomorrow.

Sri G. ANNA RAO (Afzalpur).—Before you give a decision, some of the members should be allowed to express their views on this matter.

Mr. SPEAKER.—I shall allow them to do so tomorrow.

Sri. T. PARTHASARATHY.—I would request the Chair to request the Hon'ble Minister to make a statement explaining the position.

Mr. SPEAKER.—That can be done tomorrow. If I allow him to make a statement, we will be landing into trouble again.

REPORT OF THE MYSORE TENANCY AND AGRICULTURAL LAND LAWS COMMITTEE.

Motion to consider.

Sri M. P. PATIL (Minister for Revenue).—Sir, I beg to move . . . .

Sri C. J. MUCKANNAPPA (Gubbi).—Sir, I rise to a point of order.

Mr. SPEAKER.—There cannot be a point of order in a vacuum. Let him make the motion and then the Hon'ble Member can rise on a point of order. I can understand his anxiety to raise points of order, but they must relate to certain facts.

Sri M. P. PATIL.—Sir, I beg to move :

> "That the report of the Mysore Tenancy and Agricultural Land Laws Committee be taken into consideration."

Sri C. J. MUCKANNAPPA.—I rise on a point of order, Sir. The same motion was made by the Revenue Minister in the previous session. It is not contemplated under any of the Rules of Procedure and Business of the House that a Minister should move the same motion every now and then. Therefore, is it proper, is it correct and is it in accordance with the rules to make the same motion which was made in the previous session now ?

Sri M. P. PATIL.—I would request the Hon'ble Member to have some patience before he rises on a point of order. As a matter of fact, I was going to explain that point and my explanation would have satisfied him and there would have been no necessity for him to rise on that point of order.

Sir, the point is that a similar motion was moved in the last Assembly session, but, as you know and as the

(SRI M. P. PATIL)

Hon'ble Members are aware, the House was prorogued and therefore the motion moved at that time lapsed and it is now necessary to make a motion again. That is why I am making this motion and therefore there is no question of any point of order.

MR. SPEAKER.—I will take the Hon'ble Member Sri Muckannappa to Rule 13 which says as follows :—

> "On the prorogation of a session, all pending notices other than notices of intention to move for leave to introduce a Bill and those in respect of questions shall lapse, and fresh notice must be given for the next session."

That means the notices that were given in this House last time lapse with the prorogation of the last session and those matters cannot be taken up for consideration in this House unless a fresh notice is given and therefore the motion is again made by the Revenue Minister.

SRI C. J. MUCKANNAPPA.—I agree with the ruling of the Chair, but that is in respect of questions and Bills.

MR. SPEAKER.—I shall explain the position. There are two exceptions. All notices lapse and only in some cases that is, in respect of questions and motion for leave to introduce a Bill. etc., they do not lapse. So the notice that was given in respect of this motion last time lapsed and therefore a fresh notice was given, and therefore a fresh notice has to be made and that is why it is being made.

SRI C. J. MUCKANNAPPA.—What becomes of the Hon'ble Member Sri Channabasappa who has not completed his speech ?

MR. SPEAKER.—That is a different matter. I hope the Hon'ble Member is convinced that a fresh notice of this motion is necessary and a fresh motion has to be made.

SRI M. P. PATIL.—As you explained just now, Sir, I am making the motion simply for technical reasons. When the motion was moved last time, I have offered my remarks and therefore I do not wish to take the time of the House by repeating the same remarks again. I, therefore, request the Hon'ble Members to offer their remarks on this Report.

MR. SPEAKER.—As all the Hon'ble Members know, last time a similar motion was discussed for two days and some Hon'ble Members took part in the debate. Now, this is a fresh motion and members can speak on it. I find that the Hon'ble Member Sri Channabasappa was on his legs last time.

SRI K. S. SURYANARAYANA RAO (Mysore City).—Does the right of the Hon'ble Member to speak also lapse ?

MR. SPEAKER.—Technically it lapses but conventionally it subsists. So, I would call upon the Hon'ble Member Sri Channabasappa to continue his remarks. At the same time, I would request the House to bear in mind that only four days are allotted for the discussion of this report. I would therefore request the Hon'ble Members to take as little time as possible. I propose to give only 15 minutes to every Hon'ble Member but certain relaxation will be made in the case of treasury benches. The Hon'ble Member Sri Channabasappa will have one hour.

SRI A. BHEEMAPPA NAIK (Challakere).—I request that once again copies of this Report may be made available to members because the copies that were given last time are either lost or have not been brought by members. Besidet many new members have also been elected to this House. It is therefore better that copies are made available to the members again.

MR. SPEAKER.—There is another side to this story. The Secretary tells me that about a month ago fresh Kannada copies have been sent to each member. I shall see whether more English copies are available and if they are available I shall try to supply as many English copies as possible to those members who want it.

(Interruptions)

3 P.M.

SRI MAHMOOD SHARIFF (Broadway).—About the allotment of time,

you were pleased to say that Sri H. M. Channabasappa is to be given one hour while for others only 15 minutes will be given. I do not know what the rationale of the ruling is.

Mr. SPEAKER.—If the House wants that Sri Channabasappa should be given only 15 minutes, I have no objection. As all of us know, he is a member who has studied this subject.

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸ್ವಾಮಿ, ಇದೊಂದು ಬಹಳ ಮುಖ್ಯವಾದ ವಿಚಾರವನ್ನು ಚರ್ಚೆ ಮಾಡಬೇಕಾಗಿದೆ. ಮೂರು ನಾಲ್ಕು ದಿವಸ ಚರ್ಚೆ ಮಾಡಬೇಕಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಇದನ್ನೇ ಚರ್ಚೆ ಮಾಡುವುದಕ್ಕೆ ಸರಕಾರ ಆರು ದಿವಸಗಳ ಅವಕಾಶ ಮಾಡಿಕೊಟ್ಟಿದ್ದಾರೆ. ಹಾಗೆ 20 ದಿನಗಳನ್ನು ಚರ್ಚೆಗೆ ಕೊಟ್ಟರೂ ಕೂಡ ಈ ಸಭೆಯಲ್ಲಿ ಅದು ಮುಗಿಯುವುದಿಲ್ಲ. ಅಷ್ಟು ದಿವಸಗಳನ್ನು ನಾವು ಕೇಳುವದಿಲ್ಲ, ಪ್ರತಿಯೊಬ್ಬ ಸದಸ್ಯನಿಗೆ ಮಾತನಾಡಲು ಅಧ್ಯಕ್ಷರು ಕೂಡ ಬೇಕೆಂದಿರುವ 15 ನಿಮಿಷಗಳ ಅವಧಿಯಲ್ಲಿ ಇಂಥ ಜಟಿಲ ಪ್ರಶ್ನೆಯನ್ನು ಚರ್ಚೆಮಾಡಿ ಅಭಿಪ್ರಾಯ ವ್ಯಕ್ತಪಡಿಸುವುದು ಒಂದು ಕಠಿಣ ಸಮಸ್ಯೆ. ಯಾವರೀತಿಯಾಗಿ ಅಧ್ಯಕ್ಷರು ಕಾಲ ನಿಗದಿ ಮಾಡಿದ್ದಾದರೂ ನಾವು ಅದಕ್ಕೆ ಒಪ್ಪಿಕೊಳ್ಳಬೇಕಾಗಿದೆ. ಹಿಂದಕ್ಕೆ ಈ ಚೆನ್ನಿ ಬಿಲ್ಲು ಸಭೆಯ ಮುಂದೆ ಚರ್ಚೆಗೆ ಬಂದಾಗ ಮಾನ್ಯ ಸ್ನೇಹಿತರಾದ ಶ್ರೀ ಚೆನ್ನಬಸಪ್ಪನವರು——ಅವರು ಆಗ್ಗೆ ಮಂತ್ರಿಯಾಗಿರಲಲ್ಲ——ಎರಡು ದಿನ ಮಾತನಾಡಿದರು. ಆ ಕಾಲದಲ್ಲಿ ಈ ಬಿಲ್ಲು ನಮ್ಮ ಕೈಗೆ ಸಿಕ್ಕಲಿಲ್ಲ. ಕಳೆದ ಅಧಿವೇಶನದಲ್ಲಿಯೂ ಅವರು ಮಾತನಾಡಿದ್ದಾರೆ. He performed a miracle. ಅವರಿಗೆ ಈಗ ಒಂದು ಗಂಟೆ ಮಾತನಾಡಲು ಅವಕಾಶಕೊಟ್ಟಿದ್ದೀರಿ. ಶ್ರೀ ಚೆನ್ನಬಸಪ್ಪನವರ ಬಗ್ಗೆ ಮಾನ್ಯ ಸ್ನೇಹಿತರಾದ ಶ್ರೀ ಭೀಮಪ್ಪ ನಾಯಕರು ವ್ಯಕ್ತಪಡಿಸಿದ್ದು ಬಹಳ ಅಮೂಲ್ಯವಾದ ಅಭಿಪ್ರಾಯವಾಗಿದೆ. ಆ ಅಭಿಪ್ರಾಯಕ್ಕೆ ಉತ್ತರ ಕೊಡಬೇಕು ಎಂದು ನಾವು ಕಾದಿದ್ದೇವೆ. ಇಲ್ಲಿಯವರೆಗೆ ಮೂರು ದಿನಗಳ ಚರ್ಚೆಯಾಯಿತು. ಶ್ರೀ ಚೆನ್ನಬಸಪ್ಪನವರು ಮಾತ್ರ ಈ ವಿಷಯವಾಗಿ ತಯಾರಾಗಿ ಓದಿಕೊಂಡು ಬರುತ್ತಾರೆ ಎಂದು ತಾವು ಹೇಳಿದಿರಿ. ಆದರೆ ನಾವೂ ಸಹ ಕಷ್ಟಪಟ್ಟು ಓದಿಕೊಂಡು ಬರುತ್ತೇವೆ ಎಂಬುದನ್ನು ತಾವು ಇನ್ನು ಮೇಲಾದರೂ ಸಹ ತಿಳಿದುಕೊಳ್ಳಬೇಕು ಸ್ವಾಮಿ. ನಮಗೂ ಓದುವ ಅಭ್ಯಾಸವಿದೆ. ಅವರಿಗೆ ಒಂದು ಗಂಟೆ ಮಾತನಾಡಲು ಅವಕಾಶ ಕೊಡುವುದಾದರೆ ನಮಗೆ 15 ನಿಮಿಷ ಮಾತ್ರ ಏಕೆ? ನಮಗೂ ಸಹ ಒಂದು ಗಂಟೆ ಮಾತನಾಡುವ ಯೋಗ್ಯತೆಯಿದೆ. ಅಧ್ಯಕ್ಷರು ಹೇಳಿದ್ದಕ್ಕೆ ಟೀಕೆ ಮಾಡುವ ಯೋಗ್ಯತೆ ನನಗೆ ಇಲ್ಲ. ತಾವು ಹಾಗೆ ತಿಳಿದುಕೊಂಡಿರುವುದನ್ನು ಇನ್ನು ಮೇಲಾದರೂ ಬದಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಯಾರದ್ದೇ ಮನಸ್ಸಿಗೆ ಹತ್ತಬೇಕೆಂದು ನಾನು ಹಾಗೆ ಹೇಳಲಿಲ್ಲ. ಈಗಾಗಲೇ ಅವರು ಮೂರು ಗಂಟೆ ಕಾಲ ಮಾತನಾಡಿದ್ದಾರೆ. ಇನ್ನು ಹೆಚ್ಚು ಕಾಲ ಮಾತನಾಡುವದಕ್ಕೆ ಬೇಕೆಂದು ಅವರು ಕೇಳಿಕೊಂಡಿದ್ದಾರೆ. ಚೆನ್ನಾಗಿ ಮಾತನಾಡುವವರಿಗೆ ಹೆಚ್ಚು ಕಾಲ ಕೊಡಬೇಕೆಂದು ನನಗೆ ಅನಿಸುತ್ತದೆ. ಅವರ ಹಾಗೆ ಮತ್ತೆ ಯಾರಾದರೂ ಹೆಚ್ಚು ಕಾಲ ಬೇಕೆಂದು ಕೇಳಿದ್ದರೆ ಕೊಡಬಹುದಾಗಿತ್ತು. ಅವರು ಅಭ್ಯಾಸ ಮಾಡುತ್ತಾರೆ, ಶ್ರೀ ಪುಟ್ಟಸ್ವಾಮಿಯವರು ಅಭ್ಯಾಸ ಮಾಡುವದಿಲ್ಲ ಎಂದು ನಾನು ಹೇಳಲಿಲ್ಲ. ಚೆನ್ನಾಗಿ ಮಾತನಾಡುವವರಿಗೆ ಸಾಧ್ಯವಿದ್ದರೆ ಹೆಚ್ಚು ಕಾಲ ಕೊಡಬಹುದು ಎಂದು ನನ್ನ ಅಭಿಪ್ರಾಯ. ಆಳವಾಗಿ ಈ ವಿಷಯವನ್ನು ಅಭ್ಯಾಸ ಮಾಡಿದ್ದೇವೆ, ತಮಗೆ ಹೆಚ್ಚು ಕಾಲ ಮಾತನಾಡಲು ಬೇಕು ಎಂದು ಕೇಳಿದವರೆಲ್ಲರಿಗೂ ಅವಕಾಶ ಕೊಡುತ್ತೇನೆ. ಈ ನಾಲ್ಕು ದಿವಸಗಳ ಅವಧಿಯಲ್ಲಿ ಎಲ್ಲರಿಗೂ ಒಂದೊಂದು ಗಂಟೆ ಮಾತನಾಡಲು ಅವಕಾಶ ಕೊಡುವುದು ಶಕ್ಯವಿಲ್ಲ. ಆದುದರಿಂದ ಈ ಪಕ್ಷ ಮತ್ತು ಆ ಪಕ್ಷ ಎಲ್ಲರೂ ತಮ್ಮ ತಮ್ಮೊಳಗೆ ಸೇರಿಕೊಂಡು ನಮ್ಮ ಪಕ್ಷದ ಸದಸ್ಯರುಗಳಲ್ಲಿ ಇಪ್ಪತ್ತು ಜನ ಮಾತನಾಡುತ್ತಾರೆ ಎಂಬ ಒಂದು ನಿರ್ಣಯವನ್ನು ಮಾಡಿಕೊಂಡು ಬಂದರೆ, ಆಗ ಹೆಚ್ಚು ಕಾಲ ಮಾತನಾಡಲು ಅವಕಾಶ ಕೊಡುವದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಶಕ್ಯವಾಗುವದಿಲ್ಲ. ಆದುದರಿಂದ ಇದನ್ನು ಸದಸ್ಯರೆಲ್ಲರೂ ವಿಚಾರ ಮಾಡಬೇಕು, ಮಾತನಾಡುವವರು ಯಾರು, ಯಾರು ಎಂಬುದನ್ನು ನಿರ್ಣಯಮಾಡಬೇಕು. ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸುವವರು ನಾಲ್ಕು ಜನ ಮಾತನಾಡಿದರೂ ಅಷ್ಟೇ ಇಪ್ಪತ್ತು ಜನ ಮಾತನಾಡಿದರೂ ಅಷ್ಟೇ. ಆದುದರಿಂದ ಒಂದು ಸರಿಯಾದ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಎ. ಭೀಮಪ್ಪ ನಾಯಕ್ (ಚಳ್ಳಕೆರೆ).—ಜನ ಪಾರದವರೆಗೆ ಚರ್ಚೆಯ ಅವಧಿಯನ್ನು ಹೆಚ್ಚಿಸಬೇಕು. ಪ್ರತಿಯೊಬ್ಬ ಸದಸ್ಯರಿಗೂ ಮಾತನಾಡುವದಕ್ಕೆ 15 ನಿಮಿಷ ಅವಧಿಯ ಬಂಧನ ಹಾಕಿದ್ದರೆ, ಬಹಳ ಕಷ್ಟವಾಗುತ್ತದೆ. ಇಷ್ಟು ಕಡಿಮೆ ಕಾಲಾವಕಾಶದಲ್ಲಿ ಮಾತನಾಡಿ ಅನೇಕ ವಿಷಯಗಳನ್ನು ಹೇಳುವದಕ್ಕಾಗುವುದಿಲ್ಲ. ಆದುದರಿಂದ 15 ನಿಮಿಷಗಳ ಕಾಲ ನಿರ್ಬಂಧ ಇರಕೂಡದು. ಪ್ರತಿಯೊಬ್ಬರಿಗೂ ಮಾತನಾಡಲು ಹೆಚ್ಚು ಕಾಲ ಕೊಡಬೇಕು. ಯಾರು ಯಾರಿಗೆ ಎಷ್ಟೆಷ್ಟು ಅವಧಿಯವರೆಗೆ ಮಾತನಾಡಲು ಅವಕಾಶ ಕೊಡಬೇಕೆಂಬುದನ್ನು ಅಧ್ಯಕ್ಷರ ವಿವೇಚನೆಗೆ ಬಿಡುತ್ತೇವೆ. ಶನಿವಾರದವರೆಗೆ ಎಂದರೆ ಒಂದು ವಾರ ಚರ್ಚೆ ನಡೆದರೆ ಸರಿಹೋಗುತ್ತದೆ. ಆದುದರಿಂದ ದಯವಿಟ್ಟು ಇದನ್ನು ಚರ್ಚೆ ಮಾಡುವದಕ್ಕೆ ಒಂದು ವಾರ ಅವಧಿಯನ್ನು ಇಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ.

Sri J. B. MALLARADHYA (Nanjangud).—You were pleased to say that you would restrict the time. My first request to the Chair is that more time may be allotted for the discussion of this very important subject which has created more than ordinary interest throughout the entire State and even beyond the State. If possible, the Leader of the House and the Leader of the Opposition may come to an understanding and Government may allot a little more time, because we have been thinking and talking about this particular reform for quite a long time, at, any rate for more than ten years. I am

(MR. SPEAKER)

difficulty. I am not free in this respect because the House has already accepted four days for discussion in this respect. If the House wants more time, naturally a gesture may be made and it will be discussed in the Business Advisory Committee and we will try to get a few days more. On the whole, let us be guided by the principle that we are restricted in time and we have to finish our discussion within the time allotted. I would fix the maximum as one hour and the minimum as half an hour in individual cases. Apart from that I would like the Hon'ble Members, I mean the parties concerned, to give me a list of the persons who are going to speak. But the list should be in relation to the time. Generally the list in the beginning is small and it goes on increasing. It should not be like that. You calculate the time available and the number of persons may be fixed with reference to that. I will stick up to it and I will see that it is carried through.

Now the House will rise and meet after half-an-hour.

The House adjourned for Lunch at Twenty-five Minutes past Three of the Clock and re-assembled at Fifty-five Minutes past Three of the Clock.

[MR. DEPUTY SPEAKER in the Chair]

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಭೂ ಸುಧಾರಣೆಯ ವಿಷಯದಲ್ಲಿ ತಾರೀಖು 19ನೆಯ ಅಕ್ಟೋಬರ್ 1957ರಲ್ಲಿ ನಾನು ಅರ್ಧ ಮಾತನಾಡಿ ಈಗ ಮುಂದುವರಿಸಬೇಕಾಗಿದೆ. ಆಗ್ಗೆ ಕೆಲವು ಮುಖ್ಯಾಂಶಗಳನ್ನು ಈ ಸಭೆಯ ಗಮನಕ್ಕೆ ತಂದೆ. ಭೂ ಸುಧಾರಣೆ ಇಡೀ ಪ್ರಪಂಚದಲ್ಲಿ ಯಾವಯಾವ ದೇಶಗಳಲ್ಲಿ ಯಾವಯಾವ ರೀತಿ ನಡೆಯುತ್ತಿದೆಯೋ ಆ ರೀತಿಯಿಂದ ನಮ್ಮ ಭರತ ಖಂಡ ಯಾವ ವಲಯಕ್ಕೆ ಸೇರಿದೆ ಎಂಬುದನ್ನು ಸೂಚನೆ ಮಾಡಿದೆ. ಅದಕ್ಕೆ ಭೂಸುಧಾರಣೆಯಲ್ಲಿ ಲ್ಯಾಂಡ್ ರಿಫಾರಮ್ಸ್ ಜೋನ್ ಎಂದು ಹೇಳಿದ್ದೇವೆ. ಇಲ್ಲಿ ಭೂ ಸುಧಾರಣೆಯನ್ನು ಮಾಡತಕ್ಕಂಥಾದ್ದರ ಅತ್ಯಗತ್ಯ ನಾನಾಕಾರಣಗಳಿಂದ ಕಂಡುಬಂದಿರುವುದರಿಂದ ಈ ಸುಧಾರಣೆಯನ್ನು ದೇಶದಾದ್ಯಂತ ಮಾಡಬೇಕೆಂದು ನಾವು ಮಾಡಿಕೊಂಡಿದ್ದೇವೆ. ಭಾರತಾದ್ಯಂತ ಈ ಭೂ ಸುಧಾರಣೆಯನ್ನು ಒಂದೇರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವೆ, ಇಲ್ಲವೆ ಎಂಬುದನ್ನು ಪರೀಕ್ಷೆ ಮಾಡಿ ಭಿನ್ನಭಿನ್ನವಾದ ಪರಿಸ್ಥಿತಿಗಳಿರುವ ಈ ದೇಶದಲ್ಲಿ ಇಡೀ ಭರತಖಂಡಕ್ಕೆ ಒಂದೇರೀತಿಯಾಗಿ ಅನ್ವಯವಾಗುವ ಒಂದೇಒಂದು ಭೂ ಸುಧಾರಣಾ ಕಾನೂನನ್ನು ತರುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಪ್ಲಾನಿಂಗ್ ಕಮಿಷನ್‌ನವರು ಮನಗಂಡು ಕೆಲವು ಮುಖ್ಯವಾದಂಥ ನೀತಿಗಳನ್ನು ಹಾಕಿ ಈ ಗುರಿ ಮುಟ್ಟುವುದಕ್ಕೆ ಆಯಾ ಸ್ಥಳಗಳಲ್ಲಿ, ಆಯಾ ಭೌಗೋಳಿಕ ಪ್ರದೇಶಗಳಲ್ಲಿ, ಅಲ್ಲಿಯ ಪರಿಸ್ಥಿತಿ, ಸನ್ನಿವೇಶ, ಸಂದರ್ಭಗಳನ್ನನುಸರಿಸಿ ಸುಧಾರಣೆಯನ್ನು ಮಾಡಬೇಕೆಂದು ಅವರು ಆದೇಶಕೊಟ್ಟರು.

4 P.M.

ಈ ಕಾರಣದಿಂದಲೇ ಇಂದು ಒಂದೊಂದು ಸಂಸ್ಥಾನದಲ್ಲಿ ಒಂದೊಂದು ಶಾಸನ ಮಾಡುತ್ತಾ ಇದ್ದೇವೆ. ಇಲ್ಲಿ ಮೈಸೂರಿನಲ್ಲಿ ಒಂದು ಶಾಸನವಿತ್ತು; ಬೊಂಬಾಯಿ ಪ್ರದೇಶದಲ್ಲಿ ಒಂದು ಶಾಸನವಿತ್ತು; ಹೈದರಾಬಾದು ಪ್ರದೇಶದಲ್ಲಿ ಒಂದು ಶಾಸನವಿತ್ತು; ಮದರಾಸು ಪ್ರಾಂತ್ಯದಲ್ಲಿ ಒಂದು ಶಾಸನವಿತ್ತು. ಕೊಡಗಿನಲ್ಲಿ ಇರಲಿಲ್ಲ. ಅಂದರೆ ಆಯಾ ಪ್ರಾಂತ್ಯದಲ್ಲಿ ಆಯಾ ರೆಜಿಸ್ಟ್ರೇಷನ್‌ಗಳು ಕಲೆತು ಚರ್ಚೆಮಾಡಿ ಅಲ್ಲಿಲ್ಲಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ, ಸ್ಥಿತಿಗತಿಗಳನ್ನು ನೋಡಿ ಏನು ಏನು ಶಾಸನಗಳು ಬೇಕೋ ಅವುಗಳನ್ನು ಮಾಡಿದ್ದರು. ಈ ಹೊಸ ರಾಜ್ಯ ಸ್ಥಾಪಿತವಾಗಿ ಈ ಐದು ಪ್ರದೇಶಗಳು ಕೂಡಾ ಇಲ್ಲಿ ಒಂದುಗೂಡಿದವು. ಈ ಐದು ಪ್ರದೇಶಗಳೂ ಒಂದುಗೂಡಿದ್ದಕ್ಕೂ, ಭಾಷೆಯೆ ಕಾರಣವಾದುದು. ಈ ಭಾಷಾ ಆಧಾರದ ಮೇಲೆ ಈ ಒಂದು ಪ್ರಾಂತ್ಯವಾಯಿತು. ಈ ಐದು ಸ್ಥಾನಗಳೂ ಏಕರೀತಿಯ ಶಾಸನ ಮಾಡತಕ್ಕ ರೀತಿಯಲ್ಲಿ ಇದೆ ಎಂದರೆ ಒಪ್ಪಲಿಕ್ಕಾಗುವುದಿಲ್ಲ. ಹಾಗೆ ಇದ್ದಪಕ್ಷದಲ್ಲಿ ಇಂಡಿಯಾ ಸರ್ಕಾರದವರು ಮತ್ತು ಪ್ಲಾನಿಂಗ್ ಕಮಿಷನ್ನಿನವರು ಒಂದೇ ಶಾಸನವನ್ನು ಇಡೀ ದೇಶಕ್ಕೆ ಹಾಕಬೇಕಾಗಿತ್ತು. ಅದು ಸಾಧ್ಯವಿಲ್ಲ. ಈಗ ನಾನು ಕೆಲವು ಅಂಕಿಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ, ಅದರಿಂದ ತಮಗೆ ಗೊತ್ತಾಗುತ್ತದೆ. ಬಿಜಾಪುರ, ಧಾರವಾಡ, ನಾರ್ತ್ ಕೆನರಾ ಮತ್ತು ಬೆಳಗಾಂನಲ್ಲರುವ ಪರಿಸ್ಥಿತಿಗೂ, ಹಳೆಯ ಮೈಸೂರಿನಲ್ಲಿ ಇರುವ ಪರಿಸ್ಥಿತಿಗೂ, ಹೈದರಾಬಾದಿನಲ್ಲಿರುವ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಇಲ್ಲದ ಪಕ್ಷದಲ್ಲಿ ಈ ಶಾಸನದಲ್ಲಿ ತೀವ್ರವಾದ ಬದಲಾವಣೆಮಾಡುವುದಕ್ಕೆ ಕಾರಣವಿರಲಿಲ್ಲ. ಈ ಕಾರಣದಿಂದ ಸರ್ಕಾರದವರು ಜತ್ತಿ ಸಮಿತಿಯನ್ನು ನೇಮಕಮಾಡಿದರು. ಈ ಭೂ ಸುಧಾರಣೆಯ ಅಗತ್ಯವನ್ನು ನೋಡುವಾಗ, ಮೊಟ್ಟ ಮೊದಲನೆಯ ಅವಶ್ಯಕತೆ ಹೆಚ್ಚು ಉತ್ಪಾದನೆ. ಉತ್ಪಾದನೆ ಹೆಚ್ಚಿದಹೊರತು ಯಾವ ಭೂ ಸುಧಾರಣೆ ಮಾಡಿದರೂ ಕೂಡ ಅದು ಭೂ ಸುಧಾರಣೆಯಲ್ಲ. ಉತ್ಪಾದನೆಯ ಅಂಕಿಅಂಶಗಳನ್ನು ತೆಗೆದುಕೊಂಡರೆ, 1947ನೆಯ ಇಸವಿಯಿಂದ ಇಡೀ ಭರತಖಂಡದಲ್ಲೂ ಹಾಗೂ ಎಲ್ಲಾ ಪ್ರದೇಶಗಳಲ್ಲೂ ಕೂಡ ಉತ್ಪಾದನೆ ಕಡಮೆಯಾಗುತ್ತಿದೆಎಂದು ಗೊತ್ತಾಗುತ್ತದೆ. ಭೂ ಸುಧಾರಣೆಮಾಡುವಾಗ ಜಮೀನ್ದಾರಿ ಪದ್ಧತಿಯನ್ನು ರದ್ದುಮಾಡಿದೆ; ಇಂಟರ್‌ಮೀಡಿಯರಿಗಳು, ಇನಾಂದಾರರು ಮತ್ತು ಗುತ್ತಿಗೆದಾರರನ್ನು ವಜಾ ಮಾಡಿದೆ; ಅನೇಕ ಪ್ರಾಂತ್ಯಗಳಲ್ಲಿ ಶಾಸನಗಳನ್ನು ಮಾಡಿ ಇವುಗಳನ್ನು ಜಾರಿಗೆ ತಂದಿದ್ದಾರೆ. ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ದೊಡ್ಡದೊಡ್ಡ

you were pleased to say that Sri H. M. Channabasappa is to be given one hour while for others only 15 minutes will be given. I do not know what the rationale of the ruling is.

Mr. SPEAKER.—If the House wants that Sri Channabasappa should be given only 15 minutes, I have no objection. As all of us know, he is a member who has studied this subject.

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸ್ವಾಮಿ, ಇದೊಂದು ಬಹಳ ಮುಖ್ಯವಾದ ವಿಚಾರವನ್ನು ಚರ್ಚೆ ಮಾಡಬೇಕಾಗಿದೆ. ಮೂರು ನಾಲ್ಕು ದಿವಸ ಚರ್ಚೆ ಮಾಡಬೇಕಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಇದನ್ನೇ ಚರ್ಚೆ ಮಾಡುವುದಕ್ಕೆ ಸರಕಾರ ಆರು ದಿವಸಗಳ ಅವಕಾಶ ಮಾಡಿಕೊಟ್ಟಿದ್ದಾರೆ. ಹಾಗೆ 20 ದಿನಗಳನ್ನು ಚರ್ಚೆಗೆ ಕೊಟ್ಟರೂ ಕೂಡ ಈ ಸಭೆಯಲ್ಲಿ ಅದು ಮುಗಿಯುವುದಿಲ್ಲ. ಅಷ್ಟು ದಿವಸಗಳನ್ನು ನಾವು ಕೇಳುವದಿಲ್ಲ, ಪ್ರತಿಯೊಬ್ಬ ಸದಸ್ಯನಿಗೆ ಮಾತನಾಡಲು ಅಧ್ಯಕ್ಷರು ಕೊಡಬೇಕೆಂದಿರುವ 15 ನಿಮಿಷಗಳ ಅವಧಿಯಲ್ಲಿ ಇಂಥ ಜಟಿಲ ಪ್ರಶ್ನೆಯನ್ನು ಚರ್ಚೆಮಾಡಿ ಅಭಿಪ್ರಾಯ ವ್ಯಕ್ತಪಡಿಸುವುದು ಒಂದು ಕಠಿಣ ಸಮಸ್ಯೆ. ಯಾವರೀತಿಯಾಗಿ ಅಧ್ಯಕ್ಷರು ಕಾಲ ನಿಗದಿ ಮಾಡಿದ್ದಾದರೂ ನಾವು ಅದಕ್ಕೆ ಒಪ್ಪಿಕೊಳ್ಳಬೇಕಾಗಿದೆ. ಹಿಂದಕ್ಕೆ ಈ ಚೆನ್ನಿ ಬಿಲ್ಲು ಸಭೆಯ ಮುಂದೆ ಚರ್ಚೆಗೆ ಬಂದಾಗ ಮಾನ್ಯ ಸ್ನೇಹಿತರಾದ ಶ್ರೀ ಚನ್ನಬಸಪ್ಪನವರು——ಅವರು ಆಗ್ಗೆ ಮಂತ್ರಿಯಾಗಿರಲಿಲ್ಲ——ಎರಡು ದಿನ ಮಾತನಾಡಿದರು. ಆ ಕಾಲದಲ್ಲಿ ಈ ಬಿಲ್ಲು ನಮ್ಮ ಕೈಗೆ ಸಿಕ್ಕಲಿಲ್ಲ. ಕಳೆದ ಅಧಿವೇಶನದಲ್ಲಿಯೂ ಅವರು ಮಾತನಾಡಿದ್ದಾರೆ. He performed a miracle. ಅವರಿಗೆ ಈಗ ಒಂದು ಗಂಟೆ ಮಾತನಾಡಲು ಅವಕಾಶಕೊಟ್ಟಿದ್ದೀರಿ. ಶ್ರೀ ಚನ್ನಬಸಪ್ಪನವರ ಬಗ್ಗೆ ಮಾನ್ಯ ಸ್ನೇಹಿತರಾದ ಶ್ರೀ ಭೀಮಪ್ಪ ನಾಯಕರು ವ್ಯಕ್ತಪಡಿಸಿದ್ದು ಬಹಳ ಅಮೂಲ್ಯವಾದ ಅಭಿಪ್ರಾಯವಾಗಿದೆ. ಆ ಅಭಿಪ್ರಾಯಕ್ಕೆ ಉತ್ತರ ಕೊಡಬೇಕು ಎಂದು ನಾವು ಕಾದಿದ್ದೇವೆ. ಇಲ್ಲಿಯವರೆಗೆ ಮೂರು ದಿನಗಳ ಚರ್ಚೆಯಾಯಿತು. ಶ್ರೀ ಚನ್ನಬಸಪ್ಪನವರು ಮಾತ್ರ ಈ ವಿಷಯವಾಗಿ ತಯಾರಾಗಿ ಓದಿಕೊಂಡು ಬರುತ್ತಾರೆ ಎಂದು ತಾವು ಹೇಳಿದಿರಿ. ಆದರೆ ನಾವೂ ಸಹ ಕಷ್ಟಪಟ್ಟು ಓದಿಕೊಂಡು ಬರುತ್ತೇವೆ ಎಂಬುದನ್ನು ತಾವು ಇನ್ನು ಮೇಲಾದರೂ ಸಹ ತಿಳಿದುಕೊಳ್ಳಬೇಕು ಸ್ವಾಮಿ. ನಮಗೂ ಓದುವ ಅಭ್ಯಾಸವಿದೆ. ಅವರಿಗೆ ಒಂದು ಗಂಟೆ ಮಾತನಾಡಲು ಅವಕಾಶ ಕೊಡುವುದಾದರೆ ನಮಗೆ 15 ನಿಮಿಷ ಮಾತ್ರ ಏಕೆ? ನಮಗೂ ಸಹ ಒಂದು ಗಂಟೆ ಮಾತನಾಡುವ ಯೋಗ್ಯತೆಯಿದೆ. ಅಧ್ಯಕ್ಷರು ಹೇಳಿದ್ದಕ್ಕೆ ಟೀಕೆ ಮಾಡುವ ಯೋಗ್ಯತೆ ನನಗೆ ಇಲ್ಲ. ತಾವು ಹಾಗೆ ತಿಳಿದುಕೊಂಡಿರುವುದನ್ನು ಇನ್ನು ಮೇಲಾದರೂ ಬದಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಯಾರದೇ ಮನಸ್ಸಿಗೆ ಹತ್ತಬೇಕೆಂದು ನಾನು ಹಾಗೆ ಹೇಳಲಿಲ್ಲ. ಈಗಾಗಲೇ ಅವರು ಮೂರು ಗಂಟೆ ಕಾಲ ಮಾತನಾಡಿದ್ದಾರೆ. ಇನ್ನು ಹೆಚ್ಚು ಕಾಲ ಮಾತನಾಡುವದಕ್ಕೆ ಬೇಕೆಂದು ಅವರು ಕೇಳಿಕೊಂಡಿದ್ದಾರೆ. ಚೆನ್ನಾಗಿ ಮಾತನಾಡುವವರಿಗೆ ಹೆಚ್ಚು ಕಾಲ ಕೊಡಬೇಕೆಂದು ನನಗೆ ಅನಿಸುತ್ತದೆ. ಅವರ ಹಾಗೆ ಮತ್ತೆ ಯಾರಾದರೂ ಹೆಚ್ಚು ಕಾಲ ಬೇಕೆಂದು ಕೇಳಿದ್ದರೆ ಕೊಡಬಹುದಾಗಿತ್ತು. ಅವರು ಅಭ್ಯಾಸ ಮಾಡುತ್ತಾರೆ, ಶ್ರೀ ಪುಟ್ಟಸ್ವಾಮಿಯವರು ಅಭ್ಯಾಸ ಮಾಡುವದಿಲ್ಲ ಎಂದು ನಾನು ಹೇಳಲಿಲ್ಲ. ಚೆನ್ನಾಗಿ ಮಾತನಾಡುವವರಿಗೆ ಸಾಧ್ಯವಿದ್ದರೆ ಹೆಚ್ಚು ಕಾಲ ಕೊಡಬಹುದು ಎಂದು ನನ್ನ ಅಭಿಪ್ರಾಯ. ಆಳವಾಗಿ ಈ ವಿಷಯವನ್ನು ಅಭ್ಯಾಸ ಮಾಡಿದ್ದೇವೆ, ತಮಗೆ ಹೆಚ್ಚು ಕಾಲ ಮಾತನಾಡಲು ಬೇಕು ಎಂದು ಕೇಳಿದವರೆಲ್ಲರಿಗೂ ಅವಕಾಶ ಕೊಡುತ್ತೇನೆ. ಈ ನಾಲ್ಕು ದಿವಸಗಳ ಅವಧಿಯಲ್ಲಿ ಎಲ್ಲರಿಗೂ ಒಂದೊಂದು ಗಂಟೆ ಮಾತನಾಡಲು ಅವಕಾಶ ಕೊಡುವುದು ಶಕ್ಯವಿಲ್ಲ. ಆದುದರಿಂದ ಈ ಪಕ್ಷ ಮತ್ತು ಆ ಪಕ್ಷ ಎಲ್ಲರೂ ತಮ್ಮ ತಮ್ಮೊಳಗೆ ಸೇರಿಕೊಂಡು ನಮ್ಮ ಪಕ್ಷದ ಸದಸ್ಯರುಗಳಲ್ಲಿ ಇಷ್ಟು ಜನ ಮಾತನಾಡುತ್ತಾರೆ ಎಂಬ ಒಂದು ನಿರ್ಣಯವನ್ನು ಮಾಡಿಕೊಂಡು ಬಂದರೆ, ಆಗ ಹೆಚ್ಚು ಕಾಲ ಮಾತನಾಡಲು ಅವಕಾಶ ಕೊಡುವದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಶಕ್ಯವಾಗುವದಿಲ್ಲ. ಆದುದರಿಂದ ಇದನ್ನು ಸದಸ್ಯರೆಲ್ಲರೂ ವಿಚಾರ ಮಾಡಬೇಕು, ಮಾತನಾಡುವವರು ಯಾರು ಯಾರು ಎಂಬುದನ್ನು ನಿರ್ಣಯಮಾಡಬೇಕು. ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸುವವರು ನಾಲ್ಕು ಜನ ಮಾತನಾಡಿದರೂ ಅಷ್ಟೇ ಇಪ್ಪತ್ತು ಜನ ಮಾತನಾಡಿದರೂ ಅಷ್ಟೇ. ಆದುದರಿಂದ ಒಂದು ಸರಿಯಾದ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಎ. ಭೀಮಪ್ಪ ನಾಯಕ್ (ಚಳ್ಳಕೆರೆ).—ಈ ಪಾರದವರೆಗೆ ಚರ್ಚೆಯ ಅವಧಿಯನ್ನು ಹೆಚ್ಚಿಸಬೇಕು. ಪ್ರತಿಯೊಬ್ಬ ಸದಸ್ಯರಿಗೂ ಮಾತನಾಡುವದಕ್ಕೆ 15 ನಿಮಿಷ ಅವಧಿಯ ಬಂಧನ ಹಾಕಿದರೆ ಬಹಳ ಕಷ್ಟವಾಗುತ್ತದೆ. ಇಷ್ಟು ಕಡಿಮೆ ಕಾಲಾವಕಾಶದಲ್ಲಿ ಮಾತನಾಡಿ ಅನೇಕ ವಿಷಯಗಳನ್ನು ಹೇಳುವದಕ್ಕಾಗುವುದಿಲ್ಲ. ಆದುದರಿಂದ 15 ನಿಮಿಷಗಳ ಕಾಲ ನಿರ್ಬಂಧ ಇರಕೂಡದು. ಪ್ರತಿಯೊಬ್ಬರಿಗೂ ಮಾತನಾಡಲು ಹೆಚ್ಚು ಕಾಲ ಕೊಡಬೇಕು. ಯಾರು ಯಾರಿಗೆ ಎಷ್ಟೆಷ್ಟು ಅವಧಿಯವರೆಗೆ ಮಾತನಾಡಲು ಅವಕಾಶ ಕೊಡಬೇಕೆಂಬುದನ್ನು ಅಧ್ಯಕ್ಷರ ವಿವೇಚನೆಗೆ ಬಿಡುತ್ತೇವೆ. ಶನಿವಾರದವರೆಗೆ ಎಂದರೆ ಒಂದು ವಾರ ಚರ್ಚೆ ನಡೆದರೆ ಸರಿಹೋಗುತ್ತದೆ. ಆದುದರಿಂದ ದಯವಿಟ್ಟು ಇದನ್ನು ಚರ್ಚೆ ಮಾಡುವದಕ್ಕೆ ಒಂದು ವಾರ ಅವಧಿಯನ್ನು ಇಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ.

Sri J. B. MALLARADHYA (Nanjangud).—You were pleased to say that you would restrict the time. My first request to the Chair is that more time may be allotted for the discussion of this very important subject which has created more than ordinary interest throughout the entire State and even beyond the State. If possible, the Leader of the House and the Leader of the Opposition may come to an understanding and Government may allot a little more time, because we have been thinking and talking about this particular reform for quite a long time, at any rate for more than ten years. I am

(SRI J. B. MALLARADHYA)

afraid even six days will not be sufficient. Left to me, I would suggest that one week may be allotted. That is No. 1.

No. 2 : Regarding allotment of time most of us are very anxious to speak. As suggested by the Speaker, it is much better that we in the opposition and they on that side both come to an understanding about the number of speakers. With regard to the time to be taken by each speaker, you may restrict it. Even granting that an understanding is likely to be reached, I am afraid that the time fixed, that is, four days, is grossly inadequate and at any rate has no bearing on the importance of this subject. In view of this, I would like this matter to be considered by the Leader of the House and the Government to see that a little more time may be allotted. Our leader is not in Bangaloae to-day; he is likely to come back this evening. We on our part shall come to a decision and give a list of persons who are to speak and indicate the time required by us and you may take a decision.

ಶ್ರೀ ಕೆ. ಹನುಮಂತಯ್ಯ (ರಾಮನಗರಂ).—ಶ್ರೀ ಮಲ್ಲಾರಾಧ್ಯರು ಸಭೆಯ ಮುಂದಿಟ್ಟ ಪ್ರಾರ್ಥನೆಯನ್ನು ನಾನು ಪುಷ್ಟೀಕರಿಸುತ್ತೇನೆ ತಮಗೇ ಗೊತ್ತಿರುವ ಹಾಗೆ, ಈ ಪ್ರಶ್ನೆಯ ವಿಷಯದಲ್ಲಿ ಇಂಡಿಯಾ ದೇಶದಲ್ಲಿ ದೊಡ್ಡ ಚರ್ಚೆ ಎದ್ದಿದೆ. ಇದು ಪಾರ್ಟಿಯ ವಿಷಯವಾದರೂ ಕೂಡ ಎಲ್ಲ ಸದಸ್ಯರೂ ಕೂಲಂಕಷವಾಗಿ ಯೋಚನೆ ಮಾಡಬೇಕಾದದ್ದಾಗಿದೆ. ಬಹುಶಃ ಇಷ್ಟು ದೊಡ್ಡ ವಿವಾದಯುತವಾದ ಸಮಸ್ಯೆ ಇದುವರೆಗೂ ಹುಟ್ಟಿಲ್ಲವೆಂದು ಹೇಳಬಹುದು. ಆದ್ದರಿಂದ ಈ ವಿಷಯದಲ್ಲಿ ನಕಾರಾದವರು ಹಿಡುವಳಿಗಳ ಮೇಲೆ ಬೇಕಾದರೆ ಸೀಲಿಂಗ್ ಹಾಕುವ ಪ್ರಯತ್ನ ಮಾಡಿದರೂ ಮಾಡಲಿ, ತಾವು ಮಾತ್ರ 'time' ಮೇಲೆ ಸೀಲಿಂಗ್ ಹಾಕಕೂಡದೆಂದು ನನ್ನ ಪ್ರಾರ್ಥನೆ. ಇದಲ್ಲದೆ ಸಭಾ ಸದಸ್ಯರ ಹಕ್ಕು, ಬಾಧ್ಯತೆಗಳನ್ನು ಲೆಜಿಸ್ಲೆಟಿವ್ ಕೌನ್ಸಿಲ್‌ನಲ್ಲಿ ಅಲ್ಲಿನ ಸದಸ್ಯರ ಹಕ್ಕು ಬಾಧ್ಯತೆಗಳನ್ನು ಎಷ್ಟುಮಟ್ಟಿಗೆ ಎತ್ತಿ ಹಿಡಿಯುತ್ತಾರೋ ಅಷ್ಟರಮಟ್ಟಿಗಾದರೂ ತಾವಿಲ್ಲಿ ಎತ್ತಿ ಹಿಡಿಯುತ್ತೀರೆಂದು ನಂಬಿದ್ದೇನೆ. ಅಲ್ಲಿ time limit ಎಂಬುದೇ ಇಲ್ಲ. ಪ್ರತಿಯೊಬ್ಬರೂ ಈ ವಿಚಾರದಲ್ಲಿ ಮಾತನಾಡಿದ್ದಾರೆ. ಅದೇ ರೀತಿ ಇಲ್ಲಿಯೂ ಅವಕಾಶ ಕೊಡಬೇಕಾಗಿದ್ದು ಬಹಳ ಮುಖ್ಯ. ಪ್ರತಿಯೊಂದು ಕಾರ್ಪೊರೇಷನ್ ಸಿಯವರೂ ಇದನ್ನು ಆಲೋಚನೆಮಾಡಬೇಕಾಗಿದೆ. ಆದ್ದರಿಂದ ಈ ವಿಷಯದಲ್ಲಿ ಕೊನೆಗೆ ಏನೇ ತೀರ್ಮಾನವಾದರೂ ಉಭಯ ಪಕ್ಷದವರಿಗೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಪೂರ್ಣವಾಗಿ ವ್ಯಕ್ತಪಡಿಸುವುದಕ್ಕೆ ಅವಕಾಶ ಸಿಕ್ಕಿತು ಎಂದು ಹೇಳುವಹಾಗೆ ತಾವು ಮಾಡಬೇಕೆಂದು ಹೇಳುತ್ತೇನೆ.

SRI M. P. PATIL.—As reference has been made to Government, I want to make one point clear. It is not Government which has fixed the number of days; it is the Business Advisory Committee which has fixed four days for discussion of this Report. Government want to leave it to Hon'ble Members, to the Speaker and the Business Advisory Committee as to how much time should be devoted to the discussion of this Report. However, I want to point out that this Report was, I think, discussed for two days at the last session and four days have been allotted now. In addition to this if any more time is to be allotted I have no objection. I also wish to point out another thing that, after the discussion, a Bill has to be drafted and placed before the Hon'ble House and we shall have to enact the Bill before June and also frame rules, as the Tenancy (Amendment) (Suspension of Provisions) Act has been extended only up to June. These are the points which I wanted to bring to the notice of the House. Government have absolutely no objection for fixing any time for discussion of this report.

*ಶ್ರೀ ಕೆ. ಎಫ್. ಪಾಟೀಲ್ (ರಾಣಿಬೆನ್ನೂರು).—ಅಧ್ಯಕ್ಷರೇ, ಜತ್ತಿ ಸಮಿತಿಯು ನೇಮಕವಾದಮೇಲೆ, ಅವರು ಪ್ರಶ್ನಾವಳಿಯೊಂದನ್ನು ಹೊರಡಿಸಿ ಎಲ್ಲ ಸದಸ್ಯರಿಗೂ ಮತ್ತು ಮಹಾಜನರಿಗೂ ಭೂಸುಧಾರಣೆಯ ಸಂಬಂಧದಲ್ಲಿ ಅಭಿಪ್ರಾಯವನ್ನು ನಲ್ಲನುವ ಅವಕಾಶ ಕೊಟ್ಟು ಅವುಗಳೆಲ್ಲವನ್ನೂ ಸಮಿತಿಯವರು ಕ್ರೋಢೀಕರಿಸಿದ್ದಾರೆ. ಇದಾದನಂತರ ವೃತ್ತಪತ್ರಿಕೆಗಳಲ್ಲೂ ಮತ್ತು ಬೇರೆ ಬೇರೆ ವೇದಿಕೆಗಳಲ್ಲೂ ಬೇಕಾದಷ್ಟು ಈ ಸಮಸ್ಯೆ ಚರ್ಚೆಯಾಗುತ್ತಿದೆ. ಇಷ್ಟೆಲ್ಲಾ ಆಗಿರುವುದಲ್ಲದೆ, ಹಿಂದಿನ ಸಭೆಯಲ್ಲಿ ಎರಡು ದಿವಸ ಈ ವಿಷಯ ಚರ್ಚೆಯಾಗಿದೆ. ಈಗಲೂ ಕೂಡ ನಾಲ್ಕು ದಿವಸಗಳನ್ನು Business Advisory ಕಮಿಟಿಯವರು ಈ ಮಸೂದೆಯ ಚರ್ಚೆಯ ಬಗ್ಗೆ allot ಮಾಡಿದ್ದಾರೆ. ಇದರ ಮೇಲೆ, ಸದಸ್ಯರುಗಳು ಹೇಳುವಂತೆ, ಒಂದು ವಾರವಲ್ಲ ಆರು ತಿಂಗಳು ಅವಕಾಶಕೊಟ್ಟರೂ ಮಾತನಾಡುವವರಿದ್ದಾರೆ. ಆದರೆ ಹಾಲಿ ನಮ್ಮ ಮುಂದಿರತಕ್ಕ ಸಮಯವನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ—ಈಗಾಗಲೇ ಜತ್ತಿ ಸಮಿತಿಯನ್ನು ನೇಮಿಸಿದಮೇಲೆ ಇದುವರೆಗೂ ಭೂಸುಧಾರಣೆಯ ಬಿಲ್ಲನ್ನು ತರುವುದಕ್ಕಾಗದೆ ಎರಡು ಸಲ ಆರ್ಡಿನೆನ್ಸ್ ಹೊರಡಿಸಬೇಕಾಗಿ ಬಂದಿದೆ. ಬರುವ ಜೂನ್ ತಿಂಗಳಿನೊಳಗಾಗಿ ಈ ಸಮಸ್ಯೆಯ ಮೇಲೆ ಬಂದಿರುವ ಈ ಬಿಲ್ಲನ್ನು ಪೂರಾ ಪೂರಾ ಚರ್ಚೆಮಾಡಿ, ಕೌನ್ಸಿಲ್‌ನಲ್ಲಿಯೂ ಪರಿಗಣಿಸಲ್ಪಟ್ಟು, ಅನಂತರ ಪ್ರೆಸಿಡೆಂಟರ ಒಪ್ಪಿಗೆಗೆ ಕಳುಹಿಸಿ, ಅದಾದಮೇಲೆ ರೂಲ್ಸ್ ತಯಾರುಮಾಡಿ ಜಾರಿಗೆತರಲು ಜೂನ್‌ಒಳಗೆ ಸಾಧ್ಯವಾಗುತ್ತದೆಯೇ ಎಂಬುದನ್ನು

ಲಕ್ಷ್ಯದಲ್ಲಿಟ್ಟುಕೊಂಡು ನಮ್ಮ ಕಾರ್ಯಕ್ರಮಗಳನ್ನು ಸರಿಯಾಗಿ ಅಳವಡಿಸಿಕೊಳ್ಳದಿದ್ದರೆ ಪುನಃ ಒಂದು ಆರ್ಡಿನೆನ್ಸ್ ಹೊರಡಿಸಬೇಕಾದೀತು. ಈ ದೃಷ್ಟಿಯಿಂದ ನಾವು ಹೇಳತಕ್ಕ ವಿಷಯಗಳನ್ನು ಸಂಕ್ಷೇಪವಾಗಿ ಹೇಳಿ, ಪ್ರತ್ಯಕ್ಷವಾಗಿ ಬಿಲ್ ನಮ್ಮ ಮುಂದೆ ಬಂದಾಗ ಬೇಕಾದಷ್ಟು ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಈಗ ಮಾಡುವ ಸಾಮಾನ್ಯ ಚರ್ಚೆ ಏನಿದ್ದರೂ ಆ ಬಿಲ್ಲನ್ನು draft ಮಾಡುವುದಕ್ಕೆ ಅನುಕೂಲವಾಗುತ್ತದೆ ಅಷ್ಟೆ. ಆದ್ದರಿಂದ ಈ ನಂದರ್ಭದಲ್ಲಿ ಹೆಚ್ಚಿಗೆ ಕಾಲಾವಕಾಶ ಕೊಡುವುದು ಅನವಶ್ಯಕವೆಂದು ನಾನು ತಿಳಿಸಬಯಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೃಷ್ಣರಾಜನಗರ).—ಅಧ್ಯಕ್ಷರೇ, ಇದು ನಮ್ಮ ದೇಶದಲ್ಲಿ ಸ್ಥಿರಆಸ್ತಿಯ ವಿಚಾರದಲ್ಲಿ ವಂಶ ಪಾರಂಪರ್ಯವಾಗಿ ಬರತಕ್ಕ ಒಂದು ಹಕ್ಕಿಗೆ ಧಕ್ಕೆ ತರುವಂಥಾದ್ದಾಗಿದ್ದು, ಆ ಬಗ್ಗೆ ಒಂದು ಕಾನೂನು ರಚಿಸುವಂತಹದಾದ್ದರಿಂದ ಈ ವಿಷಯದಲ್ಲಿ ನಾವು ದೀರ್ಘವಾಗಿ ಚರ್ಚೆಮಾಡಬೇಕಾಗಿದೆ. ಹತ್ತು ದಿವಸಗಳಾದರೂ ಇದಕ್ಕೆ ಬೇಕು. ಮಾನ್ಯ ಮಿತ್ರರು ಬೇಗಮಾಡಿ ಮುಗಿಸಬೇಕೆಂದು ಹೇಳಿದರು. ಅಷ್ಟು ಆತುರ ಪಡಿಸುವ ಕಾರಣವಿಲ್ಲ. ಜೂಲೈ ತಿಂಗಳಿನಲ್ಲಿ ಅಲ್ಲದಿದ್ದರೆ ಅಕ್ಟೋಬರಿನಲ್ಲಿ ಬಿಲ್‌ಮಾಡಲಿ, ಅಂತೂ ಎಲ್ಲ ಸದಸ್ಯರಿಗೂ ಅವಕಾಶಕೊಡಬೇಕೆಂದು ನಾನು ಹೇಳುತ್ತೇನೆ.

Sri J. B. Mallaradhya has raised a pertinent point, supported by Sri K. Hanumanthaiya also. The issue before us is of such great importance for the people that it is desirable that all view-points are put before the House. We may appreciate and either convert or be converted. As far as possible we want a good Bill to be framed in the interest of the country. We have already adverse economy. Let us not have a hurried legislation. Let all people who have differences of opinion place their view-points before this House. Let us take stock of all those views and then come finally to some decision. I appeal to the Chair not to put any ceiling or maximum limit, as the Hon'ble Member Sri Hanumanthaiya put it, on members to speak. After all it is within your discretion to rule out if anything is irrelevant and call the member to order if he speaks irrelevantly. Five more days may be allotted and I even go to the extent of saying that if the House feels I see no reason why adequate time for every member on this important subject should not be given.

I thank you for the privilege you have given me and I would appeal to you to give me ample time and similarly to all members of the House.

Sri Kadidal MANJAPPA (Sringeri).—The question before us is a very important one touching the interests of nearly 75 per cent of the people in the State. Many members are anxious to express their views on the subject. If, as suggested by the Hon'ble Member Sri Channabasappa, no time limit is fixed, a few people will speak for two days and some more for three days. I am of the view that there should be some restriction on time. I think half an hour is sufficient for each member. Since many members are anxious to express their views, Government may think of extending the time by two days at least.

Sri MAHMOOD SHARIFF.— I submit, Sir, that so far as this Report is concerned, it is going to affect important social aspects of our society. Therefore, it seems to me that ample time may be given to us. To say that ample time means one hour and all that, I do not think it is all right. I would request the Government to extend the time limit at least by two or three days.

Sri M. C. NARASIMHAN (Kolar Gold Fields).—Sir, there should be equality of treatment in this matter. You called upon Sri H. M. Channabasappa and gave him one hour. Others also should be given the same treatment. He has already represented the viewpoint of the landlords.

(*Sri H. M. Channabasappa rose*)

Mr. SPEAKER.—Let us not quarrel about it.

Sri M. C. NARASIMHAN.—On the other side, there may be some views which are quite contrary to the views of Sri Channabasappa so far as I know. Looking at the discussion in the Council, Members representing the views of the opposite side were in a minority. We should have an equal footing with respect to whatever time is allotted.

Mr. SPEAKER.—So far as time is concerned, at present, I am not free to increase the time. Four days have been allotted by the Business Advisory Committee whose report has been accepted by the House. That is the

(MR. SPEAKER)

difficulty. I am not free in this respect because the House has already accepted four days for discussion in this respect. If the House wants more time, naturally a gesture may be made and it will be discussed in the Business Advisory Committee and we will try to get a few days more. On the whole, let us be guided by the principle that we are restricted in time and we have to finish our discussion within the time allotted. I would fix the maximum as one hour and the minimum as half an hour in individual cases. Apart from that I would like the Hon'ble Members, I mean the parties concerned, to give me a list of the persons who are going to speak. But the list should be in relation to the time. Generally the list in the beginning is small and it goes on increasing. It should not be like that. You calculate the time available and the number of persons may be fixed with reference to that. I will stick up to it and I will see that it is carried through.

Now the House will rise and meet after half-an-hour.

The House adjourned for Lunch at Twenty-five Minutes past Three of the Clock and re-assembled at Fifty-five Minutes past Three of the Clock.

[MR. DEPUTY SPEAKER in the Chair]

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಭೂ ಸುಧಾರಣೆಯ ವಿಷಯದಲ್ಲಿ ತಾರೀಖು 19ನೆಯ ಅಕ್ಟೋಬರ್ 1957ರಲ್ಲಿ ನಾನು ಅರ್ಧ ಮಾತನಾಡಿ ಈಗ ಮುಂದುವರಿಸ ಬೇಕಾಗಿದೆ. ಆಗ್ಗೆ ಕೆಲವು ಮುಖ್ಯಾಂಶಗಳನ್ನು ಈ ಸಭೆಯ ಗಮನಕ್ಕೆ ತಂದೆ. ಭೂ ಸುಧಾರಣೆ ಇಡೀ ಪ್ರಪಂಚದಲ್ಲಿ ಯಾವಯಾವ ದೇಶಗಳಲ್ಲಿ ಯಾವಯಾವ ರೀತಿ ನಡೆಯುತ್ತಿದೆಯೋ ಆ ರೀತಿಯಿಂದ ನಮ್ಮ ಭರತ ಖಂಡ ಯಾವ ವಲಯಕ್ಕೆ ಸೇರಿದೆ ಎಂಬುದನ್ನು ಸೂಚನೆ ಮಾಡಿದೆ. ಅದಕ್ಕೆ ಭೂಸುಧಾರಣೆಯಲ್ಲಿ ಲ್ಯಾಂಡ್ ರಿಫಾರಮ್ಸ್ ಜೋನ್ ಎಂದು ಹೇಳಿದ್ದೇವೆ. ಇಲ್ಲಿ ಭೂ ಸುಧಾರಣೆಯನ್ನು ಮಾಡತಕ್ಕಂಥಾದ್ದರ ಅತ್ಯಗತ್ಯ ನಾನಾಕಾರಣಗಳಿಂದ ಕಂಡುಬಂದಿರುವುದರಿಂದ ಈ ಸುಧಾರಣೆಯನ್ನು ದೇಶದಾದ್ಯಂತ ಮಾಡ ಬೇಕೆಂದು ನಾವು ಮಾಡಿಕೊಂಡಿದ್ದೇವೆ. ಭಾರತಾದ್ಯಂತ ಈ ಭೂ ಸುಧಾರಣೆಯನ್ನು ಒಂದೇರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವೆ, ಇಲ್ಲವೆ ಎಂಬುದನ್ನು ಪರೀಕ್ಷೆ ಮಾಡಿ ಭಿನ್ನಭಿನ್ನವಾದ ಪರಿಸ್ಥಿತಿಗಳಿರುವ ಈ ದೇಶದಲ್ಲಿ ಇಡೀ ಭರತಖಂಡಕ್ಕೆ ಒಂದೇರೀತಿಯಾಗಿ ಅನ್ವಯವಾಗುವ ಒಂದೇಒಂದು ಭೂ ಸುಧಾರಣಾ ಕಾನೂನನ್ನು ತರುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಪ್ಲಾನಿಂಗ್ ಕಮಿಷನ್‌ನವರು ಮನಗಂಡು ಕೆಲವು ಮುಖ್ಯವಾದಂಥ ನೀತಿಗಳನ್ನು ಹಾಕಿ ಈ ಗುರಿ ಮುಟ್ಟುವುದಕ್ಕೆ ಆಯಾ ಸ್ಥಳಗಳಲ್ಲಿ, ಆಯಾ ದೇಶಗಳಲ್ಲಿ, ಅಲ್ಲಿಯ ಪರಿಸ್ಥಿತಿ, ಸನ್ನಿವೇಶ, ಸಂದರ್ಭಗಳನ್ನನುಸರಿಸಿ ಸುಧಾರಣೆಯನ್ನು ಮಾಡಬೇಕೆಂದು ಅವರು ಆದೇಶಕೊಟ್ಟಿರು.

4 P.M.

ಈ ಕಾರಣದಿಂದಲೇ ಇಂದು ಒಂದೊಂದು ಸಂಸ್ಥಾನದಲ್ಲಿ ಒಂದೊಂದು ಶಾಸನ ಮಾಡುತ್ತಾ ಇದ್ದೇವೆ. ಇಲ್ಲಿ ಮೈಸೂರಿನಲ್ಲಿ ಒಂದು ಶಾಸನವಿತ್ತು; ಬೊಂಬಾಯಿ ಪ್ರದೇಶದಲ್ಲಿ ಒಂದು ಶಾಸನವಿತ್ತು; ಹೈದರಾಬಾದು ಪ್ರದೇಶದಲ್ಲಿ ಒಂದು ಶಾಸನವಿತ್ತು; ಮದರಾಸು ಪ್ರಾಂತ್ಯದಲ್ಲಿ ಒಂದು ಶಾಸನವಿತ್ತು. ಕೊಡಗಿನಲ್ಲಿ ಇರಲಿಲ್ಲ. ಅಂದರೆ ಆಯಾ ಪ್ರಾಂತ್ಯದಲ್ಲಿ ಆಯಾ ರೆವಿನ್ಯೂ ಆಫೀಸರುಗಳು ಕಲೆತು ಚರ್ಚೆಮಾಡಿ ಅಲ್ಲಿಲ್ಲಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ, ಸ್ಥಿತಿಗತಿಗಳನ್ನು ನೋಡಿ ಏನು ಏನು ಶಾಸನಗಳು ಬೇಕೋ ಆವುಗಳನ್ನು ಮಾಡಿದ್ದರು. ಈ ಹೊಸ ರಾಜ್ಯ ಸ್ಥಾಪಿತವಾಗಿ ಈ ಐದು ಪ್ರದೇಶಗಳು ಕೂಡಾ ಇಲ್ಲಿ ಒಂದುಗೂಡಿದವು. ಈ ಐದು ಪ್ರದೇಶಗಳೂ ಒಂದುಗೂಡಿದ್ದಕ್ಕೂ, ಭಾಷೆಯೆ ಕಾರಣವಾದುದು. ಈ ಭಾಷಾ ಆಧಾರದ ಮೇಲೆ ಈ ಒಂದು ಪ್ರಾಂತ್ಯವಾಯಿತು. ಈ ಐದು ಸ್ಥಾನಗಳೂ ಏಕರೀತಿಯ ಶಾಸನ ಮಾಡತಕ್ಕ ರೀತಿಯಲ್ಲಿ ಇದೆ ಎಂದರೆ ಒಪ್ಪಲಕ್ಕಾಗುವುದಿಲ್ಲ. ಹಾಗೆ ಇದ್ದಪಕ್ಷದಲ್ಲಿ ಇಂಡಿಯಾ ಸರ್ಕಾರದವರು ಮತ್ತು ಪ್ಲಾನಿಂಗ್ ಕಮಿಷನ್‌ನವರು ಒಂದೇ ಶಾಸನವನ್ನು ಇಡೀ ದೇಶಕ್ಕೆ ಹಾಕಬೇಕಾಗಿತ್ತು. ಅದು ಸಾಧ್ಯವಿಲ್ಲ. ಈಗ ನಾನು ಕೆಲವು ಅಂಕಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ, ಅದರಿಂದ ತಮಗೆ ಗೊತ್ತಾಗುತ್ತದೆ. ಬಿಜಾಪುರ, ಧಾರವಾಡ, ನಾರ್ತ್ ಕೆನರಾ ಮತ್ತು ಬೆಳಗಾಂನಲ್ಲಿರುವ ಪರಿಸ್ಥಿತಿಗೂ, ಹಳೆಯ ಮೈಸೂರಿನಲ್ಲಿ ಇರುವ ಪರಿಸ್ಥಿತಿಗೂ, ಹೈದರಾಬಾದಿನಲ್ಲಿರುವ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಇಲ್ಲದ ಪಕ್ಷದಲ್ಲಿ ಈ ಶಾಸನದಲ್ಲಿ ತೀವ್ರವಾದ ಬದಲಾವಣೆಮಾಡುವುದಕ್ಕೆ ಕಾರಣವಿರಲಿಲ್ಲ. ಈ ಕಾರಣದಿಂದ ಸರ್ಕಾರದವರು ಜತ್ತಿ ಸಮಿತಿಯನ್ನು ನೇಮಕಮಾಡಿದರು. ಈ ಭೂ ಸುಧಾರಣೆಯ ಅಗತ್ಯವನ್ನು ನೋಡುವಾಗ, ಮೊಟ್ಟ ಮೊದಲನೆಯ ಅವಶ್ಯಕತೆ ಹೆಚ್ಚು ಉತ್ಪಾದನೆ. ಉತ್ಪಾದನೆ ಹೆಚ್ಚಿದಹೊರತು ಯಾವ ಭೂ ಸುಧಾರಣೆ ಮಾಡಿದರೂ ಕೂಡ ಅದು ಭೂ ಸುಧಾರಣೆಯಲ್ಲ. ಉತ್ಪಾದನೆಯ ಅಂಕಅಂಶಗಳನ್ನು ತೆಗೆದುಕೊಂಡರೆ, 1947ನೆಯ ಇಸವಿಯಿಂದ ಇಡೀ ಭರತಖಂಡದಲ್ಲೂ ಹಾಗೂ ಎಲ್ಲಾ ಪ್ರದೇಶಗಳಲ್ಲೂ ಕೂಡ ಉತ್ಪಾದನೆ ಕಡಮೆಯಾಗುತ್ತಿದೆಎಂದು ಗೊತ್ತಾಗುತ್ತದೆ. ಭೂ ಸುಧಾರಣೆಮಾಡುವಾಗ ಜಮೀರ್ದಾರಿ ಪದ್ಧತಿಯನ್ನು ರದ್ದುಮಾಡಿದೆ; ಇಂಟರ್‌ಮಿಡಿಯರಿಗಳು, ಇನಾಂದಾರರು ಮತ್ತು ಗುತ್ತಿಗೆದಾರರನ್ನು ವಜಾ ಮಾಡಿದೆ; ಅನೇಕ ಪ್ರಾಂತ್ಯಗಳಲ್ಲಿ ಶಾಸನಗಳನ್ನು ಮಾಡಿ ಇವುಗಳನ್ನು ಜಾರಿಗೆ ತಂದಿದ್ದಾರೆ. ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ದೊಡ್ಡದೊಡ್ಡ

ಯೋಜನೆಗಳನ್ನು ನಿರ್ಮಾಣಮಾಡಿದ್ದಾರೆ. ಹಿಂದೆ ಎಂದೂ ಕಾಣದ ರೀತಿಯಲ್ಲಿ ರೈತಾಪಿ ಜನಗಳಿಗೆ ಅನುಕೂಲತೆಗಳನ್ನು ಒದಗಿಸಿಕೊಡುತ್ತಾ ಇದೆ. ಇಷ್ಟಾಗ್ಯೂ ಕೂಡ ನಮ್ಮಲ್ಲಿ ಉತ್ಪಾದನೆ ಹೆಚ್ಚಿಲ್ಲ. ಆದ್ದರಿಂದ ತತ್ಪಕ್ಷಃ ಎಲ್ಲಿಯೋ ತಪ್ಪಿರಬೇಕು. ಇಲ್ಲವೇ ನಮ್ಮ ಶಾಸನಗಳು ಸರಿಯಾಗಿ ಜಾರಿಗೆ ಬಂದಿಲ್ಲ, ಅವುಗಳಿಂದ ಪ್ರಯೋಜನವಾಗುತ್ತಿಲ್ಲ. ಇಲ್ಲವೇ ಮಳೆಬೆಳೆಗಳು ಸರಿಯಾಗಿ ಆಗದೆ ಭೂಮಿಯಿಂದ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇಲ್ಲವೇ ಭೂ ಸುಧಾರಣೆ ಮಾರ್ಗದಲ್ಲಿ ಏನೋ ಲೋಪದೋಷಗಳು ಇರಬೇಕು. ಏನು ಕಾರಣದಿಂದ ಈ ರೀತಿಯಾಗಿದೆಯೋ ನನಗಂತೂ ಅರ್ಥವಾಗಿಲ್ಲ. ನಾನು ಬಹಳ ಯೋಚನೆಮಾಡಿದ್ದರಲ್ಲಿ ಈ ಶಾಸನಗಳನ್ನು ಮಾಡುವುದರಲ್ಲಿ ಲೋಪದೋಷಗಳು ಮತ್ತು ಅನಿಶ್ಚಿತ ಪರಿಸ್ಥಿತಿ ಈ ದೇಶದಲ್ಲಿರುವುದರಿಂದಲೇ, ಭೂಮಿಯ ಮೇಲಿನ ಪ್ರೇಮ ಜನಗಳಿಗೆ ಕಡಮೆಯಾಗಿದೆ; ಉತ್ಪಾದನೆ ಕಾರ್ಯಕ್ರಮ ಕಡಮೆಯಾಗಿದೆ ಎಂದನ್ನಿಸುತ್ತದೆ. ಜತ್ತಿ ಸಮಿತಿ ವರದಿಯಲ್ಲಿ ಒಂದು ಕಡೆ ಹೇಳಿದ್ದಾರೆ ಬೊಂಬಾಯಿ ಟೆನೆನ್ಸಿ ಆಕ್ಟ್ ಬಹಳ ಆದರ್ಶವಾದ ಆಕ್ಟ್ ಎಂದು. ಅದು ಪ್ರೊಗ್ರೆಸೀವ್ ಆಗಿಯೂ ಇದೆ ಎಂದಿದ್ದಾರೆ. ಬೊಂಬಾಯಿಯಲ್ಲಿ ಟೆನೆನ್ಸಿ ಆಕ್ಟ್ ಪೊಟ್ಟಮೊದಲು ಜಾರಿಗೆ ಬಂದದ್ದು 1939ನೆಯ ಇಸವಿಯಲ್ಲಿ 1939 ರಿಂದ ಈವರೆಗೆ, 20 ವರ್ಷಗಳ ಕಾಲ ಈ ಕಾಯಿದೆ ಒಂದಲ್ಲ ಒಂದು ರೀತಿಯಲ್ಲಿ ಅಲ್ಲಿ ಜಾರಿಯಲ್ಲಿದೆ. ಇಷ್ಟಾದಾಗ್ಯೂ ಕೂಡ, ಈ ಕಾಯಿದೆಯನ್ನು ಎಷ್ಟೋ ಬದಲಾವಣೆಗಳನ್ನು ಮಾಡಿ ಜಾರಿಗೆ ತಂದರೂ ಕೂಡ, ಇವೊತ್ತಿನ ಸ್ಥಿತಿ ಏನಿದೆ? ಅದು ನನ್ನ ಅಭಿಪ್ರಾಯ. ಇದಕ್ಕೆ ಏನು ಕಾರಣ? ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟಿಕ್ಸ್ ಎಂಡ್ ಎಕನಾಮಿಕ್ಸ್ ಇವರು ಈ ಬೊಂಬಾಯಿ ಟೆನೆನ್ಸಿ ಆಕ್ಟ್‌ನ್ನು ಪರಿಶೀಲಿಸಿ ಅದರ ಮೇಲೆ ಅವರ ತೀರ್ಮಾನವನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯವನ್ನು ಯಾರೂ ಅಲ್ಲಗಳೆಯುವಹಾಗಿಲ್ಲ. ಹೈದರಾಬಾದಿನ ಪರಿಸ್ಥಿತಿ ಏನಾಗಿದೆ? ಬೊಂಬಾಯಿ ಶಾಸನವನ್ನೂ ಅನುಸರಿಸಿ 1945ನೆ ಇಸವಿಯಲ್ಲಿ ಹೈದರಾಬಾದಿನಲ್ಲೂ ಒಂದು ಷಿಕ್ಮಿ ಶಾಸನವನ್ನು ಮಾಡಿದರು. ಇದಾದ ಐದು ವರ್ಷಗಳ ಮೇಲೆ ಹೈದರಾಬಾದಿನಲ್ಲಿ ಒಂದು ಸಮಿತಿಯನ್ನು ಮಾಡಿದರು. ಈ ಸಮಿತಿಯವರು ಕೊಟ್ಟಿರುವ ಒಂದು ವರದಿಯಲ್ಲಿ 'The Bombay Shikmi Act is a thorough failure' ಎಂದೂ ಹೇಳಿದ್ದಾರೆ. ಅಷ್ಟೇಅಲ್ಲ. ಅದರಿಂದ ಏನೂ ಉದ್ದೇಶ ಸಾಧನೆಯಾಗಿಲ್ಲ, ಇದರ ಜೊತೆಗೆ ಅನ್ಯಾಯ ಮತ್ತು ತೊಂದರೆಗಳು ಆಗಿ ಹೋಗಿವೆ; ಜನಗಳಿಗೆ ಪ್ರಯೋಜನವಾಗಲಲ್ಲ ಎಂದು ಹೇಳಿದ್ದಾರೆ. ಕೆಲವರು ಹೇಳಬಹುದು ಈ ಶಾಸನಗಳಲ್ಲಿ ಏನೂ ಲೋಪದೋಷಗಳು ಇರದೆ ಜಾರಿಗೆ ಕೊಡುವಾಗ ದಕ್ಷತೆಯಿಂದ ಜಾರಿಗೆ ಕೊಡಲಿಲ್ಲ ಎಂದು. ಹಾಗೆ ಹೇಳಿದರೆ, ನುಮಾರು 20 ವರ್ಷಗಳಿಂದ ಇದ್ದ ಅಧಿಕಾರಿಗಳು ನಮ್ಮವರೇ; ಈಗ ಇರುವವರೂ ಅವರೇ. ಇನ್ನು ಮುಂದಕ್ಕೆ ಇರತಕ್ಕವರೂ ಅವರೇ. ಈಗ ಶಾಸನವನ್ನು ಮಾಡುವಾಗ ಕಡಿಗತದ ಭದ್ರತೆ ಇಲ್ಲದೆಹೋದರೆ ಮುಂದಕ್ಕೆ ಬಹಳ ಕೆಡಕುಂಟಾಗುವುದು. ಅದೂಅಲ್ಲದೆ ಬಹಳ ಕಷ್ಟವಾಗುತ್ತದೆ. ಇವತ್ತು ನಾವು ಈ ಶಾಸನವನ್ನು ಮಾಡುವಾಗ ಹಿಂದಿನ ಅನುಭವವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮುಂದೆ ನಮ್ಮಗುರಿ ಸಾಧನೆಯಾಗಬೇಕಾದರೆ ಏನು ಬದಲಾವಣೆ ಯಾಗಬೇಕು, ಯಾವರೀತಿ ಇರಬೇಕು ಎಂದು ಯೋಚನೆ ಮಾಡಬೇಕು. ಈ ಶಾಸನಗಳು ನುಲಭವಾಗಿರಬೇಕು. ನುಲಭವಾಗಿ ಜಾರಿಗೆ ಕೊಡುವುದಕ್ಕೆ ಅನುಕೂಲವಾಗಿರಬೇಕು. ಜಾರಿಗೆ ಬಂದ ಸ್ವಲ್ಪಕಾಲದೊಳಗೆ ಜನಗಳಿಗೆ ಅನುಕೂಲ ಒದಗುವಂತಿರಬೇಕು. ಈ ರೀತಿ ಯೋಜನೆಗಳು ಇರಬೇಕೇ ವಿನಾ, ಈ ಒಂದು ಶಾಸನಮಾಡಿ ಬೇಕಾದಷ್ಟು ಕಾಲಂಗಳನ್ನು ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. 20-25 ವರ್ಷಗಳಕಾಲ ಶಾಸನ ಸಭೆಯಲ್ಲಿ ಕೆಲಸಮಾಡಿದ ನಮಗೆ ಇದನ್ನು ಓದಿದರೆ ಇದರಲ್ಲಿ ಅನೇಕ ಕಾಲಂಗಳು ತಲೆಗೆ ಹಿಡಿಯುವುದಿಲ್ಲ. ಆದ್ದರಿಂದ ಈ ಭೂ ಶಾಸನವನ್ನು ಮಾಡುವ ಮುನ್ನ ನಾವು ಒಂದು ಸೂಚನೆಯನ್ನು ಕೊಡತಕ್ಕಂಥಾದ್ದು ಇದೆ. ಯಾವ ಶಾಸನವನ್ನೇ ಮಾಡಲಿ ಆ ಶಾಸನವು ಸಾಧ್ಯವಾದ ಮಟ್ಟಿಗೂ ನುಲಭವಾಗಿ ಜಾರಿಗೆ ಕೊಡುವಂತೆ ಇರಬೇಕು; ಮತ್ತು ಅದರಿಂದ ನಮ್ಮಗುರಿ ಮುಟ್ಟಬೇಕು. ಈಗ ನಮ್ಮಲ್ಲಿ ಸೋಷಿಯಲಿಸ್ಟಿಕ್ ಸೊಸೈಟಿಯನ್ನು ಸ್ಥಾಪನೆ ಮಾಡಬೇಕು ಎಂದು ಇದೆ. ಆದಕ್ಕೋಸ್ಕರವಾಗಿ ಈಶಾಸನ ವಾಗಬೇಕು. ಸೋಷಿಯಲಿಸಂ ಎನ್ನುವಂಥಾದ್ದು ಇಡೀದೇಶದಲ್ಲಿ ಸಮಗ್ರವಾಗಿ ಸಾಧ್ಯವೇ? ಒಂದೊಂದು ಕ್ಷೇತ್ರದಲ್ಲಿ ಒಂದೊಂದು ತರಹ ಸೋಷಿಯಲಿಸಂ ಜಾರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಎಲ್ಲರೂ ಒಪ್ಪಲೇಬೇಕು. ಇಂಗ್ಲೀಷಿನಲ್ಲಿ ಹೇಳುವುದಾದರೆ with one leg in socialism and another leg in capitalism the nation cannot survive. We must have both the legs in socialism if you want to implement socialism. ಈಗ ನಾವು ಪ್ರತಿಯೊಂದು sector ನಲ್ಲಿಯೂ ಇದೇರೀತಿಯಾಗಿ ಮಾಡುವುದಕ್ಕೆ ಹೊರಟಿದ್ದೇವೆ. ಇದು ಯಾವರೀತಿ ಸರಿ ಹೋಗುತ್ತದೆ ಎನ್ನುವುದನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ.

Sri C. K. RAJAIAH SETTY (Chiknaikanhally).—Can anything be made applicable at one stretch ?

Sri H. M. CHANNABASAPPA.—I quite understand your query. You start first with the agricultural sector, then extend it to the industrial sector and then to the other sectors. Let us not go half way and try to land ourselves and the country into trouble. ನಮ್ಮ ನೀತಿಯನ್ನು ನಿರೂಪಿಸುವ ಮಟ್ಟದಲ್ಲಿ ನನಗೆ ಕಾಣತಕ್ಕದ್ದು ಚೈನಾ ದೇಶದ ಪ್ರಭಾವ ಬಹು ಮಟ್ಟಿಗೆ ಬೀರಿದೆಎಂದು. ಇದಕ್ಕೆ ಸಾಕಷ್ಟು ರುಜುವಾತಿದೆ. ಚೈನಾದೇಶದಲ್ಲಿ ಉತ್ಪಾದನೆಯನ್ನು ಹೆಚ್ಚುಮಾಡುವುದಕ್ಕೆ ಉಗ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡದ್ದುನಿಜ. ಅವರು ಅದರಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ಅವರು ಏನೇನು ಕಾರ್ಯಕ್ರಮಗಳನ್ನು ಮಾಡಿದರೋ ಅವನ್ನು ನಾವೂ ಕೂಡ ಮಾಡುವುದಕ್ಕೆ ಮುಂಚೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಅಲ್ಲಯ ಪೊಲಿಟಿಕಲ್ ಸೆಟಪ್ ನಮ್ಮಲ್ಲಿಯ ಪೊಲಿಟಿಕಲ್ ಸೆಟಪ್ ಇವೆರಡಕ್ಕೂ ವ್ಯತ್ಯಾಸವಿದೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾವಯಾವರೀತಿಯಲ್ಲಿ ತವರ ಮಾರ್ಗಗಳನ್ನು ಅನು

(SRI H. M. CHANNABASAPPA)

ಸರಿಸಬೇಕು ಎನ್ನುವುದನ್ನು ಯೋಚನೆಮಾಡಿ ನಾವು ಅನುಷ್ಠಾನಕ್ಕೆತರಬೇಕು. ಏಕೆಂದರೆ ನಾವು ಇವೊತ್ತು Communistic set up ನಮ್ಮ ದೇಶದಲ್ಲಿ ಮಾಡುವುದಕ್ಕಾಗುವುದಿಲ್ಲ, ಅವರು ಹೋದಮಾರ್ಗದಲ್ಲಿ ನಾವು ಹೋಗುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಯಾವ ಮನುಷ್ಯನು ಭೂಮಿಯಲ್ಲಿ ದುಡಿಯುತ್ತಾನೆಯೋ ಅವನಿಗೇ ಭೂಮಿಯಿರಬೇಕು ಭೂಮಿಯನ್ನಿಟ್ಟುಕೊಂಡು ಅದರ ಮೇಲೆ ಪ್ರೇಮ ಆದರವಿಲ್ಲದವರಿಗೆ ಭೂಮಿ ಇರಬಾರದು. ಇಂಥವರಿಗೆ ಭೂಮಿಯಿದ್ದರೆ ಉತ್ಪನ್ನವು ಹೆಚ್ಚಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ನಿರ್ವಿವಾದದಿಂದ ಈ ಸಭೆಯಲ್ಲಿ ಹೇಳುತ್ತೇನೆ.

Sri S. D. KOTHAVALE (Chikodi).—What distinguishes communism from socialism?

Sri H. M. CHANNABASAPPA.—In Russia for example the men who do not work or who whileaway their time are whipped whereas here in a democratic set up no such treatment is meted out to the rich and idle people. That is the difference. A person will have food if he works. No work, no food. This is the condition in communist countries. Here, our position is different. We have got to persuade the people. We cannot make a man work, by force

ನಾನು ಹೇಳಿದ್ದು ಈಗ ಚೈನಾ ದೇಶದಲ್ಲಿ ಯಾವನು ಉಳುತ್ತಾನೆಯೋ ಯಾವನು ಭೂಮಿಯಲ್ಲಿ ಶ್ರಮಪಟ್ಟು ಉತ್ಪನ್ನವನ್ನು ಹೆಚ್ಚುಮಾಡಬೇಕು ಎಂದು ಆಕಾಂಕ್ಷೆಯನ್ನಿಟ್ಟುಕೊಂಡಿರುತ್ತಾನೆಯೋ ಅವನಲ್ಲಿ ಭೂಮಿ ಇದೆ. ಉತ್ಪನ್ನ ಹೆಚ್ಚಾಗತಕ್ಕ ಆವಶ್ಯಕತೆ ನಮ್ಮಲ್ಲಿದೆ ಈ ಸಂದರ್ಭದಲ್ಲಿ ಅದು ಯಾವ ರೀತಿ ಸಾಧ್ಯವೆಂದು ನೋಡೋಣ. ಈಗ ಭೂಮಿ ಎಷ್ಟಿರಬೇಕು, ಯಾರಿಗೆ ಇರಬೇಕು, ಹೇಗೆ ಮಾಡಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ. ಈಗ ನಮ್ಮ ದೇಶದಲ್ಲಿ uneconomic holdings ಎಂದರೆ ಕೆಲಸಮಾಡುವುದಕ್ಕೆ ಅನಾನುಕೂಲವಾಗಿರತಕ್ಕ ಸಣ್ಣಪುಟ್ಟ ಹಿಡುವಳಿಗಳು ಹೆಚ್ಚಾಗಿವೆ. ಅದಕ್ಕೆ ಕಾರಣಗಳನ್ನು ನಾನು ಹೇಳಬೇಕಾಗಿಲ್ಲ, ನಾನಾ ಕಾರಣಗಳಿಂದ ಹಾಗಾಗಿದೆ. ಇವೊತ್ತು ನಮ್ಮ ದೇಶದಲ್ಲಿ ಉತ್ಪನ್ನಕ್ಕೆ ಧಕ್ಕೆ ಬಂದಿರುವುದಕ್ಕೆ ಇದೂ ಒಂದು ಬಹಳ ಮುಖ್ಯವಾದ ಕಾರಣವೆನ್ನತಕ್ಕದ್ದನ್ನು ಎಲ್ಲರೂ ಕೂಡ ಒಪ್ಪಲೇಬೇಕು. Fragmentation and uneconomic holdings ಇರುವುದರಿಂದ ಹೊಸ ಹೊಸ ಸುಧಾರಣೆಯ ಮಾರ್ಗಗಳನ್ನು ಅನುಸರಿಸುವುದಕ್ಕೆ ಸಾಧ್ಯವಿಲ್ಲ. ಎರಡನೆಯದು ಉತ್ಸಾಹಿಗಳೂ ದಕ್ಷರೂ ಆಗಿರತಕ್ಕ ಜನ ವ್ಯವಸಾಯವನ್ನು ಕೈಕೊಳ್ಳಬೇಕು. ನಮ್ಮ ದೇಶದಲ್ಲಿ ನಾನಾಕಾರಣಗಳಿಂದ ಅನೇಕ ವರ್ಷಗಳಿಂದ ಈ ವ್ಯವಸಾಯ ಯಾರ ಕೈಯಲ್ಲಿದೆ ಎಂದರೆ ಬುದ್ಧಿವಂತರಲ್ಲದ ಜನರ ಕೈಯಲ್ಲಿದೆ. ಬುದ್ಧಿವಂತರಾದ ಜನರೆಲ್ಲರೂ ಬಂದು ಪಟ್ಟಣಗಳಲ್ಲಿ ನೆಲೆಸಿ ಬೇರೆ ಬೇರೆ ಉದ್ಯಮಗಳಲ್ಲಿ ತೊಡಗಿದ್ದಾರೆ. ಎಲ್ಲಿಹೋದರೂ ಕೂಡ ನಾವು ನೋಡತಕ್ಕದ್ದು ಯಾರನ್ನು? ಬುದ್ಧಿ ಸ್ವಲ್ಪ ಕಡಮೆ ಇರತಕ್ಕವರು ಅಥವಾ ಯಾವಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲದೆ ಹೋದವರು ಭೂಮಿಯನ್ನು ಅನುಸರಿಸುತ್ತಿರುವುದನ್ನು ನಾವು ನೋಡುತ್ತೇವೆ. ಇದರ ಪರಿಣಾಮವಾಗಿ ಪರಿಸ್ಥಿತಿ ಏನಾಗಿದೆ ಎಂದರೆ ಅನೇಕ ಬೇರೆ ಬೇರೆ ಸಣ್ಣಪುಟ್ಟ ವೃತ್ತಿಗಳನ್ನು ಅನುಸರಿಸುತ್ತಿದ್ದ ಜನ, ಇವೊತ್ತು ಆ ಕೈಗಾರಿಕೆಗಳೆಲ್ಲ ದೇಶದಲ್ಲಿ ಹಾಳಾಗಿ ಹೋದುದರಿಂದ ಅವರೆಲ್ಲರೂ ಕೂಡ ಅನಿವಾರ್ಯವಾಗಿ, ವಿಧಿ ಇಲ್ಲದೆ, ಭೂಮಿಯಲ್ಲಿ ವ್ಯವಸಾಯಮಾಡುವ ಕನಬನ್ನು ಜೀವನಕ್ಕೋಸ್ಕರ ಅವಲಂಬಿಸುತ್ತಿದ್ದಾರೆ. ಅದೇ ಕಾರಣದಿಂದ ಭೂಮಿಯ ಮೇಲೆ ಒತ್ತಡ ದಿನ ಕ್ರಮೇಣ ದಿನಕ್ರಮೇಣ ವಿಶೇಷರೀತಿಯಲ್ಲಿ ಬೆಳೆದುಕೊಂಡು ಬಂದಿದೆ. ಈಗ ನಮ್ಮ ಮುಂದೆ ಇರತಕ್ಕದ್ದು ಇರುವ ಭೂಮಿಯನ್ನು ಇರತಕ್ಕ ಜನರನ್ನನುಸರಿಸಿ ಕೊಡುವುದು ಸರಿಯೇ ಎನ್ನುವುದು ಒಂದುವಿಷಯ. ಭೂಮಿಯ ಮೇಲಿನ ಒತ್ತಡವನ್ನು ಕಡಮೆ ಮಾಡಬೇಕೇ ಎನ್ನುವುದೇ ಮೊದಲ ಪ್ರಶ್ನೆ.

ಶ್ರೀ ಬಿ. ಬಸವಲಿಂಗಪ್ಪ (ಬೆಂಗಳೂರು ದಕ್ಷಿಣ).—ಇದರಲ್ಲಿ ಉಳುವವರಿಗೆ ಹಂಚತಕ್ಕ ಪ್ರಶ್ನೆಇದೆಯೇ ಹೊರತು ಇರುವವರಿಗೆ ಹಂಚುವ ಪ್ರಶ್ನೆಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಉಳುವವನಿಗೇ ಭೂಮಿಯನ್ನು ಕೊಡಬೇಕು ಎಂದು ಹೇಳಿದಾಗ, ದಕ್ಷತೆಯಿಂದ ಉಳತಕ್ಕವನಿಗೆ ಮಾತ್ರ ಭೂಮಿಯನ್ನು ಕೊಡಬೇಕು, ಉತ್ತಮ ರೀತಿಯಲ್ಲಿ ವ್ಯವಸಾಯ ಮಾಡತಕ್ಕವನಿಗೆ ಮಾತ್ರ ಭೂಮಿಯನ್ನು ಕೊಡಬೇಕು. ದೇಶದಲ್ಲಿ ಉತ್ಪನ್ನ ಹೆಚ್ಚಿಗೆಆಗಬೇಕಾದರೆ ದಕ್ಷತೆಯಿಂದ, ಚೆನ್ನಾಗಿ ಉತ್ತು, ಬಿತ್ತಿ, ಬೆಳೆಯತಕ್ಕವನಿಗೆ ಭೂಮಿಯನ್ನು ಕೊಡಬೇಕು. ಹಾಗಿಲ್ಲದೆ ಹೋದರೆ ಭೂಮಿಯಿಂದ ಹತ್ತುಪಲ್ಲ ಬೆಳೆಯುವ ಕಡೆ ಎರಡು ಪಲ್ಲ ದವನ ಬೆಳೆದರೆ ಅದರಿಂದ ದೇಶದ ಹಿತಕ್ಕೆ ಧಕ್ಕೆ ಬರುತ್ತದೆ. ಇವೊತ್ತು ಈ ಶಾಸನವನ್ನು ಮಾಡುವಾಗ, ಭೂಸುಧಾರಣೆಯನ್ನು ಮಾಡುವಾಗ ಯಾವುದಾದರೂ ಒಂದು section, ಒಂದು classಗೆ, ಸಂಬಂಧಪಟ್ಟವರಿಗೆ ಅನುಕೂಲಪಡಿಸಬೇಕು ಎನ್ನುವ ದೃಷ್ಟಿಯಿಂದ ಹೋದಪಕ್ಷದಲ್ಲಿ ಅದಕ್ಕಿಂತ ಕೆಡುಕಾದದ್ದು ಇನ್ನೊಂದಿಲ್ಲ. ಇವೊತ್ತು ಈಪಂಗಡಕ್ಕೆ ಅನುಕೂಲವನ್ನು ಕಲ್ಪಿಸಬೇಕು, ಆ ಪಂಗಡಕ್ಕೆ ಅನುಕೂಲಕಲ್ಪಿಸಬೇಕು ಎಂದು ಮಾಡುವುದು ಸರಿಯಲ್ಲ. ಎಲ್ಲಪಂಗಡಗಳೂ ಕೂಡ ಅನುಕೂಲವನ್ನು ಹೊಂದಬೇಕು. ಯಾವ ಒಂದು ಪಂಗಡದ ಏಳಿಗೆಗೋಸ್ಕರವಾಗಿಯಾದರೂ ಇದರಲ್ಲಿ ಅವಕಾಶಮಾಡುವುದು ಸರಿಯಾದುದಲ್ಲ. ಭೂಮಿಯನ್ನು ಉಳುಮೆಮಾಡುವುದಕ್ಕೆ ಶಕ್ತಿಇಲ್ಲದ ಮನುಷ್ಯನಿದ್ದರೆ ಅವನಿಗೆ ಜೀವನಮಾಡುವುದಕ್ಕೆ ತಕ್ಕವ್ಯವಸ್ಥೆಯನ್ನು ಮಾಡತಕ್ಕ ಜವಾಬ್ದಾರಿ ದೇಶದಮೇಲೆ ಮತ್ತು ಸರ್ಕಾರದಮೇಲೆ ಇದೆ. Welfare State ಎಂದರೆ ಎಲ್ಲರಿಗೂ ಜೀವನೋಪಾಯಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕು. ಜೀವನವನ್ನು ನಡೆಸುವುದಕ್ಕಾಗಿ ಭೂಮಿಯಮೇಲಿನ ಒತ್ತಡದ ಪ್ರಮಾಣ ಹೆಚ್ಚಿದೆ. ನಮ್ಮ ಕಮಿಟಿಯವರು ಈ ಅಂಕಿಅಂಶಗಳನ್ನು ನಮ್ಮ ಮುಂದೆ ಇಟ್ಟಿಲ್ಲ. ಇದು ಒಂದು ದೊಡ್ಡ ಲೋಪವೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇದು ಮೈಸೂರು ಸಂಸ್ಥಾನಕ್ಕೆ ಮಾತ್ರ ಅನ್ವಯಿಸುತ್ತದೆಯಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಭರತಖಂಡಕ್ಕೂ ಅನ್ವಯಿಸುತ್ತದೆ. We are part and parcel

of India and what we do and what they do are identical. After all we do in the interest of all people.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಯಾರು ತಾವೇ ಚೆನ್ನಾಗಿ ಉಳತಕ್ಕವರೋ ಅವರಿಗೆ ಮಾತ್ರ ಜಮೀನು ಕೊಡಬೇಕೆಂದು ಹೇಳಿದರು, ಅವರು ರೆವಿನ್ಯೂ ಮಂತ್ರಿ ಗಳಾಗಿದ್ದಾಗ ರಾಜಕೀಯದಲ್ಲಿ ನೊಂದವರೆಂದು ಕೆಲವರಿಗೆ ಜಮೀನು ಕೊಟ್ಟರು ಅವರೆಲ್ಲರೂ ಚೆನ್ನಾಗಿ ಉಳುವವರು ಎಂತಲೇ?

ಶ್ರೀ ಎಚ್. ಎಂ ಚನ್ನಬಸಪ್ಪ.—ದಕ್ಷತೆಯಿಂದ ಉಳುತ್ತಾರೆಂದು ಕೊಡಲಾಯಿತು, ಇಲ್ಲದಿದ್ದರೆ ಭೂಮಿಯನ್ನು ಕಿತ್ತುಕೊಳ್ಳುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ತಮ್ಮ ಜಮೀನನ್ನು ಉಳುತ್ತಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಬಂದು ನೋಡಿ, ಗೊತ್ತಾಗುತ್ತದೆ. I cannot tolerate land being misused because land must be efficiently used. That is one of the objectives laid down.

Sri K. A. PATIL (Talikot).—I would request the Chair not to allow such interruptions. After he speaks, others may speak out what they feel.

Sri S. D. KOTHAVALE.—It is a correct procedure to have parliamentary interruptions.

ಶ್ರೀ ಎಚ್. ಎಂ. ಚನ್ನಬಸಪ್ಪ.—Interruption ಎನ್ನುವುದು ಪಾರ್ಲಮೆಂಟರಿ ಚರ್ಚೆಯಲ್ಲಿ ಒಳ್ಳೆಯದು; ಇದರಿಂದ ತೊಂದರೆಯೇನೂ ಇಲ್ಲ.

ಈಗ ನಮ್ಮಲ್ಲಿ ಭೂಮಿಯ ಒತ್ತಡ ಎಷ್ಟಿದೆ ಎನ್ನುವುದನ್ನು ತಮಗೆ ಹೇಳುವುದಾದರೆ ಮುಂದಿನ ಚರ್ಚೆಗೆ ಅನುಕೂಲವಾಗುತ್ತದೆ. ಬೆಳೆಯನ್ನು ಬಿತ್ತಿದಪ್ರದೇಶದಲ್ಲಿ ಪ್ರತಿನೂರು ಎಕರೆಗೂ ಜಪಾನಿನಲ್ಲಿ 300 ಜನರ ಒತ್ತಡವಿದೆ, ಚೈನಾದಲ್ಲಿ 200 ಜನರ ಒತ್ತಡವಿದೆ, ಭಾರತದಲ್ಲಿ 77 ಜನರ ಒತ್ತಡವಿದೆ. ಅಂದ ಮೇಲೆ ಭರತಖಂಡದಲ್ಲಿ ಭೂಮಿಯ ಮೇಲೆ ವ್ಯವಸಾಯ ಗಾರರ ಒತ್ತಡ ಚೈನಾ ಮತ್ತು ಜಪಾನ್ ದೇಶ ಗಳಿಗಿಂತಲೂ ಕಡಮೆ ಇರುವುದು ಒಂದು ವಿಷಯ. ಇದೇ ಭರತಖಂಡದ ನಾನಾ ಭಾಗಗಳಲ್ಲಿ ಹೇಗಿದೆ ಯೆಂದರೆ.—

ಕೇರಳದಲ್ಲಿ 100 ಎಕರೆಗೆ	166	ಜನರಒತ್ತಡವಿದೆ
ಬೀಹಾರಿನಲ್ಲಿ ...	160	,,
ಮದರಾಸಿನಲ್ಲಿ	143	,,
ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ.	130	,,
ಉತ್ತರ ಪ್ರದೇಶದಲ್ಲಿ ...	115	,,
ಆಂಧ್ರದಲ್ಲಿ ...	83	,,
ಮೈಸೂರಿನಲ್ಲಿ ...	60	,,

ಏಕೆ ಇದನ್ನು ಹೇಳಿದೆನೆಂದರೆ ನಮ್ಮ ರಾಜ್ಯದಲ್ಲಿ ನೂರು ಎಕರೆ ಬೆಳೆಮಾಡಿದ ಪ್ರದೇಶಕ್ಕೆ 60 ಜನ ವ್ಯವ ಸಾಯಗಾರರಿದ್ದಾರೆ. ಒಟ್ಟು 138 ಲಕ್ಷ ವ್ಯವಸಾಯ ಗಾರರಿದ್ದೇವೆ. ಇದು simple mathematics.

Sri J. B. MALLARADHYA.—Why only discuss about the sown area and not the entire land available?

ಶ್ರೀ ಎಚ್. ಎಂ. ಚನ್ನಬಸಪ್ಪ.—ವ್ಯವಸಾಯ ಗಾರರ ಒತ್ತಡ ಎಷ್ಟಿದೆಯೆಂಬುದನ್ನು ತಿಳಿದುಕೊಳ್ಳುವುದು ಸುಲಭ. ಪ್ರಜಾಸಂಖ್ಯೆಯ ಒತ್ತಡ ಪೆಷ್ಟಿದೆಯೆಂಬುದು ಗೊತ್ತಿದೆ. ಶೇಕಡ 70ರಷ್ಟು ನಮ್ಮ ದೇಶದಲ್ಲಿ ವ್ಯವಸಾಯಗಾರರಿದ್ದಾರೆ. ಲೆಕ್ಕಾಚಾರ ಮಾಡಿದರೆ ಗೊತ್ತಾಗುತ್ತದೆ. ಇದು ಏನು ತೋರಿಸುತ್ತದೆಂದರೆ, ನಮ್ಮ ಮೈಸೂರಿನಲ್ಲಿ ಒತ್ತಡ ಭಾರತದ ಇತರ ಪ್ರಾಂತಗಳಿಗಿಂತಲೂ ಕಡಮೆ ಇದೆ ಎಂಬು ದನ್ನು ತೋರಿಸುತ್ತದೆ. ಜಪಾನ್ ಮತ್ತು ಚೈನಾದಲ್ಲಿ ರುವುದಕ್ಕಿಂತ ಕಡಮೆ ಇದೆ ಎಂದು ಸಿದ್ಧಾಂತವಾ ಯಿತು. ಹೀಗೆ 60 ಇದ್ದರೂ ಕೂಡ ಇದು ಹೆಚ್ಚಾಗಿ ದೆಯೇ ಅಥವಾ ಕಡಮೆ ಇದೆಯೇ ಎನ್ನುವುದನ್ನು ಮನ ಗಂಡು, ಕಡಮೆ ಇದ್ದರೆ ಹೆಚ್ಚುಮಾಡಲು, ಹೆಚ್ಚಿದ್ದರೆ ಕಡಮೆ ಮಾಡಲು. ನಮ್ಮಲ್ಲಿ ಈಗ ಎಷ್ಟು ಭೂಮಿ ಇದೆ, ಎಷ್ಟು ಜನರು ಭೂಮಿಬೇಕೆಂದು ಕೇಳುತ್ತಿದ್ದಾರೆಂಬು ದನ್ನು ನೋಡೋಣ. ಇವರೆಲ್ಲರಿಗೂ ಕೊಡಬೇಕೆಂದರೆ ಯಾವ ಆಭ್ಯಂತರವೂ ಇದೆಯೆಂದು ಹೇಳುವ ಹಾಗಿಲ್ಲ. ಆದರೂ ಭೂನುಧಾರಣೆಯ ಮುಖ್ಯ ಗುರಿಯೊಂದಿದೆ. ಕೇಳಿದವರಿಗೆಲ್ಲಾ ಭೂಮಿಯನ್ನು ಕೊಡಬೇಕೆಂಬುದು ಅದರ ಉದ್ದೇಶವಲ್ಲ. ವ್ಯವಸಾಯ ಮಾಡುವವನಿಗೆ, ಉತ್ತಮವಾಗಿ ವ್ಯವಸಾಯಮಾಡಿ ಉತ್ಪತ್ತಿಯನ್ನು ಹೆಚ್ಚು ಮಾಡುವವನಿಗೆ ಭೂಮಿಯನ್ನು ಕೊಡುವುದು ಅವಶ್ಯಕ. ಹಾಗೆಯೇ ಭೂಮಿಯಲ್ಲಿ ದುಡಿದು ಕೆಲಸ ಮಾಡದೇಯಿರುವವನಿಂದ ಭೂಮಿಯನ್ನು ಬಿಡಿಸು ವುದೂ ಅವಶ್ಯಕ. ಈ ಲೆಕ್ಕಾಚಾರವನ್ನು ಯಾರೂ ಮಾಡಿಲ್ಲ. ಇಂಡಿಯಾ ದೇಶದಲ್ಲಿ, ಮೈಸೂರು ದೇಶ ದಲ್ಲಿ ಭೂಮಿ ಇಷ್ಟಿದೆ, ಇಷ್ಟು ಜನರನ್ನು ಮಾತ್ರ ವ್ಯವ ಸಾಯ ಕ್ಷೇತ್ರದಲ್ಲಿಡಬೇಕು, ಇನ್ನೂ ಎಷ್ಟು ಜನರಿದ್ದಾರೆ ಇವರಿಗೆಲ್ಲಾ ಯಾವ ಯಾವ ವ್ಯವಸ್ಥೆ ಮಾಡಬೇಕು ಎಂಬ ವಿಷಯವನ್ನು ತೀವ್ರವಾಗಿ ಅಷ್ಟಾಗಿ ಪರ್ಯಾ ಲೋಚನೆ ಮಾಡಿದುದು ಕಂಡು ಬಂದಿಲ್ಲ. ಈಗ ಕಂಡು ಬಂದಿರುವುದೇನೆಂದರೆ, ಭೂಮಿ ಇದೆ, ಯಾವದೋ ಕಾರಣಾಂತರದಿಂದ ಇಷ್ಟು ಜನರು ಭೂಮಿಯನ್ನವಲಂಬಿಸಿದ್ದಾರೆ, ಈ ಭೂಮಿಯನ್ನು ನಾವು ಹಂಚಿಕೆಮಾಡಬೇಕು, ಎಂಬುದರ ಕಡೆ ನಮ್ಮ ಗಮನ ತೀವ್ರವಾಗಿ ಹರಿಯುತ್ತಿದೆ.

Sri A. BHEEMAPPA NAIK.—On a point of information. I would like to ask him whether equitable and economic distribution also is not one of the objectives of Government.

Sri H. M. CHANNABASAPPA.—Subject to the overall consideration of production, there should be distributive justice amongst all people who are tillers of the soil. The nation's interests are of paramount importance and keeping that in view, the rest automatically follows.

ಈಗ ಇದನ್ನು ಯಾವರೀತಿ ಮಾಡಬೇಕೆಂಬುದು ನಮ್ಮ ವ ಎಂದಿರುವ ಪ್ರಶ್ನೆ. ಒದು ವೇಳೆ ಇದರಿಂದ ಒಳ್ಳೆಯ ದಾಗುವುದಾದರೆ ಭೂಮಿಯನ್ನು ಹಂಚಿಬಿಡೋಣ. ಇದಕ್ಕೆ ಖಂಡಿತವಾಗಿ ನನ್ನ ಅಭ್ಯಂತರವಿಲ್ಲ. ಪ್ರತಿಯೊ ಬ್ಬನೂ ವ್ಯವಸಾಯ ಮಾಡುವವನಾಗಿರುವ ಪರಿಸ್ಥಿತಿ ನಮ್ಮಲ್ಲಿರಬೇಕೆಂದಮೇಲೆ ಒಂದೊಂದು ಹೋಲ್ಡಿಂಗ್ ಎರಡು ಮೂರು ಎಕರೆ ಇರುವುದನ್ನು ಬಿಟ್ಟುಬಿಡಬೇಕೆ

(SRI H. M. CHANNABASAPPA)

ಅಥವ 10—12 ಎಕರೆ ಇರಬೇಕೆ, ಅಥವ 500—600 ಎಕರೆ ಇರಬೇಕೆ ಎನ್ನುವುದು ಪ್ರಶ್ನೆ. ಕೋ-ಆಪರೇಟಿವ್ ಫಾರ್ಮಿಂಗ್ ಪ್ರಶ್ನೆ ಬೇರೆಇದೆ. ಇದಕ್ಕೆ ಚೈನಾದ ಉದಾಹರಣೆಯನ್ನು ಕೊಟ್ಟರೆ ಬಹುಶಃ ಚೆನ್ನಾಗಿ ಅರ್ಥವಾಗುತ್ತದೆ. ಮೊದಲು Peasant farming ಆಗಬೇಕೆಂದು ಅಲ್ಲಿ 110 ಮಿಲಿಯನ್ ಜನರಿಗೆ 300 ಮಿಲಿಯನ್ ಎಕರೆಗಳನ್ನು ಹಂಚಿದರು. ಎಂದರೆ ಒಬ್ಬನಿಗೆ ಮೂರು ಎಕರೆ ಬಂದಹಾಗಾಯಿತು. ಇದರಿಂದ ಒಂದೇ ವರ್ಷದಲ್ಲಿ ಉತ್ಪತ್ತಿ ಕೆಳಕ್ಕೆ ಬಂತು. ದೇಶದಲ್ಲಿ ಪರಿಸ್ಥಿತಿ ಕೆಟ್ಟುಹೋಯಿತು. ಹೀಗೆ ಸಣ್ಣ ಸಣ್ಣ ಭಾಗಮಾಡಿ ಹಂಚುವುದು ಸರಿಯಲ್ಲವೆಂದರಿತು ಪರಸ್ಪರ ಒಡಂಬಡಿಕೆಯಿಂದ ಕೋ-ಆಪರೇಟಿವ್ ಫಾರ್ಮಿಂಗ್ ವ್ಯವಸ್ಥೆ ಮಾಡಿದರು.

I would like to read a small passage from the Report of the Indian Delegation to China on Agricultural Planning and Techniques. It is on page 106.

"As a result of land reform, agricultural holdings in China became extremely small. Without larger units, a continuous increase in agricultural production could not be envisaged. The conditions for a steady rise in agricultural output in the ordinary course did not exist....."

4-30 P.M.

"... The Chinese have adopted a policy of rapid industrialization with special emphasis on the building up of heavy and basic industries, machine-building and defence. In such development, no small part of the burden of industrialization falls on peasants — a burden, the Chinese authorities feel, the peasants cannot discharge if they continue with their individual holdings, each ploughing his land with his limited resources and selling his small surplus. Thus, the pattern of industrialization of a country dictates to no small extent the pattern of agricultural development and the structure of the rural economy.

"No less important than these technical and economic considerations was the view held by the leaders of the Communist Party that a socialist society could not be built up unless co-operative farming took the place of peasant-proprietorship and step by step all vestiges of individual ownership in land were discarded. As they put it 'the nation could not stand with one foot on socialistic industry and the other on a peasant economy.' Or in the words of Chairman Mao Tse-Tung, 'if positions in the countryside are not held by socialism capitalism will assuredly occupy them.' Furthermore, apart from considerations of national defence, unless agriculture itself in due course begins to employ improved techniques, including machines, the building up of basic industries and of machine building industries creates its own difficulties. The mechanisation of agriculture, over whatever period it may be achieved, requires relatively large farms so that in each country embarking upon a course, the pooling of the bulk of peasant holdings is a path difficult to escape."

AN HON'BLE MEMBER.—What is the point that the Hon'ble Member is referring to?

SRI H. M. CHANNABASAPPA.—If the Hon'ble Member has patience I shall say that.

ಇದನ್ನೆಲ್ಲಾ ಏತಕ್ಕೋಸ್ಕರ ಓದಿ ಹೇಳಿದೆನೆಂದರೆ, ನಾವು ನಮ್ಮ ದೇಶದಲ್ಲಿಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಕೈಗಾರಿಕೆಗಳ ಬೆಳವಣಿಗೆಯಾಗಿ ಉನ್ನತ ಮಟ್ಟದಲ್ಲಿರುವಂತಾದರೆ ದೇಶದಲ್ಲಿಯ ಜನಗಳಿಗೆಲ್ಲರಿಗೂ ಉದ್ಯೋಗ ಸಿಕ್ಕುವಂತಾಗುತ್ತದೆ. ಆದರಿಂದ ವ್ಯವಸಾಯದ ಉತ್ಪತ್ತಿಯೂ ಸಹ ಬೆಳೆಯುತ್ತದೆ. ಈ ವ್ಯವಸಾಯದ ಉತ್ಪತ್ತಿಯು ಹೆಚ್ಚಾಗ ಬೇಕಾದರೆ ಕೇವಲ ಸಣ್ಣ ಪುಟ್ಟ ಪ್ರಮಾಣದಲ್ಲಿ ಹಿಡುವಳಿಗಳನ್ನು ಮಾಡುವುದರಿಂದ ಆಗುವುದಿಲ್ಲ. ಸಣ್ಣ ಪುಟ್ಟ ಪ್ರಮಾಣದಲ್ಲಿರುವ ಹಿಡುವಳಿಗಳಿಂದ ವ್ಯವಸಾಯದ ಉತ್ಪತ್ತಿ ಹೆಚ್ಚಾಗುವುದು ಕಷ್ಟ.

ಶ್ರೀ ವೈ. ವೀರಪ್ಪ.—ಜಪಾನ್ ದೇಶದಲ್ಲಿ ಏನು ಅಭಿಪ್ರಾಯವಿದೆ ಎಂಬುದನ್ನು ತುಲನಾತ್ಮಕವಾಗಿ ಪರಿಶೀಲನೆಮಾಡಿ ನೋಡಿದ್ದೀರಾ?

SRI H. M. CHANNABASAPPA.—I come to Japan also in due course; since you have raised that question I will answer.

ಚೀನಾ ದೇಶದಲ್ಲಿಯ ಘಟನೆಗಳು ಇಲ್ಲಿನ ಭೂಸುಧಾರಣೆಯ ರೀತಿಗಳ ಮೇಲೆ ಸಾಕಷ್ಟು ಪ್ರಭಾವ ಬೀರಿವೆ ಎಂದು ನಾನು ತಿಳಿದಿದ್ದೇನೆ. ಚೀನಾ ದೇಶದಲ್ಲಿ ವ್ಯವಸಾಯದ ಉತ್ಪತ್ತಿ ಹೆಚ್ಚಾಗಲು ಅಲ್ಲಿನ ರಾಜಕೀಯ ವ್ಯವಸ್ಥೆಯೂ ಕಾರಣವಾಗಿದೆ. ಅದುದ

ರಿಂದ ಚೀಣಾದಲ್ಲಿ ವ್ಯವಸಾಯದ ಉತ್ಪತ್ತಿ ಯಾವ ರೀತಿಯಾಗಿ ಹೆಚ್ಚಾಗಿದೆ ಎಂಬುದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಬೇಕಾಗಿದೆ. ದೇಶದಲ್ಲಿ ಕೈಗಾರಿಕೆಗಳ ಬೆಳವಣಿಗೆ ಯಾಗಬೇಕಾದರೆ ಮೊದಲು ವ್ಯವಸಾಯದ ಬೆಳವಣಿಗೆಯಾಗಬೇಕು. ಈ ವಿಷಯ ದಲ್ಲಿ ನಮ್ಮದು ಒಂದು ರೀತಿಯ ಅನುಭವವಿರಬಹುದು. ನಮ್ಮ ಅನುಭವವನ್ನು ಅವರಿಗೆ ಕೊಡೋಣ. ಅವರ ಅನುಭವವನ್ನು ನಾವು ತೆಗೆದುಕೊಳ್ಳೋಣ. ಎರಡು ಮೂರು ಎಕರೆಯಾದರೂ ಚಿಂತೆಯಿಲ್ಲ. ಸಣ್ಣ ಸಣ್ಣ ಹಿಡುವಳಿಗಳನ್ನು ಮಾಡಿ ಭೂಮಿಯನ್ನು ಹಂಚಿಬಿಡೋಣ ಎಂಬುದು ಅಷ್ಟೊಂದು ಸರಿಯಾದ ಅಭಿಪ್ರಾಯವಲ್ಲ ಎಂದು ನಾನು ತಿಳಿಯುತ್ತೇನೆ.

Sri S. D. KOTHAVALE.—The Jatti Committee Report has not said that.

Sri H. M. CHANNABASAPPA.—I have not yet come to Jatti Committee Report.

ಸಣ್ಣ ಪುಟ್ಟ ಹಿಡುವಳಿಗಳು ಹೆಚ್ಚಾಗುವುದರಿಂದ, ಉತ್ಪತ್ತಿ ಹೆಚ್ಚಾಗದೆ ದೇಶಕ್ಕೆ ತೊಂದರೆಯಾಗುತ್ತದೆಂದು ನನ್ನ ಅಭಿಪ್ರಾಯ. ಜತ್ತಿ ಸಮಿತಿ ವರದಿಯಲ್ಲಿ ಈ ವಿಷಯವನ್ನು ಅಷ್ಟು ಸಮಂಜಸವಾಗಿ ವಿವೇಚಿಸಿಲ್ಲ.

Sri J. B. MALLARADHYA.—The Hon'ble Member must take the basic holding, family holding or the ceiling fixed or proposed to be fixed in the Report and compare the conditions either in Japan or China. Otherwise he will be misleading by saying distribute 1½ to one hundred millions as in China. But that is not what we are proposing to do here. I want him to take what exactly is the recommendation of the Report and then compare with the foreign countries. It would be helpful.

Sri H. M. CHANNABASAPPA.—I shall try to convince him.

ಆದುದರಿಂದ ನಾವು ಭೂಮಿಯ ಹಿಡುವಳಿಗಳನ್ನು ಇನ್ನು ಸಣ್ಣದಾಗಿ ಮಾಡತಕ್ಕಂಥ ಮಾರ್ಗ ಅನುಸರಿಸುವುದಾದರೆ ಖಂಡಿತವಾಗಿ ಉತ್ಪತ್ತಿಗೆ ಧಕ್ಕೆ ಯಾಗುತ್ತದೆ. ಆದಕಾರಣ ಈ ವಿಷಯದಲ್ಲಿ ಹೆಚ್ಚಾಗಿ ನಾನು ಹೇಳಬೇಕಾಗಿಲ್ಲ.

ಈ ಜತ್ತಿ ಸಮಿತಿ ವರದಿಯಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ತೀರ್ಮಾನಮಾಡುವುದಕ್ಕೆ ಅನೇಕ ಶಿಫಾರಸುಗಳನ್ನು ಮಾಡಲಾಗಿದೆ. ಈ ಶಿಫಾರಸುಗಳಲ್ಲಿ ಅನೇಕ ಲೋಪದೋಷಗಳು ಇವೆ. ಈ ಲೋಪದೋಷಗಳಿಗೆ ಸಮಿತಿಯು ಹೊಣೆಯಲ್ಲ. ಅದಕ್ಕೆ ನಿಜವಾಗಿಯೂ ಸಮಿತಿಗೆ ಇರುವ ಸನ್ನಿವೇಶವೇ ಕಾರಣ. ಎರಡು ತಿಂಗಳುಗಳಲ್ಲಿ ಅಂದರೆ 60 ದಿವಸಗಳಲ್ಲಿ ರಾಜ್ಯದಾದ್ಯಂತವೆಲ್ಲಾ ತಿರುಗಾಡಿ ಇಂಥ ಅತ್ಯಂತ ಜಟಿಲವಾದ ಭೂಸಮಸ್ಯೆಯನ್ನು ಪರಿಶೀಲಿಸಿ ಎಲ್ಲವನ್ನೂ ಕ್ರೋಡೀಕರಿಸಿ ವರದಿಯನ್ನು ಒಪ್ಪಿಸಬೇಕೆಂದು ಹೇಳಿದರೆ ಅವರು ಏನು ಮಾಡಬಲ್ಲರು ? ಸಮಿತಿಯವರು ಕಳಿಸಿದ ಪ್ರಶ್ನಾವಳಿಗಳಿಗೆ ಐದು ಸಾವಿರಕ್ಕಿಂತ ಹೆಚ್ಚಾಗಿ ಉತ್ತರಗಳು ಬಂದಿವೆ. ಈ ಉತ್ತರಗಳನ್ನೆಲ್ಲ ಪರಿಶೀಲನೆ ಮಾಡುವುದಕ್ಕೆ ಆರು ತಿಂಗಳು ಬೇಕಾಗಬಹುದು. ಬೇರೆ ಬೇರೆ ಪ್ರದೇಶಗಳಿಂದ ಬೇರೆ ಬೇರೆ ಪರಿಹಾರೋಪಾಯಗಳ ಸೂಚನೆಗಳು ಬಂದಿವೆ. ಈ ಸೂಚನೆಗಳನ್ನೆಲ್ಲಾ ಪರಿಶೀಲನೆ ಮಾಡಬೇಕಾಗಿದೆ. ಕೇವಲ ಪ್ರತಿಯೊಂದು ಪ್ರದೇಶದಲ್ಲಿ ಹೇಳಿದ ಅನೇಕ ವಿಷಯಗಳನ್ನು ಗ್ರಹಣ ಮಾಡುವುದಕ್ಕೇ ಹೆಚ್ಚು ಕಾಲಬೇಕು. ಅವನ್ನು ಪರಿಶೀಲನೆ ಮಾಡುವುದು ಇನ್ನೂ ಹೆಚ್ಚು ಕಷ್ಟವಾಗಿರಬಹುದು. ಮೊದಲನದಕ್ಕಿಂತ ಎರಡು ತಿಂಗಳ ಅವಧಿಯನ್ನು ಹೆಚ್ಚಿಗೆ ಸಮಿತಿಗೆ ಕೊಟ್ಟಿದ್ದರೂ ಅದು ಸಾಕಷ್ಟು ಆಗಿರುವುದಿಲ್ಲ. ಜತ್ತಿ ಸಮಿತಿಯವರು ಒಪ್ಪಿಸಿದ ವರದಿಯನ್ನು ನಾವು ಈಗ ಪರಿಶೀಲನೆ ಮಾಡಬೇಕಾಗಿದೆ. ಜತ್ತಿ ಸಮಿತಿಯವರು ಯಾವ ಒರೆಗಲ್ಲನ್ನು ಇಟ್ಟುಕೊಂಡು ಈ ಶಿಫಾರಸುಗಳನ್ನು ಮಾಡಿದ್ದಾರೆಯೇ ಅಂಥ ಒರೆಗಲ್ಲನ್ನು ನಾವು ಮೊದಲು ಪರಿಶೀಲನೆ ಮಾಡಬೇಕಾಗಿದೆ. The Committee have enunciated the following as the main objectives of tenancy reform :—

(1) The elimination of the landlord-tenant relationship,

and

(2) redistribution of land to satisfy the aspiration of the landless.

ಜತ್ತಿ ಸಮಿತಿಯ ಮೊದಲನೆಯ ಶಿಫಾರಸನ್ನು ಒಪ್ಪಿಕೊಂಡರೆ ದೇಶದಲ್ಲಿ ವ್ಯವಸಾಯ ಉತ್ಪತ್ತಿ ಹೆಚ್ಚುವುದಿಲ್ಲ. ಎರಡನೆಯ ಶಿಫಾರಸನ್ನು ಕುರಿತು ಹೇಳುವುದಾದರೆ ರೈತಾಪಿ ಜನರೂ ಸಹ ಮನುಷ್ಯರಾಗಿರುವುದರಿಂದ ಎಲ್ಲಾ ಭೂಮಿಯನ್ನೂ ಕಷ್ಟಪಟ್ಟು ಸಂಪೂರ್ಣವಾಗಿ ಸಾಗುವಳಿಮಾಡಿ ಹೆಚ್ಚು ಉತ್ಪತ್ತಿ ಬರುವ ಹಾಗೆ ಒಂದು ವಾತಾವರಣವನ್ನು ಕಲ್ಪಿಸಬೇಕಾಗಿದೆ. ಸಮಾಜದಲ್ಲಿ ಎಲ್ಲರಿಗೂ ಸಮಾನವಾಗಿ ನ್ಯಾಯ ದೊರಕಬೇಕು. ಗ್ರಾಮಗಳಲ್ಲಿರುವ ಮುಂದಾಳುಗಳು ಮುಂದೆ ಬಂದು ಮುಂದಾಳುತನವನ್ನು ವಹಿಸಿ ವ್ಯವಸಾಯೋತ್ಪತ್ತಿ ಹೆಚ್ಚಾಗುವ ರೀತಿಯಲ್ಲಿ ಸಹಾಯ ಮಾಡುವುದು ಅವಶ್ಯಕವಾಗಿದೆ. ಆ ರೀತಿ ಒಂದು ಪರಿಣಾಮವನ್ನು ಉಂಟುಮಾಡತಕ್ಕಂಥಾದ್ದು ಏನಾದರೂ ಈ ವರದಿಯಲ್ಲಿ ಇದೆಯೇ ? ಈ ವ್ಯವಸಾಯ ಕ್ಷೇತ್ರಕ್ಕೆ ಒಂದು ಉತ್ತಮ ದರ್ಜೆಯಸ್ಥಾನ ದೊರೆತು ಜನರು ಆದರಿಸುವಂತೆ ಮಾಡುವುದಕ್ಕೆ ಏನಾದರೂ ಈ ಶಿಫಾರಸುಗಳ ಮೂಲಕ ಏರ್ಪಾಡು ಆಗಿದೆಯೇ ಎನ್ನುತಕ್ಕಂಥಾದ್ದು ಇನ್ನೊಂದು ವಿಷಯ. ಗ್ರಾಮಾಂತರ ಗಳಲ್ಲಿಯ ಜನರು ವ್ಯವಸಾಯದ ಬಗ್ಗೆ ಮುಂದಾಳುತನ ವಹಿಸಲು ಏನಾದರೂ ಮಾಡಲಾಗಿದೆಯೇ ?

ಉತ್ತಮ ದರ್ಜೆಯ ಜನ, ದಕ್ಷತೆಯಿಂದ ವ್ಯವಸಾಯ ಮಾಡುವ ಜನ, ಬುದ್ಧಿಶಕ್ತಿಯಿಂದ ಕೆಲಸಮಾಡುವ ಜನ ಆಕರ್ಷಿತರಾಗಿ ಬರುವುದಕ್ಕೆ ಅವಕಾಶವಿರಬೇಕು. ಒಂದುವೇಳೆ ಈ ಶಿಫಾರಸುಗಳನ್ನು ನಾವು ಅನುಕರಣೆ ಮಾಡುವುದರಿಂದ ಆ ಉದ್ದೇಶ ಪೂರೈಕೆಯಾಗುವ ಪಕ್ಷದಲ್ಲಿ ಅಗತ್ಯವಾಗಿಮಾಡಿ. ಮುಖ್ಯವಾಗಿ ಪ್ರತಿಯೊಂದು ಶಿಫಾರಸ್ಸನ್ನೂ ಈ ಒರೆಗಲ್ಲಿನಲ್ಲಿ ಪರಿಶೀಲನೆಮಾಡಿ ಸರಿಯಾಗಿದ್ದರೆ ಒಪ್ಪಿಕೊಳ್ಳೋಣ. ಒಂದುವೇಳೆ ಹೆಚ್ಚು ಕಡಮೆಯಿದ್ದರೆ ಸರಿಪಡಿಸೋಣ; ಅಥವಾ ಇನ್ನೂ ಮುಂದೆ ಹೋಗಿ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡೋಣ. ಈ ಶಿಫಾರಸ್ಸುಗಳನ್ನು ಪರಿಶೀಲಿಸುವಾಗ ಸ್ಥಳದ ವಿದ್ಯಮಾನಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು.

(SRI H. M. CHANNABASAPPA)

ಈಗ ನಮ್ಮಲ್ಲಿ ಏನಾಗಿದೆ? ಒಂದು ಕಡೆ ಜತ್ತಿ ಸಮಿತಿಯ ರಿಪೋರ್ಟಿನಲ್ಲೇ ಹೇಳಿದ್ದಾರೆ, ಎಲ್ಲೆಲ್ಲಿ ಹೊಸದಾಗಿ ಈ ರೀತಿಯ ಶಾಸನಗಳನ್ನು ಜಾರಿಗೆ ತಂದೆಪ್ಪೋ, ಅಲ್ಲಿ tenancy problem ಬಹಳ ಉತ್ಕಟವಾಗಿದೆ. ಇದು ತಪ್ಪು ಅಭಿಪ್ರಾಯ. ಅಂಕಿ ಅಂಶಗಳಿಂದ ಇದು ಹೊರಬೀಳುವುದಿಲ್ಲವೆಂದು ನಾನು ವಿನಯದಿಂದ ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಇತ್ತೀಚೆಗೆ ಈ ಶಾಸನಗಳು ಬಂದಿವೆ. ಹೈದರಾಬಾದಿನಲ್ಲಿ, ಬೊಂಬಾಯಿನಲ್ಲಿ ಬಹಳ ವರ್ಷಗಳಿಂದ ಇತ್ತು. ವಾಸ್ತವವಾಗಿ ನೋಡಿದರೆ, ಹಳೆಯ ಮೈಸೂರು ಸಂಸ್ಥಾನದಲ್ಲಿ ಚೆನೈನ್ ಪ್ರಶ್ನೆ ಹೈದರಾಬಾದ್, ಬೊಂಬಾಯಿ ಪ್ರದೇಶದಲ್ಲಿರುವಂತೆ ಇಲ್ಲವೇ ಇಲ್ಲ. ಹೀಗಿರುವಲ್ಲಿ, ಈ ಅಭಿಪ್ರಾಯವನ್ನೇ ತಳಹದಿಯಾಗಿಟ್ಟುಕೊಂಡು ಚರ್ಚೆ ಮಾಡುತ್ತಾ ಹೋದರೆ, ನಮ್ಮ ಚರ್ಚೆ futile ಆಗುತ್ತದೆ. ಹೈದರಾಬಾದಿನಲ್ಲಿ, ಬೊಂಬಾಯಿನಲ್ಲಿ ಮತ್ತು ಹಳೆಯ ಮೈಸೂರಿನ ಭಾಗದಲ್ಲಿ ಎಷ್ಟೆಷ್ಟು ಭೂಮಿಯನ್ನು ಬೇಸಾಯಕ್ಕೆ ಗೇಣಿಗೆ ಕೊಟ್ಟಿದ್ದಾರೆಂಬುದನ್ನು ನೋಡಿ. 1955-56ನೆಯ Statistics ಪ್ರಕಾರ 61,36,000 ಎಕರೆಗಳಷ್ಟು ಗೇಣಿ ಜಮೀನಿದೆ. ಸರ್ಕಾರದವರು ಇತ್ತೀಚಿನ ಅಂಕಿಅಂಶಗಳನ್ನು ಓದಗಿಸಿದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ ಈ ಶಾಸನಗಳು ಜಾರಿಯಲ್ಲಿರುವುದರಿಂದಲೂ ಮತ್ತು ಇತರ ನಾನಾ ಕಾರಣಗಳಿಂದಲೂ ಅನೇಕ ಬದಲಾವಣೆಗಳು ಆಗುತ್ತಿರುತ್ತವೆ. ಈಗ ಬೇರೆ Statistics ನಮ್ಮಲ್ಲಿ ಇಲ್ಲದಿರುವುದರಿಂದ ಈ ಹಳೆಯದನ್ನೇ ಆಧಾರವಾಗಿಟ್ಟುಕೊಂಡು ನಾನು ಹೇಳಬೇಕಾಗಿದೆ. ಹೀಗೆ ನಮ್ಮಲ್ಲಿರುವ 61 ಲಕ್ಷ 36 ಸಾವಿರ ಎಕರೆ ಗೇಣಿಗೆ ರಾಯಕ್ಕಾದ ಜಮೀನುಗಳಲ್ಲಿ ಮೈಸೂರಿನಲ್ಲಿ 6 ಲಕ್ಷ 83 ಸಾವಿರ ಎಕರೆಗಳನ್ನು ಮಾತ್ರ ಗೇಣಿಗೆ ಕೊಟ್ಟಿದ್ದಾಗಿದೆ; ಬೊಂಬಾಯಿನಲ್ಲಿ ನಾಲ್ಕೂವರೆ ಲಕ್ಷ ಎಕರೆ ಕೊಟ್ಟಿದ್ದಾರೆ; ಹೈದರಾಬಾದಿನಲ್ಲಿ ನಾಲ್ಕೂವರೆ ಲಕ್ಷ ಎಕರೆ ಕೊಟ್ಟಿದ್ದಾರೆ. ಮದರಾಸಿನಲ್ಲಿ ಒಂದು ಲಕ್ಷದಷ್ಟು ಎಕರೆ ಕೊಟ್ಟಿದ್ದಾರೆ; ಅಲ್ಲಿಗೆ ಒಟ್ಟಿನಲ್ಲಿ ಯಾವ ಪ್ರಮಾಣದಲ್ಲಿ ಗೇಣಿಗೆ ಜಮೀನುಗಳನ್ನು ಕೊಡಲಾಗಿದೆಯೆಂಬುದು ವ್ಯಕ್ತಪಡುತ್ತಿದೆ. ನಾನು ಹೋದ ಸಲ ಮಾತನಾಡುವಾಗಲೂ ಇದೇ ವಿಚಾರವನ್ನು ಹೇಳಿದೆ. ಇನ್ನು ಸ್ವಂತ ಬೇಸಾಯ ಮಾಡತಕ್ಕ ಒಬ್ಬ ಮನುಷ್ಯನ ಕೈಯಲ್ಲಿ ಎಷ್ಟಿದೆ, ಗೇಣಿ ಮಾಡತಕ್ಕ ಮನುಷ್ಯನ ಕೈಯಲ್ಲಿ ಎಷ್ಟಿದೆಯೆಂಬುದನ್ನು ನೋಡೋಣ. ಈ ಬಗ್ಗೆ ಹೋದ ವರ್ಷ ನಾನು ಅಂಕಿಅಂಶಗಳನ್ನು ಕೊಟ್ಟಿದ್ದು ತಮಗೆ ಜ್ಞಾಪಕವಿರಬಹುದು. ಒಂದೊಂದು ಜಿಲ್ಲೆಯನ್ನೂ ನೋಡೋಣ. ಬಿಜಾಪುರ ಜಿಲ್ಲೆಯಲ್ಲಿ ಬಹಳವಾಗಿ ಗೇಣಿಯ ಸಮಸ್ಯೆಯಿದೆ. ಸರಾಸರಿ ಒಬ್ಬೊಬ್ಬ ಗೇಣಿಮಾಡತಕ್ಕವನ ಹಿತ್ತರ 75 ಎಕರೆಗಳವೆ.

ಒಬ್ಬ ಸದಸ್ಯರು.—ಹೇಗೆ ಹೇಳುತ್ತಿದ್ದೀರಿ? ಖುಷ್ಕಿಯೂ ಸೇರಿಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನಲ್ಲಿರುವ ಅಂಕಿಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಖುಷ್ಕಿ, ತರಿ ಎಲ್ಲವೂ ಸೇರಿರಬಹುದು. ಅಂತು ಬಿಜಾಪುರ ಜಿಲ್ಲೆಯಲ್ಲಿ ಸರಾಸರಿ 75 ಎಕರೆಯಷ್ಟಿದೆ. ಅದೇ ಜಿಲ್ಲೆಯಲ್ಲಿ ವಾಸ್ತವವಾಗಿ ಬೇಸಾಯಮಾಡತಕ್ಕವನ ಕೈಯಲ್ಲಿ 16 ಎಕರೆಗಳು ಮಾತ್ರ ಇವೆ. ರಾಯಚೂರು ಡಿಸ್ಟ್ರಿಕ್ಟ್ ತೆಗೆದುಕೊಂಡರೆ, ಗೇಣಿ ಮಾಡತಕ್ಕವನ ಕೈಯಲ್ಲಿ 54 ಎಕರೆಯಿದೆ; ಸ್ವಂತ ಬೇಸಾಯಮಾಡತಕ್ಕವನ ಕೈಯಲ್ಲಿ 22½ ಎಕರೆಯಿದೆ. ಗುಲ್ಬರ್ಗದಲ್ಲಿ ಗೇಣಿಮಾಡತಕ್ಕವನ ಕೈಯಲ್ಲಿ 54 ಎಕರೆಯಿದೆ, ಸ್ವಂತ ಬೇಸಾಯ ಮಾಡತಕ್ಕವನ ಕೈಯಲ್ಲ 27 ಎಕರೆಯಿದೆ.

ಒಬ್ಬ ಸದಸ್ಯರು.—ಎಲ್ಲಾ ಅಣ್ಣಾವಜ್ಜೆಗಾರ್ರೇ ಜಾಸ್ತಿ!!

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಅಂಕಿಅಂಶಗಳನ್ನು ನೀವೇ ಪರಿಶೀಲನೆಮಾಡೋಣವಾಗಲಿ. ಒಂದು ವೇಳೆ ಅಲ್ಲಿನವರು ಅಷ್ಟು ಉತ್ತಮವಾದ ಕಾನೂನನ್ನು, ಬಹಳ ಮುಂದುವರಿದಂಥ ಕಾನೂನನ್ನು ಅಲ್ಲಿ ಜಾರಿಗೆ ತಂದಿದ್ದಾರೆಂದರೆ, ಅಲ್ಲಿ ಆಗ್ಗೆ ಬಹಳ ಅವಶ್ಯಕವಾಗಿತ್ತು ಎಂದು ಗೊತ್ತಿತ್ತು. ಆದಾದ ಮೇಲೆ ಆ ಪ್ರದೇಶಗಳು ಮೈಸೂರಿಗೆ ಬಂದುವು. ಅಲ್ಲಿ ಏಪ್ರಿಲ್ ಒಂದನೆಯ ತಾರೀಖಿನ ಮೇಲೆ ಭೂಮಿ ಯಾರಿಗೆ ಹೋಗಬೇಕೆಂದು ಅಲ್ಲಿನ ಶಾಸನ ಸಭೆಗಳು ತೀರ್ಮಾನ ತೆಗೆದುಕೊಂಡವು. ಈ ಬಗ್ಗೆ ಇಲ್ಲಿಯೂ ಅನೇಕ ಸದಸ್ಯರು ಮಾತನಾಡಿದರು; ಅದಕ್ಕೆ ರೆವಿನ್ಯೂ ಮಂತ್ರಿಗಳೂ ಒಪ್ಪಿಗೆ ಕೊಟ್ಟರು. ನಾನೀಗ ಪ್ರಶ್ನೆ ಮಾಡುವುದೇನೆಂದರೆ, ಅದು ಬಹಳ ಮುಂದುವರಿದ ಕಾನೂನಾದರೆ ಅದನ್ನೇಕೆ ಬೇಡ ಎನ್ನುತ್ತೀರಿ? ಏಪ್ರಿಲ್ ಒಂದನೆಯ ತಾರೀಖಿನ ದಿವಸ ಯಾವಯಾವ ಜನಗಳ ಕೈಯಲ್ಲಿ ಭೂಮಿಯಿತ್ತೋ, ಅವರಿಗೇ ಅದಾಗಬೇಕೆಂದು ಬೊಂಬಾಯಿ ಶಾಸನ ಸಭೆ ಒಪ್ಪಿತು. ಅಂದಮೇಲೆ, ಅದು ಉತ್ತಮವಾದದ್ದು, ಅನುಕೂಲವಾದದ್ದು ಎಂದದ್ದೇ ಆದರೆ ಅದನ್ನೇಕೆ ಇಲ್ಲಿ ನಿಲ್ಲಿಸಿದಿರಿ? ಹಳೆಯ ಮೈಸೂರಿನಲ್ಲಿ ಇಲ್ಲ, ಕೊಡಗಿನಲ್ಲಿ ಇಲ್ಲ, ಆದ್ದರಿಂದ ಅದು ಇಲ್ಲಿಯೂ ಬೇಡ ಎನ್ನುವುದೇಕೆ? ಒಂದು ಕಡೆ ಈ ಕಾನೂನು ಮುಂದುವರಿದ ಕಾನೂನು, ಬಹಳ ಪ್ರಗತಿದಾಯಕವಾದದ್ದು ಎಂದು ವಾದಿಸುವುದೂ, ಇನ್ನೊಂದು ಕಡೆ ಈ ಕಾನೂನು ಬೇಡ ಎನ್ನುವುದೂ ಸರಿಯಲ್ಲ. ಈ ಹೊತ್ತು ಇಡೀ ಬೊಂಬಾಯಿ ಪ್ರಾಂತದ ಜನರಿಗೆ ಒಂದು ಆಶಾಕಾಂಕ್ಷೆಯನ್ನು ತೋರಿಸಿದ್ದೀರಿ; ಇಂಥ ದಿವಸ ಬರುತ್ತದೆಂದು ಆಶ್ವಾಸನ ಕೊಟ್ಟಿದ್ದೀರಿ. ಈ ಹೊತ್ತು ಆ ಕಾನೂನು ಬೇಡ, ಬೇರೊಂದು ಶಾಸನ ಮಾಡುತ್ತೇವೆಂದರೆ ಅಲ್ಲಿಗೆ, ಹಿಂದೆ ಕೊಟ್ಟ ವಾಗ್ದಾನ ಏನಾಯಿತು? Uniform Law ಆಗಬೇಕೆಂದು ಹೇಳಿ, ಬೊಂಬಾಯಿನಲ್ಲಿ ಈ ರೀತಿ ಆಗಿದೆಯೆಂದು ಹೇಳಿ ಇಲ್ಲಿಯೂ ತನ್ನಿ ಎಂದು ಹೇಳುತ್ತೀರಾ? ನಾವು ಬೊಂಬಾಯಿನಲ್ಲಿ ಆ ರೀತಿ ತೀರ್ಮಾನ ತೆಗೆದುಕೊಂಡಿದ್ದೇವೆ ಎಂದು ಹೇಳಿ ಕೊಡಗಿನಲ್ಲಿಯೂ ಅದೇ ರೀತಿ ಮಾಡಿ ಎನ್ನುವುದು ಸರಿಯೇ? ನಿಮಗೆ 108 ಡಿಗ್ರಿ ಜ್ವರ ಬಂದಿದೆಯೆಂದುಕೊಂಡು ಇಂಜೆಕ್ಷನ್ ತೆಗೆದುಕೊಂಡರೆ, ನೀವೂ ಅದೇ ರೀತಿ ಇಂಜೆಕ್ಷನ್ ತೆಗೆದುಕೊಳ್ಳಿರಿ ಎನ್ನುವುದರಲ್ಲಿ ಅರ್ಥವೇನು? ನಿಮ್ಮ ಉದ್ದೇಶವಾದರೂ ಜನಗಳಿಗೆ ಭೂಮಿ ಸಿಕ್ಕಿ ಅವರು ಚೆನ್ನಾಗಿ ಬೇಸಾಯಮಾಡುವಂತಾಗಲಿ ಎಂಬುದು. ಅದನ್ನು ಸಾಧಿಸುವುದದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡಬೇಕೇ ಹೊರತು ಅದಕ್ಕೊಂದು ರಾಜಕೀಯ ಬಣ್ಣವನ್ನು ಕೊಡುವುದು ಸರಿಯಲ್ಲ. ಇದೊಂದು ರಾಜಕೀಯ ರಂಗವಾಗಬಾರದು. ಒಂದುವೇಳೆ ಶ್ರೀ ಚನ್ನಬಸಪ್ಪನವರ ಜಮೀನೇ ಹೋಗಬಹುದು; ಅಥವಾ ಇನ್ನೊಬ್ಬರದೇ ಹೋಗಬಹುದು. ಅದು ಪ್ರಾಮುಖ್ಯವಲ್ಲ. ನಾಳೆ ದಿವಸ ದೇಶಕ್ಕೆ ಒಳ್ಳೆಯದಾಗಬೇಕಾದದ್ದು ಮುಖ್ಯ.

ಈಗ ಅನೇಕ ಜನಗಳಲ್ಲಿ ಒಂದು ತಪ್ಪಭಿಪ್ರಾಯವಿದೆ. ಅದನ್ನು ತೆಗೆಯಬೇಕೆಂಬುದೇ ನನ್ನ ಆಸೆ. ಶ್ರೀ ಚನ್ನಬಸಪ್ಪನವರಿಗೆ ಬಹಳ ಜಮೀನಿದೆಯೆಂದು ಹೇಳುತ್ತಾರೆ. ಶ್ರೀ ನರಸಿಂಹರವರು "ಚನ್ನಬಸಪ್ಪನವರು ಜಮೀನುದಾರರ ಕಡೆ ವಾದಿಸುತ್ತಾರೆ" ಎಂದು ನಾನು ಮಾತನಾಡುವುದಕ್ಕೆ ಮುಂಚೆ ಹೇಳಿದರು. I may assure my Hon'ble friend Sri Narasimhan that Channabasappa is not a Zamindar in the sense of the terminology in which he is referring to me. But he is a man who is able to produce wealth. ಈಗ ಇರತಕ್ಕಂಥ ಪ್ರಶ್ನೆಯನ್ನು ಬಿಡಿಸುವಾಗ ಯಾರಿಗೆ ಸಂಬಂಧವಿದೆ, ಯಾರಿಗಿಲ್ಲ ಎಂಬುದನ್ನು ನೋಡೋಣ. ಭೂಮಾಲೀಕರು ತಾವು ಸ್ವತಃ ವ್ಯವಸಾಯಮಾಡದಿದ್ದರೆ ಭೂಮಿಯನ್ನಿಟ್ಟುಕೊಂಡು dog in the manger policy ಅನುಸರಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ. ಅಂದ ಮೇಲೆ ಇನ್ನು ಚೆನೆನ್ಸಿ ಪ್ರಶ್ನೆ ಏಳುವುದಕ್ಕೆ ಅವಕಾಶವಿದೆ. ಇದಕ್ಕೆ ಒಂದು ಸಲಹೆಯಿದೆ, ಅದರಿಂದ ಸುಲಭವಾಗಿ ಈ ಸಮಸ್ಯೆ ಪರಿಹಾರವಾಗತ್ತದೆ, ಇನ್ನು ಮುಂದೆ ಉಳುವವನೇ ಭೂಮಿಯ ಒಡೆಯ ಎಂದು ಶಾಸನವನ್ನು ಮಾಡಿದರೆ ಸರಿಹೋಗುತ್ತದೆ, ಟೆನೆಂಟ್ ಮತ್ತು ಲ್ಯಾಂಡ್ ಲಾರ್ಡ್ ಎಂದಿರುವವರಿಗೆ ಇಲ್ಲದಿರುವ ಜಾಡ್ಯ ಇದ್ದೇ ಇರುತ್ತದೆ ಎಂದು ಹೇಳುವುದು ಒಂದು ಭ್ರಾಂತಿಯ ಮಾತು. ಎಷ್ಟೋ ಪಾಳು ಭೂಮಿ ಅನೇಕ ಕಡೆ ಇದೆ. The Fallow Lands Act, when it was enacted, I said that it would be a dead letter on the statute book. ಟೆನೆನ್ಸಿ ಲ್ಯಾಂಡ್ ಲಾರ್ಡಿನಂ ಲೆಜಿಸ್ಲೇಷ್ಷ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಈ ವಿಚಾರ ಆಖ್ಯೆರು ಮಾಡಬೇಕು ಎಂದು ಜತ್ತಿ ಸಮಿತಿಯವರೂ ಸಹ ಹೇಳಿದ್ದಾರೆ. ಈ ವಿಷಯದಲ್ಲಿ ನನ್ನ ಸಂಪೂರ್ಣ ಬೆಂಬಲವನ್ನು ಸಮಿತಿಯವರಿಗೆ ಕೊಡುತ್ತೇನೆ. ಲೆಜಿಸ್ಲೇಷ್ಷನಿಂದ ಈ ಚೆನೆನ್ಸಿ ಲ್ಯಾಂಡ್ ಲಾರ್ಡಿಸಂ ಸುಧಾರಣೆ ಮಾಡುವುದರಲ್ಲಿ ನಾವು ಯಶಸ್ವಿಯಾಗಿಲ್ಲವೆಂದು ಹೇಳಿದ್ದಾರೆ. ಇದು ಹೋಗಬೇಕು, ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಚೆನೆನ್ಸಿ ಇರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ, ಮೈನರ್ಸ್, ಹೆಂಗಸರು, ಡಿಸ್‌ಏಬಲ್ಡ್ ಪರ್ಸನ್ಸ್ ಇರುವ ಕಡೆ ವಿನಾಯಿತಿಯಿರಬೇಕು ಎಂದು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇನೆ. ಎಂದಮೇಲೆ ಡಿಸ್‌ಏಬಲ್ಡ್ ಪೀಪಲ್, ಹೆಂಗಸರು, ಮಕ್ಕಳು ಇಂಥವರ ವಿಷಯದಲ್ಲಿ ಮಾತ್ರ ಚೆನೆನ್ಸಿಗೆ ಅವಕಾಶವಿರಬೇಕೇ ವಿನಾ ಚೆನೆನ್ಸಿ ವಿಷಯದಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಡುವುದು ಅನಾವಶ್ಯಕ. ಈ ಸಮಸ್ಯೆಯನ್ನು ನಾವು ಕಾಂಪ್ಲಿಕೇಟ್ ಮಾಡಿದಷ್ಟೂ ಬಡವರಿಗೆ ಕಷ್ಟವಾಗುತ್ತದೆ, ಅವರು ಕೋರ್ಟು ಕಛೇರಿಗಳಿಗೆ ಅಲೆಯಬೇಕಾಗುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಒಂದು ತಾರೀಖನ್ನು ಗೊತ್ತುಮಾಡಿ ಅಲ್ಲೊತ್ತಿನಿಂದಾಚೆಗೆ ಯಾವಯಾವುದಕ್ಕೆ ವಿನಾಯಿತಿ ತೋರಿಸಿದೆಯೋ ಆ ಸಂದರ್ಭಗಳಲ್ಲಿ ಮಾತ್ರ ಚೆನೆನ್ಸಿಗೆ ಅವಕಾಶಕೊಡಿ ಉಳಿದ ಸಂದರ್ಭಗಳಲ್ಲಿ ಅದನ್ನು ಪರಿಗಣಿಸುವುದಿಲ್ಲ ಎಂದು ಶಾಸನಮಾಡಬೇಕು ಎಂಬುದು. ಆಮೇಲೆ ಭೂಮಾಲೀಕರಿಗೆ ಎರಡು ಮಾರ್ಗಗಳು ಮಾತ್ರ ಇರುತ್ತವೆ, ಅವರು ಭೂಮಿಯನ್ನು ಉಳಬೇಕು ಅಥವಾ ಕೊಟ್ಟುಬಿಡಬೇಕು. ಹಾಗಿರುವಾಗ ಶಾಸನದಲ್ಲಿ ಎಷ್ಟತ್ತೆಂಟು ಕಲಮುಗಳೇಕೆ?

Mr. DEPUTY SPEAKER.—The Hon'ble Member's time is up.

Sri H. M. CHANNABASAPPA.—I beg to submit, Sir, that I require a little more time. If the Hon'ble Speaker and the House will bear with me, I shall be much obliged.

Sri B. BASAVALINGAPPA.—Mr. Speaker, Sri Channabasappa just now has placed before the House certain guiding principles which should be before the Jatti Committee, namely, how the Report has helped the growth of personality, how it has helped production, how it has helped rural relation. Let him explain the point further, Sir.

Sri H. M. CHANNABASAPPA.—Nowhere in the Jatti Committee Report do I read a proposal to augment production. I am telling you, but the time is so short. ಈಗ ಮೊದಲು ಚೆನೆನ್ಸಿ ಪ್ರಶ್ನೆಯನ್ನು ಕೊನೆಗಾಣಿಸಬೇಕಾದ್ದು ಉತ್ತಮವಾದುದು; ನಾನು ಇದನ್ನು ಒಪ್ಪುತ್ತೇನೆ. ನೀವು ಹೇಳುವ ಮಾರ್ಗದಲ್ಲಿ ಸ್ವಲ್ಪ ಬದಲಾವಣೆಮಾಡಿ ಒಂದು ತಾರೀಖು ನಿಗದಿಮಾಡಿ ಅಲ್ಲಿಂದಾಚೆಗೆ ಚೆನೆನ್ಸಿ ಇರುವುದನ್ನು ಪರಿಗಣಿಸುವುದಿಲ್ಲ, ವಿನಾಯಿತಿ ತೋರಿಸಿರುವುದಕ್ಕೆ ಮಾತ್ರ ಅವಕಾಶವಿದೆ ಎಂದು ಹೇಳಬೇಕು.

5 P.M.

Sri M. P. PATIL.—The Hon'ble Member has spoken for one hour, the maximum time fixed for him.

Sri H. M. CHANNABASAPPA.—If the Hon'ble Minister thinks that I am overstepping the limit and that my suggestions are not convenient, I request the Chair and the Hon'ble Members to bear with me.

Sri B. D. JATTI (Jamkhandi).—I request the Hon'ble Member to be brief.

Sri H. M. CHANNABASAPPA.—You make your remarks precisely but I take a little more time.

Sri B. D. JATTI.—Please come to the Report.

Sri H. M. CHANNABASAPPA.—I am coming to that.

ಗೇಣಿ ಪ್ರಮಾಣ ಒಟ್ಟು ಉತ್ಪತ್ತಿಯಲ್ಲಿ ನಾಲ್ಕನೆಯ ಒಂದು ಭಾಗ ಮತ್ತು ಐದನೆಯ ಒಂದು ಭಾಗವಿರಬೇಕೆಂದು ಸಮಿತಿ ವರದಿಮಾಡಿದೆ. ನನ್ನ ಅಭಿಪ್ರಾಯದಲ್ಲಿ ಒಬ್ಬ ದೊಡ್ಡ ಜಮೀನ್‌ದಾರನನ್ನು ಮತ್ತಿತರರನ್ನೂ ಒಂದೇ ತಕ್ಕಡಿಯಲ್ಲಿ ಹಾಕುವುದು ಮಾರ್ಪಾಡಾಗಬೇಕು. ವಿನಾಯಿತಿ ವರ್ಗದವರಿಗೆ ಸಂಬಂಧಪಟ್ಟ ಸಂದರ್ಭಗಳಲ್ಲಿ ಗೇಣಿ ಪ್ರಮಾಣವನ್ನು ಮೂರನೆಯ ಒಂದು ಭಾಗದಷ್ಟು ಗೊತ್ತುಮಾಡುವುದು ಧರ್ಮ ಮತ್ತು ನೂಕ್ತ.

(SRI H. M. CHANNABASAPPA)

ಈ ಆಬ್ಸೆಂಟೀ ಲ್ಯಾಂಡ್‌ಲಾರ್ಡ್ಸ್‌ಮ್: ಇವರದೇ ಒಂದು ದೊಡ್ಡ ಪ್ರಶ್ನೆ. ಅವರು ಇರಬೇಕೆ, ಹೋಗಬೇಕೇ, ಏಕೆ ಅವರು ಇರಬಾರದು ಎನ್ನುವ ಪ್ರಶ್ನೆ ದೇಶದ ಮುಂದಿದೆ. "ನಾವು ಏನು ತಪ್ಪು ಮಾಡಿದ್ದೇವೆ. ಕಾನೂನು ಪ್ರಕಾರ ಎಲ್ಲರೂ ಜಮೀನನ್ನು ಇಟ್ಟುಕೊಂಡಿರಬಹುದು" ಎಂದು ಅವರು ಹೇಳುತ್ತಾರೆ. ಈ ಆಬ್ಸೆಂಟೀ ಲ್ಯಾಂಡ್‌ಲಾರ್ಡ್ಸ್ ವಿಚಾರವಾಗಿ ಮಾತನಾಡುವಾಗ ಮಾನ್ಯ ಸದಸ್ಯರಲ್ಲಿ ಒಂದು ವಿಷಯ ವಿನಂತಿಮಾಡಿಕೊಳ್ಳುತ್ತೇನೆ. ಜಮೀನ್‌ದಾರಿ ಪದ್ಧತಿ ಹೊರಟುಹೋಗಲಿ. ಇಲ್ಲಿ ಭೂಮಿಯನ್ನು ಕೊಂಡುಕೊಂಡಿರತಕ್ಕಂಥ ಪ್ರತಿಯೊಬ್ಬ ಮನುಷ್ಯನೂ ತಾನು ಸಂಪಾದಿಸಿದ ಹಣದಿಂದ ಕೊಂಡುಕೊಂಡಿದ್ದಾನೆ. ಅವನು ಅದನ್ನು ಪುಕಸಟ್ಟೆಯಾಗಿ ತೆಗೆದುಕೊಂಡಿಲ್ಲ. ಇವತ್ತು ಲ್ಯಾಂಡ್‌ಲಾರ್ಡ್ಸ್‌ಗಳಲ್ಲಿ ದೊಡ್ಡವರೂ ಇದ್ದಾರೆ, ಸಣ್ಣವರೂ ಇದ್ದಾರೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಗ್ರೋಮೋರ್ ಫುಡ್ ಕ್ಯಾಂಪೈನ್ ಸಂಬಂಧದಲ್ಲಿ ಬಂದ ಜಮೀನು ಹೇಗೆ ಬಂದದ್ದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದಿಂದ ಬಂದದ್ದು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಶಿಷ್ಯರಿಂದ ಗುರುಗಳಿಗೆ ಬಂದದ್ದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಪುಗಸಟ್ಟೆ ಬಂದದ್ದು. ಭೂಮಾಲೀಕರು ಎಂದರೆ ನಮ್ಮ ಮುಂದೆ ಬರತಕ್ಕಂಥವರು, ದೊಡ್ಡ ದೊಡ್ಡ ಜಮೀರ್‌ದಾರರು. ಅದು ಅಲ್ಲ. ನಮ್ಮ ಹಳೆಯ ಮೈಸೂರು ಸಂಸ್ಥಾನದಲ್ಲಿ ಎರಡು ಎಕರೆಯಿಂದ ಹತ್ತು ಎಕರೆವರೆಗೆ ಪಡೆದಿರುವ ಜಮೀರ್‌ದಾರರು ಇದ್ದಾರೆ. ಖುದ್ದಾಗಿ ವ್ಯವಸಾಯ ಮಾಡದಿರುವ ಭೂಮಾಲೀಕರು ಹೋಗಬೇಕು ಎನ್ನುವ ತೀರ್ಮಾನ ತೆಗೆದುಕೊಂಡರೆ ಜಯಪುರದಲ್ಲಿ ಇದ್ದುಕೊಂಡು ಕೃಷ್ಣರಾಜನಗರದಲ್ಲಿ ಮೂರು-ನಾಲ್ಕು ಎಕರೆ ಹೊಂದಿರುವ ಸಣ್ಣ ಹಿಡುವಳಿದಾರ ಅದನ್ನು ಬಿಟ್ಟುಬಿಡಬೇಕಾಗುತ್ತದೆ. ಈ ಜಮೀರ್‌ದಾರರಲ್ಲಿ ಅನೇಕ ಜನ ಬಡವರು ಇದ್ದಾರೆ.

Sri J B. MALLARADHYA.—The Jatti Committee has given a clear finding on this matter and there is no room for doubt. They determine the ceiling with reference to 4½ times or 3½ times.

Sri H. M. CHANNABASAPPA.—I am not dealing with ceiling but with absentee landlordism. ಜಯಪುರದಿಂದ ಕೃಷ್ಣರಾಜನಗರಕ್ಕೆ 35 ಮೈಲಿಗಳು. ಒಬ್ಬ ಬಡ ನೌಕರನು ಕೆ. ಆರ್. ನಗರದಲ್ಲಿ ನಾಲ್ಕು ಎಕರೆ ಜಮೀನು ಇಟ್ಟುಕೊಂಡರೆ ಏನು ತೊಂದರೆ ಆಯಿತು?

Sri M. C. NARASIMHAN.—The Committee has stated in respect of small holders. The restriction regarding absentee landlords will not apply.

Sri H. M. CHANNABASAPPA.—I go one step further so that the land may be put to proper use. If the Committee has not gone sufficiently far, I am prepared to go. ಆದ್ದರಿಂದ ಈ ಸಮಸ್ಯೆಯನ್ನು ಭಗೆಹರಿಸುವಾಗ, ನಾನು ಹೇಳುವ ಮನುಷ್ಯನ ವಿಚಾರವನ್ನು ಜ್ಞಾಪಕದಲ್ಲಿಡಬೇಕು. ಒಬ್ಬ ಉಪಾಧ್ಯಾಯನಿಗೆ ಬರತಕ್ಕಂಥ ಸಂಬಳ 40 ರೂಪಾಯಿ. ಅವನು ಅದರಜೊತೆಗೆ ಈ ಭೂಮಿಯಲ್ಲಿ ಬರುವ ಆದಾಯವನ್ನೂ ಸೇರಿಸಿಕೊಂಡು ಕಾಲಹರಣ ಮಾಡುತ್ತಾನೆ. ಇವತ್ತು ಅವನನ್ನು ಆಬ್ಸೆಂಟೀ ಲ್ಯಾಂಡ್‌ಲಾರ್ಡ್ ಎಂದು ಕರೆಯುವುದು ಸರಿಯೇ? ಹಾಗೆ ಅವನನ್ನು ಕರೆದರೆ, ಅವನೂ ಜಮೀನನ್ನು ಬಿಟ್ಟುಕೊಡಬೇಕಾಗುವುದು. ಅವನಿಗೆ ಬರತಕ್ಕಂಥ ಆದಾಯ ಹೋಗುವುದನ್ನು ಕಣ್ಣುಮುಚ್ಚಿಕೊಂಡು ನೋಡಲು ಸಾಧ್ಯವಿಲ್ಲ. ಅವನೂ ಪ್ರಜೆ. ಅವನ ಹಿತವನ್ನೂ ಕಾಯಬೇಕು. ಸಣ್ಣಪುಟ್ಟ ಹಿಡುವಳಿದಾರರೂ ಅನೇಕ ಜನ ಕೂಲಿಮಾಡಿಕೊಂಡಿದ್ದಾರೆ. ಹಳ್ಳಿಗಳಲ್ಲಿ ನಾಲ್ಕು-ಹತ್ತು ಎಕರೆ ಜಮೀನು ಇಟ್ಟುಕೊಂಡಿರತಕ್ಕಂಥವರು, ಉಳುವುದಕ್ಕೆ ಎತ್ತಿಲ್ಲದೆ ಬೇರೆ ಕಡೆ ಕೂಲಿಮಾಡುತ್ತಿದ್ದಾರೆ. ಹೀಗೆ ವ್ಯವಸಾಯದ ಅನುಕೂಲವಿಲ್ಲದೆ ಸಣ್ಣ ಜಮೀನುದಾರರೂ ಇದ್ದಾರೆ. ಇವರನ್ನು ಗುತ್ತಿಗೆದಾರರು ಎಂದು ಬರೆದಿರುತ್ತಾರೆ. ಇವರ ಗತಿ ನಾಳೆ ಏನಾಗಬೇಕು?

Sri M. C. NARASIMHAN.—I invite the attention of the Hon'ble Member to para 4, page 47 of the Report. It says:—

> "To prevent abuse of this concession we would recommend that only small holders (owning not more than a family holding) whose total income from all sources including the rent of the land in question does not exceed Rs. 1,200 should have the benefit of this exemption."

Sri H. M. CHANNABASAPPA.—I have already made it clear that the system of leasing out land itself should go.

Sri J. B. MALLARADHYA.—On the basis of your recommendations you cannot criticise the Report. You may give your suggestions and the basis on which you have arrived at them.

Sri H. M. CHANNABASAPPA.—I am too glad to get converted if my view is wrong.

Sri J. B. MALLARADHYA.—Kindly give all your recommendations, but don't criticise the Report while giving your recommendations.

Sri H. M. CHANNABASAPPA.—I have every right. You leave it to me. I am not going to be dictated by you. I know how to present the case myself.

In regard to the absentee landlordism while asking people to give up land, the cases of those people who are

small holders, who are in service and who are elsewhere on account of so many difficulties must be kept in view while taking the decision.

Now about personal cultivation.

ಬೊಂಬಾಯಿ ಕಾನೂನಿನಲ್ಲಿ personal cultivation of land ಗೆ ಪರಿಮಿತಿಯನ್ನು ಹಾಕಿಲ್ಲ. ಇಲ್ಲಿ personal cultivation ಗೆ ಸಹ ಒಂದು ಪರಿಮಿತಿ ಇರಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಬೊಂಬಾಯಿಯ ಕಾನೂನಿಗಿಂತ ಪ್ರಗತಿಯಲ್ಲಿ ಇದು ಕಡಮೆಯಾದುದು ಎಂದು ಅವರ ಅಭಿಪ್ರಾಯದಿಂದ ಗೊತ್ತಾಗುತ್ತದೆ. ಒಂದು ವೇಳೆ ಬೊಂಬಾಯಿ ಕಾನೂನು ಬಹಳ ಪ್ರಗತಿಯುತವಾದುದು ಎಂದರೂ, ಇಲ್ಲಿ personal cultivation ಗೆ ಏಕೆ ಪರಿಮಿತಿಯನ್ನು ಹಾಕಬೇಕು ಎಂದರೆ ಭೂಮಿ ಸಿಕ್ಕುವುದಿಲ್ಲವೆಂದು ಒಂದು ಕಾರಣವನ್ನು ಹೇಳುತ್ತಾರೆ. ಇದೇ ಒಂದು ಮಹತ್ವದ ಕಾರಣ. ಇಂಥ ಒಂದು ಪರಿಮಿತಿಯನ್ನು ಹಾಕದೆ ಹೋದರೆ ಎಲ್ಲರಿಗೂ ಹಂಚಿಕೆ ಮಾಡುವುದಕ್ಕೆ ಭೂಮಿ ಸಾಕಾಗುವುದಿಲ್ಲವೆಂದು ಹೇಳುತ್ತಾರೆ. ಆದರೆ ನಾನು ತಮಗೆ ಅರಿಕೆಮಾಡಿಕೊಳ್ಳುವುದು ಭೂಮಿಯನ್ನು ಹಂಚಿಕೆ ಮಾಡತಕ್ಕದ್ದರಲ್ಲಿ ಭೂಮಿಯನ್ನು ಯಾವರೀತಿ ಉಪಯೋಗಕ್ಕೆ ಹಾಕುತ್ತಿದ್ದೇವೆ ಎನ್ನುವುದೇ ಸ್ವಲ್ಪ ಪ್ರಾಮುಖ್ಯತೆಯುಳ್ಳದ್ದು. Personal cultivation ಗೆ ಏತಕ್ಕೋಸ್ಕರ ಇವರು ಒಂದು ಪರಿಮಿತಿಯನ್ನು ಹಾಕಬೇಕು ಎನ್ನತಕ್ಕದ್ದು ನನಗೆ ಅರ್ಥವಾಗುವುದಿಲ್ಲ. ಭೂಮಿ ಸಾಕಾಗುವುದಿಲ್ಲವೆಂಬ ಕಾರಣದಮೇಲೆ ಸ್ವಂತ ಸಾಗುವಳಿಮಾಡುವುದರ ಮೇಲೆ ಒಂದು ಪರಿಮಿತಿಯನ್ನು ಹಾಕುವುದಾದರೆ, ಒಂದು ವೇಳೆ ಹಾಗೆ ಭೂಮಿಯನ್ನು ಹಂಚಿಕೆಮಾಡಿದರೆ ನಾಳೆದಿವಸ ಇದೇ ಸ್ಥಿತಿಯಲ್ಲಿ ಇನ್ನೂ ಹತ್ತಾರು ವರ್ಷಗಳು ಇರತಕ್ಕದ್ದು ಇವರ ಧ್ಯೇಯವೇ? ಪರಿಮಿತಿ ಅಥವಾ ceiling limit ಹಾಕಬೇಕೆನ್ನುವ ಪ್ರಶ್ನೆ ಬಂದಾಗ ಇದನ್ನು ಪುನಃ ಎತ್ತಿಕೊಳ್ಳುತ್ತೇನೆ. Personal cultivation ಗೆ ನಾವು ಭೂಮಿಯನ್ನು ಕೊಡುವಾಗ ಅದಕ್ಕೆ ಒಂದು ಪರಿಮಿತಿಯನ್ನು ಹಾಕಿ ಬೇರೆ ಕ್ಷೇತ್ರಗಳಲ್ಲಿ ಒಬ್ಬ ಮನುಷ್ಯನು ತನ್ನ ಬುದ್ಧಿಶಕ್ತಿ ಮತ್ತು ಸಾಮರ್ಥ್ಯಕ್ಕೆ ತಕ್ಕ ಪ್ರಮಾಣದಲ್ಲಿ ಉತ್ಪಾದನೆ ಮಾಡುವುದಕ್ಕೆ ಅವಕಾಶವಿರುವಾಗ ಭೂಮಿಯಲ್ಲಿ ಸಾಗುವಳಿ ನಾಡುವವನಿಗೆ ಅಂಥ ಅವಕಾಶವನ್ನು ಕೊಡದೆ ಕುಂಠಿತಮಾಡಿದಪಕ್ಷದಲ್ಲಿ ಆ ಮನುಷ್ಯನ ಸಂಪೂರ್ಣ ಬೆಳವಣಿಗೆಗೆ ಅಡ್ಡಿ ಆತಂಕವನ್ನು ತಂದು ಒಡ್ಡಿದಂತಾಗುತ್ತದೆ, ನಾಲ್ಕುವರೆ family holding ಇರಬೇಕು ಎಂದು ತೀರ್ಮಾನಮಾಡಿರುವುದರಲ್ಲಿ ಒಬ್ಬ Second Class Officer ಸಂಪಾದನೆಯಷ್ಟು ಕನಿಷ್ಠ ಪಕ್ಷ ಆಪ್ರಮಾಣ ವಿರಬೇಕು ಎಂದು ಹೇಳುತ್ತಾರೆ. ಹಾಗೆ ಹೇಳುವಾಗ ಬಹಳ ಪಶ್ಚಾತ್ತಾಪದಿಂದ ಹೇಳಿದ್ದಾರೆ. ಆ ವಾಕ್ಯವನ್ನು ತಾವು ಗಮನಿಸಬೇಕು, ವರದಿಯ 70ನೇ ಪುಟದಲ್ಲಿ 'Even with the higher ceiling, the owner cultivater will have only an annual income of Rs. 5,400 which is about the same as the income of a class II officer.' ಎಂದು ಹೇಳಿದ್ದಾರೆ. ಎಂದರೆ ನಾವಾದರೂ ಕೂಡ ಇವನು Second Class Officer ಮಟ್ಟದಲ್ಲಿ ಇರುತ್ತಾನೆ ಎಂದು ಹೇಳಲಾರೆವು ಎಂಬುದಾಗಿ ತಿಳಿಸಿದ್ದಾರೆ. ಇದರಿಂದ ಏನು ಗೊತ್ತಾಗುತ್ತದೆಯೆಂದರೆ ಅವರ ಹೃದಯದಲ್ಲಿ ಹೀಗೆ ಮಾಡಿದ್ದು ಸರಿಯಲ್ಲ, ನಾವು ಆ ಮಟ್ಟಕ್ಕೆ ಇಳಿಸತಕ್ಕದ್ದು ಸರಿಯಲ್ಲ, ಆದರೂ ವಿಧಿಯಿಲ್ಲವೆನ್ನುವ ರೀತಿಯಲ್ಲಿ ಹೇಳಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—Personal cultivation ವಿಷಯದಲ್ಲಿ ಮಾತನಾಡುವಾಗ ಜಮೀನಿಲ್ಲದ ಕಾರಣದಿಂದ personal cultivation ಪರಿಮಿತಿಯನ್ನು ಕಡಮೆಮಾಡಿದ್ದಾರೆ ಎಂದು ಅಪ್ಪಣೆಕೊಡಿಸಿದರು. ಅದು ರಿಪೋರ್ಟಿನ ಯಾವ ಭಾಗದಲ್ಲಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಿನ್ನಿ, ತೋರಿಸುತ್ತೇನೆ.

Sri J. B. MALLARADHYA.—About ceiling on personal cultivation it is nowhere stated in the Report. Personal cultivation ವಿಷಯ ಮಾತನಾಡುವಾಗ ಅವರು ಅಪ್ಪಣೆ ಕೊಡಿಸಿದರು. ಕಮಿಟಿಯವರು ಜಮೀನುಗಳು ಹಂಚಿಕೆಗೆ ಸಾಲದೆ ಇರುವ ದೃಷ್ಟಿಯಿಂದ personal cultivation ಪರಿಮಿತಿಯನ್ನು ಕಡಿಮೆ ಮಾಡಿದ್ದಾರೆಂದು. ಆ ವಿಷಯವನ್ನು ವರದಿಯಲ್ಲಿ ಯಾವ ಪುಟದಲ್ಲಿ ನಿರೂಪಿಸಿದ್ದಾರೆಂಬುದನ್ನು ದಯವಿಟ್ಟು ಹೇಳುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು personal cultivation ವಿಚಾರದಲ್ಲಿ ಮಾಡಿರುವ ಅಧ್ಯಾಯವನ್ನು ಸಂಪೂರ್ಣವಾಗಿ ಓದಿದರೆ ಅದರಲ್ಲಿ ಹೇಳಿದ್ದಾರೆ. Personal cultivation ನಲ್ಲಿರುವ ಜಮೀನುಗಳ ಮೇಲೆ ಒಂದು ಮಿತಿಯನ್ನು ಹಾಕದೆ ಇದ್ದರೆ ವ್ಯವಸಾಯ ಮಾಡುವವರಿಗೆ ಹಂಚುವುದಕ್ಕೆ ಭೂಮಿಯೇ ಇರುವುದಿಲ್ಲವೆಂದು ತಿಳಿಸಿದ್ದಾರೆ. ಆದುದರಿಂದ personal cultivation ಗೆ ಒಂದು ಪರಿಮಿತಿಯನ್ನು ಹಾಕುವುದರಿಂದ ಗ್ರಾಮಗಳಲ್ಲಿಯುವಕರಾಗಿರತಕ್ಕವರು, ವಿದ್ಯಾವಂತರಾಗಿರತಕ್ಕವರು, ದಕ್ಷರಾಗಿರತಕ್ಕವರು ಈ ಕ್ಷೇತ್ರದಲ್ಲಿ ಬರುವುದಕ್ಕೆ ತುಂಬ ಅಡ್ಡಿಯಾಗುತ್ತದೆ. 5,400 ರೂಪಾಯಿಗಳು ಸೀಲಿಂಗ್ ಲಿಮಿಟ್ ಎಂದು ನಿಗದಿಮಾಡುವಾಗ ಅಷ್ಟು ಮಾತ್ರ ಏಕೆ ಸೀಲಿಂಗ್ ನಿಗದಿಮಾಡಬೇಕು, ಒಬ್ಬರು ಎಂಟು ಸಾವಿರವಿರಲಿ ಎಂದು ಹೇಳಬಹುದು, ಇನ್ನೊಬ್ಬರು ಹತ್ತು ಸಾವಿರವಿರಲಿ ಎಂದು ಹೇಳಬಹುದು.

I invite your kind attention to page 73 of the Report:

> "As the surplus above the ceiling in respect of lands leased out to tenants will have to be sold to the tenants themselves, the only source of getting some lands for re-distribution among the landless persons is the imposition of ceilings on personal cultivation also...."

Are you satisfied?

Sri J. B. MALLARADHYA.—But where is it said? Your interpretation is wrong. It is nowhere provided like that.

Sri H. M. CHANNABASAPPA.—The Report says so. What more you want? ಆದುದರಿಂದ personal cultivation ಗೆ ಸೀಲಿಂಗ್ ಲಿಮಿಟ್ ಇರತಕ್ಕದ್ದು ಸರಿಯಲ್ಲ, ಅದರಿಂದ ವ್ಯವಸಾಯಕ್ಕೆ ಧಕ್ಕೆಯಾಗುತ್ತದೆ ಎಂದು ಹೇಳುತ್ತೇನೆ. ಒಂದು ವೇಳೆ ಸೀಲಿಂಗ್ ಲಿಮಿಟ್ ಹಾಕಬೇಕು ಎಂದರೆ ಅದಕ್ಕೆ ಕೆಲವು ಕಂಡಿಷ್ಷನ್‌ಗಳನ್ನು ಕೊಡುತ್ತೇನೆ. Personal cultivation ಗೆ ಎಂದು ನೂರಾರು ಎಕರೆ ಭೂಮಿಯನ್ನು ಕೊಡುವುದಕ್ಕಾಗುವುದಿಲ್ಲ. ನಾನು ಮೊದಲೇ ಹೇಳಿದ್ದೇನೆ. ಬಹಳ ದಕ್ಷತೆಯಿಂದ ಯಾರು ವ್ಯವಸಾಯವನ್ನು ಮಾಡುತ್ತಾರೆಯೋ ಅವರಿಗೆ ಮಾತ್ರ ಭೂಮಿಯನ್ನು ಕೊಡಬಹುದೆಂದು ಹೇಳಿದ್ದೇನೆ. ಬುದ್ಧಿವಂತರಾಗಿರುವವರು, ದಕ್ಷರಾಗಿರುವವರು, ಇವರಿಗೆ ಅಲ್ಪಸ್ವಲ್ಪ ಭೂಮಿಯನ್ನು ಕೊಟ್ಟರೆ ಏನೂ ಉಪಯೋಗವಾಗುವುದಿಲ್ಲ. ಹೀಗೆ ಮಾಡಿದರೆ ವ್ಯವಸಾಯಕ್ಷೇತ್ರಕ್ಕೆ ಎಷ್ಟು ಬಂದು ಇದರಲ್ಲಿ ಯಾರು ಇರುತ್ತಾರೆಂದರೆ scrap materials ಮಾತ್ರ ಎಂದು ಹೇಳುತ್ತೇನೆ. Personal cultivation ಗೆ ಜಮೀನನ್ನು ಕೊಡಬೇಕೆಂದು ಹೇಳುವುದರಲ್ಲಿ ತಪ್ಪಿಲ್ಲ. ಆದರೆ ಕುರ್ಚಿಯ ಮೇಲೆ ಆರಾಮವಾಗಿ ಕುಳಿತುಕೊಂಡಿದ್ದರೆ ವ್ಯವಸಾಯ ನಡೆಯುವುದಿಲ್ಲ. Absentee landlords ವಿಚಾರವನ್ನು ಪರಿಶೀಲನೆ ಮಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಳಿಯ ಸಂತಾನದ ಪದ್ಧತಿಯ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿರುವುದು ವಿಷಾದಕರವಾದ ಸಂಗತಿ. ಅದೊಂದು ದೊಡ್ಡ ಜಿಲ್ಲೆ. ಶಾಸನಕ್ಕನುಗುಣವಾಗಿ ಕೆಲವರು ವ್ಯವಸಾಯ ಮಾಡಬೇಕೆಂದು ಇಚ್ಛೆಪಟ್ಟರೂ ಅವರು ವ್ಯವಸಾಯಕ್ಕೆ ಹೋಗುವಸ್ಥಿತಿಯಲ್ಲಿಲ್ಲ.....

ಶ್ರೀ ಬಿ. ಬಸವಲಿಂಗಪ್ಪ.—ಎಸ್ಟೇಟ್ ಡ್ಯೂಟಿ ಕಾನೂನು ಬಂದಾಗ ಅಲ್ಲಿ ಯಾರೂ ಪ್ರೊಟೆಸ್ಟ್ ಮಾಡಲಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ —ಅವರು ಮಾಡಲಿ ಮಾಡದೇಯಿರಲಿ, ಅದು ಬೇರೆ ವಿಷಯ. ಅಳಿಯ ಸಂತಾನ ಪದ್ಧತಿ ಇರುವಕಡೆ, ಶಾಸನಕ್ಕನುಸಾರವಾಗಿ ವ್ಯವಸಾಯವಾಡಲು ಇಷ್ಟಪಟ್ಟರೂ ಆಗುವುದಿಲ್ಲ. ಹೀಗಿರುವಾಗ absentee landlords ನ್ನು ತೆಗೆದುಹಾಕಿದರೆ, ಇವರ ಸ್ಥಿತಿ ಏನು ಮಾಡಬೇಕೆಂಬುದನ್ನು ನೋಡದೇಯಿದ್ದರೆ ಬಹಳ ಅನ್ಯಾಯವಾಗುತ್ತದೆ. ತನ್ನ ಭೂಮಿಯನ್ನು ವ್ಯವಸಾಯಮಾಡುತ್ತೇನೆಂದರೆ ಅವನಿಗೆ ಏಕೆ ಕೊಡಬಾರದು? ಅಲ್ಲಿ ಒಬ್ಬ ಟೆನೆಂಟು, ಇನ್ನೊಬ್ಬ ಓನರ್, ಇವರಿಬ್ಬರಲ್ಲಿ ಯಾರಿಗೆ ಕೊಡಬೇಕು? ಒಬ್ಬ ಹೇಳುತ್ತಾನೆ, ಟೆನೆಂಟ್‌ಗೇ ಕೊಡಿ, ಭೂಮಿಯನ್ನು ವ್ಯವಸಾಯ ಮಾಡಿಕೊಂಡು ಬಂದಿದ್ದಾನೆ, ಇವನಿಗೇ ಕೊಡಬೇಕೆಂದು. ನಾನು ವ್ಯವಸಾಯ ಮಾಡುವುದಕ್ಕೆ ಅವಕಾಶವಿಲ್ಲ, ನಾನು ವ್ಯವಸಾಯಮಾಡುವುದಕ್ಕೆ ಸಿದ್ಧನಾಗಿದ್ದೇನೆ ಎಂದು ಮಾಲೀಕ ಹೇಳಿದರೆ ಆಗ ನ್ಯಾಯ, ಧರ್ಮ ಎಂಬುದನ್ನಿಟ್ಟುಕೊಳ್ಳುವುದಾದರೆ, ಭೂಮಿಯನ್ನು ಹೊಂದಿರತಕ್ಕವನಿಗೆ ಅವಕಾಶ ಕೊಡದೇಯಿದ್ದರೆ, ಅದು ನ್ಯಾಯಕ್ಕೆ ವಿರುದ್ಧವಾಗುತ್ತದೆ. ಆದಕಾರಣ ಅಳಿಯ ಸಂತಾನದ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲನೆಮಾಡಿ, ಅನ್ಯಾಯವಾಗುವುದಕ್ಕವಕಾಶವಿಲ್ಲದಂತೆ ವ್ಯವಸ್ಥೆಮಾಡುವುದು ಅಗತ್ಯ. ಇದನ್ನು ಮನೂದೆ ತಯಾರುಮಾಡುವಾಗ ಪರಿಶೀಲನೆ ಮಾಡಬೇಕಾದುದು ಅತ್ಯಗತ್ಯವೆಂದು ಹೇಳುವುದು ನನ್ನ ಕರ್ತವ್ಯ.

ಪ್ಲಾನಿಂಗ್ ಕಮಿಷನ್‌ನವರು ಒಂದು ಮಟ್ಟದ ಸೀಲಿಂಗ್ ಇರಬೇಕೆಂದು ಹೇಳಿರುವಾಗ, ಈ ಸಮಿತಿಯವರು ಇಷ್ಟೇ ಸೀಲಿಂಗ್ ಇರಬೇಕೆಂದು ಹೇಳಿಲ್ಲ. ಉತ್ತರ ಪ್ರದೇಶದಲ್ಲಿ ಇಷ್ಟಿದೆ, ಹೈದರಾಬಾದಿನಲ್ಲಿ ಇಷ್ಟಿದೆ, ಬೊಂಬಾಯಿನಲ್ಲಿ ಇಷ್ಟಿದೆ, ನಾವು ಇಷ್ಟು ಮಾಡಿದ್ದೇವೆ ಎಂದು ಹೇಳಿದ್ದಾರೆ. ಭೂಮಿಯ ಪರಿಮಿತಿಹಾಕಿದ ಮೇಲೆ ಹೆಚ್ಚುವರಿ ಭೂಮಿಯನ್ನು ಅವರಿಂದ ತೆಗೆದುಕೊಳ್ಳುವುದರಿಂದ ಬಹಳ ಜನರಿಗೆ ತೊಂದರೆಯಾಗುತ್ತದೆ. ದೊಡ್ಡ ದೊಡ್ಡ ಜಮೀನುದಾರರಿಗೆ ತೊಂದರೆಯಾಗುತ್ತದೆ, ಬೇರೆಯವರಿಗೆ ತೊಂದರೆಯಾಗುವುದಿಲ್ಲವೆಂದು ಹೇಳಬಹುದು. ಏನೇ ಆಗಲಿ ಹಳ್ಳಿಗಳಲ್ಲಿ ಏನು ಕಾನೂನು ಮಾಡಿದರೆಂದು ತಿಳಿಯದೇಯಿರುವವರಿದ್ದಾರೆ. ಮಧ್ಯಮ ವರ್ಗದ ಜನರಿದ್ದಾರೆ, ಇವರಿಗೂ ತೊಂದರೆಯಾಗುತ್ತದೆ.

ಈ ವರದಿಯ ಪ್ರಕಾರ resumption for personal cultivation ಒಪ್ಪಿದರೆ ಬಹಳ ಜನರಿಗೆ ತೊಂದರೆಯಾಗುತ್ತದೆ. Personal cultivation ಗೆ ಒಂದು ಬೇಸಿಕ್ ಹೋಲ್ಡಿಂಗ್ ಬಿಡಬಹುದೆಂದು ಹೇಳಿದ್ದಾರೆ. ಒಂದು ಬೇಸಿಕ್ ಹೋಲ್ಡಿಂಗ್ ಎಂದರೆ 400 ರೂಪಾಯಿ ಉತ್ಪತ್ತಿ ಕೊಡುವ ಒಂದು ಜಮೀನು. ಇದು ಬಹಳ ಸಣ್ಣದಾಯಿತು. ನಮ್ಮ ಉದ್ದೇಶ ಎಕನಾಮಿಕ್ ಹೋಲ್ಡಿಂಗ್ ಏಗಿರಬೇಕೆಂಬುದು. ವ್ಯವಸಾಯಮಾಡುವವನಿಗೆ ಹೆಚ್ಚು ಉತ್ಪತ್ತಿಮಾಡುವುದಕ್ಕೆ ಅವಕಾಶವಿರಬೇಕೆಂದು ಹೇಳುವಾಗ ಈ ರೀತಿ ಒಂದು ಬೇಸಿಕ್ ಹೋಲ್ಡಿಂಗ್ ಇಟ್ಟರೆ ಏನಾಗುತ್ತದೆ? ಈ ಒಂದು ಬೇಸಿಕ್ ಹೋಲ್ಡಿಂಗ್ ತೆಗೆದುಕೊಂಡು ಅವನೂ ಅವನ ಕುಟುಂಬವೂ ಜೀವನಮಾಡಬೇಕು!...

Sri J. B. MALLARADHYA.—He may be a tenant under two different landlords. That possibility has to be examined.

Sri H. M. CHANNABASAPPA.—I have examined. I could claim to know much more with due respects to him.

Sri J. B. MALLARADHYA.—He must respect somebodyelse's also.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇಂಥ ಬಡವನ ಗತಿ ಏನಾಗುತ್ತದೆ? ಈ ಒಂದು ಬೇಸಿಕ್ ಹೋಲ್ಡಿಂಗ್‌ನಲ್ಲಿ ಅವನು ಹೆಚ್ಚು ಸಂಪಾದನೆ ಮಾಡುವುದಕ್ಕೆ ತಕ್ಕವಿಲ್ಲ; ಇದನ್ನು ಬಿಟ್ಟರೆ ಅವನಿಗೆ ಬೇರೆ ಗತಿ ಇಲ್ಲ. ಅವನ ಮಕ್ಕಳು ದೊಡ್ಡವರಾದರೆ ಒಬ್ಬೊಬ್ಬರಿಗೆ ಅರ್ಧ, ಕಾಲು ಬೇಸಿಕ್ ಹೋಲ್ಡಿಂಗ್ ಆಗುತ್ತದೆ. ಉದಾಹರಣೆಗೆ ಒಬ್ಬ ಮನುಷ್ಯನಿಗೆ ನಾಲ್ಕು ಬೇಸಿಕ್ ಹೋಲ್ಡಿಂಗ್ ಅಥವಾ ಒಂದು ಫ್ಯಾಮಿಲಿ ಹೋಲ್ಡಿಂಗ್ ಇರುತ್ತದೆ; ನಾಲ್ಕು ಜನಕ್ಕೆ ಮುಕ್ಕಾಲು ಹೋಲ್ಡಿಂಗ್ ನಂತೆ ವ್ಯವಸಾಯಕ್ಕೆ ಕೊಡುತ್ತಾನೆ. ಇದು ಸಾಕಾಗುತ್ತದೆಯೇ ಎಂದು ಯೋಚಿಸಬೇಕು. ಒಬ್ಬನು ಇನ್ನೊಬ್ಬನಿಗೆ ತಾನು ಮಾಡುತ್ತಿರುವ ಜಮೀನನ್ನು ವ್ಯವಸಾಯಕ್ಕೆ ಕೊಟ್ಟಮಾತ್ರಕ್ಕೇ ಅವನು absentee land lord ಎಂದು ಹೇಳುವುದು ತಪ್ಪು. ಇನ್ನೊಬ್ಬನ ಜೀವನಕ್ಕೆ ಅವಕಾಶ ಮಾಡೋಣವೆಂದು ಕೊಡಬಹುದು. ನಾನು ಈಗತಾನೇ ಹೇಳಿದಂತೆ ನಾಲ್ಕು ಜನ ಮಕ್ಕಳಿದ್ದಾರೆ. ಒಬ್ಬೊಬ್ಬನಿಗೆ ಮುಕ್ಕಾಲು ಬೇಸಿಕ್ ಹೋಲ್ಡಿಂಗ್ ಬರುತ್ತದೆ. ಇದನ್ನು ಬದಲಾಯಿಸಬೇಕೆಂದರೆ ಒಂದು ಗುಂಟೆ ಜಮೀನನ್ನೂ ಹೆಚ್ಚುಮಾಡುವುದಕ್ಕಾಗುವುದಿಲ್ಲ.

5-30 P.M.

ಈ ಜಿತ್ತ ಸಮಿತಿಯ ವರದಿಯಲ್ಲಿ ಬೇಸಿಕ್ ಹೋಲ್ಡಿಂಗ್ ಡೆಫಿನಿಷನ್ ಅಷ್ಟು ಸರಿಯಾಗಿಲ್ಲ. ಒಂದು ಪ್ರದೇಶದ ಭೂಮಿಯಲ್ಲಿ ಇಷ್ಟೇ ಉತ್ಪತ್ತಿಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಬೆಳೆ ಸರಿಯಾಗಿ ಬೆಳೆಯುವುದಕ್ಕೆ ನಾನಾ ಕಾರಣಗಳಿವೆ. ಮುಖ್ಯವಾಗಿ ಪರಿಸ್ಥಿತಿಯೇ ಅದಕ್ಕೆ ಸಾಕ್ಷಿಯಾಗಿದೆಯೆಂದು ನಾನು ಅರಿತುಕೊಂಡಿದ್ದೇನೆ. ನಮ್ಮದು ವೆಲ್‌ಫೇರ್ ಸ್ಟೇಟ್ ಆದ ಮೇರೆ ಗೇಣಿ ನಿರ್ಣಯವಾಗುವುದು, ಜಮೀನ್ದಾರಿ ಪದ್ಧತಿ ಸರಿಪಡಿಸಲಾಗುವುದು ಎಂದು ಹೇಳಲಾಗುತ್ತಿದೆ. ಆದರೆ ಗೇಣಿದಾರನಿಗೂ ಮತ್ತು ಭೂಮಿಯ ಒಡೆಯನಿಗೂ ಅಂದರೆ ಇಬ್ಬರಿಗೂ ನ್ಯಾಯವಾಗುವಂತೆ ಮಾಡಬೇಕಾಗಿದೆ. ಭೂಮಿಯನ್ನು ಸ್ವತಃ ಸಾಗುವಳಿ ಮಾಡುವುದಕ್ಕೆ ಬೇಕು ಎಂದು ಹೇಳಿದರೆ ರೈತನಿಂದ ಬಿಡಿಸಿ ಭೂಮಿಯನ್ನು ಅವರಿಗೆ ಕೊಡೋಣ.

ಶ್ರೀ ವೈ. ವೀರಪ್ಪ.—ನಿಮ್ಮ ಸೂಚನೆಗಳು ಏನು ಎಂಬುದನ್ನು ಇನ್ನೂ ನೀವು ಹೇಳಲಿಲ್ಲ. ನಿಮ್ಮ ಸೂಚನೆಗಳನ್ನು ಹೇಳಬೇಕು. ನಾವು ಅವುಗಳನ್ನು ತಿಳಿದುಕೊಳ್ಳಬೇಕಾಗಿದೆ.

Sri H. M. CHANNABASAPPA.—I do not know whether the Hon'ble Member has followed: I have been trying to take the House step by step and as far as possible trying to meet the objections also. ಕಾನೂನು ಪ್ರಕಾರ ಕಾಂಪೆನ್ ಜೇಷನ್ ಫಿಕ್ಸ್ ಮಾಡಬೇಕಾಗಿದೆ. ಇದು ಬಹಳ ಕಾಂಪ್ಲಿಕೇಟೆಡ್ ವಿಷಯ. ಹೆಗ್ಗಡದೇವನಕೋಟೆಯಲ್ಲಿ 50 ಎಕರೆ 100 ಎಕರೆ ಭೂಮಿಯು ಒಬ್ಬೊಬ್ಬರ ಹತ್ತಿರವಿರುವ ಉದಾಹರಣೆಗಳು ಸಿಕ್ಕುತ್ತವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅನೇಕ ಕಡೆಗಳಲ್ಲಿ ಸಾವಿರಾರು ಎಕರೆ ಜಮೀನು ಇಟ್ಟುಕೊಂಡಿರುವುದು ತಮ್ಮ ಅನುಭವದಲ್ಲಿ ಇರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕಾಗಿ ನಾನು ಸಲಹೆ ಮಾಡುವುದೇನೆಂದರೆ ಇದನ್ನು ಫಿಕ್ಸ್ ಮಾಡುವುದು ಬೇಡ, ಒಂದು ಸರಿಯಾದ ವಾತಾವರಣ ಉಂಟಾಗುವಂತೆ ಮಾಡೋಣ. ವ್ಯವಸಾಯ ಮಾಡುತ್ತೇವೆಂದು ಯಾರಾದರೂ ಮುಂದೆ ಬಂದರೆ ಅವರಿಗೆ ಭೂಮಿಯನ್ನು ಕೊಡುವುದಕ್ಕೆ ಮನ್ನಣೆ ಕೊಡೋಣ. ಸೀಲಿಂಗ್ ಅಂದರೆ ಏನು? ಸೀಲಿಂಗ್ ಯಾಕೆ ಬೇಕು? ಇಷ್ಟು ಎಕರೆ ಖುಷ್ಕಿ, ಬಾಗಾಯಿತು ಭೂಮಿ ಇರಬೇಕೆಂದು ಒಂದು ಪ್ರಮಾಣವನ್ನು ಗೊತ್ತುಮಾಡೋಣ ಹೆಚ್ಚಿಗೆ ಭೂಮಿಯನ್ನಿಟ್ಟುಕೊಂಡಿದ್ದರೆ ಅದನ್ನು ತೆಗೆದು ಕೊಳ್ಳೋಣ. ಯಾಕೆಂದರೆ the excess of land will vest in Government. ಒಂದು ತಾರೀಖನ್ನು ಗೊತ್ತುಮಾಡಿಬಿಡೋಣ. ಆ ತಾರೀಖಿನ ನಂತರ ಹೆಚ್ಚಾದ ಭೂಮಿಯೆಲ್ಲಾ ಸರಕಾರದ್ದು ಎಂದು ಹೇಳಬೇಕು. ಅಂದಿನಿಂದ ಯಾರೇ ಅಗಲಿ ಇಷ್ಟು ಪ್ರಮಾಣಕ್ಕಿಂತ ಹೆಚ್ಚು ಜಮೀನನ್ನು ಇಟ್ಟುಕೊಳ್ಳಬಾರದು ಎಂದು ಹೇಳಿ. ಆಗ ಆ ದಿನದೊಳಗೆ ಭೂ ಮಾಲೀಕರೆಲ್ಲಾ ಭೂಮಿಯನ್ನು ಮಾರಿಬಿಡುತ್ತಾರೆ ಅಥವಾ ಸ್ವಂತ ವ್ಯವಸಾಯಕ್ಕೆ ಇಟ್ಟುಕೊಳ್ಳುತ್ತಾರೆ. ಹೀಗೆ ಸ್ವಾಭಾವಿಕವಾಗಿ ಪರಿಸ್ಥಿತಿ ಸರಿಹೋಗುತ್ತದೆ. ಒಂದು ವೇಳೆ ಭೂಮಿಯನ್ನು ಮಾರಾಟ ಮಾಡುವುದಾದರೆ ವ್ಯವಸಾಯ ಮಾಡುವವನಿಗೆ ಮಾರಬೇಕು ಎಂದು ವಿಧಿಸಬೇಕು. ಈ ರೀತಿಯಾಗಿ ಮಾಡಿದರೆ ಅವರವರೇ ಹೊಂದಿಸಿಕೊಳ್ಳುತ್ತಾರೆ. ಹೆಚ್ಚಾಗಿರುವ ಭೂಮಿಯನ್ನು ಸರಕಾರ ವಶಪಡಿಸಿಕೊಂಡು ಅದಕ್ಕೆ ಪ್ರತಿಯಾಗಿ 20 ವರ್ಷ ಅವಧಿಯ ಬಾಂಡ್ ಕೊಡಬೇಕು. ಅನೇಕ ಬಡ ಜನರು ಸಾಲ ಮಾಡಿಕೊಂಡು ಜಮೀನು ಸಾಗುವಳಿ ಮಾಡುತ್ತಿದ್ದಾರೆ. ಆದುದರಿಂದ ಈ ರೀತಿಯಾಗಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅಮೆರಿಕಾದಲ್ಲಿ ಭೂಮಿ ಕೊಳ್ಳುವುದಕ್ಕೆ ಶೇಕಡ ಮೂರರಂತೆ ಬಡ್ಡಿ ಕೊಡುತ್ತಾರೆ. ಈ ಹಣವನ್ನು 40 ವರ್ಷಗಳಲ್ಲಿ ವಾಪಸ್ಸು ಮಾಡಬಹುದು. ಬೆಲ್ಜಿಯಂನಲ್ಲಿ ಕೊಡುವ ಸಾಲವನ್ನು 25 ವರ್ಷಗಳಲ್ಲೂ, ಜರ್ಮನಿಯಲ್ಲಿ 69 ವರ್ಷಗಳಲ್ಲೂ, ಡೆನ್ಮಾರ್ಕಿನಲ್ಲಿ 33 ವರ್ಷಗಳಲ್ಲೂ, ಹಂಗೇರಿ, ಫಿನ್‌ಲ್ಯಾಂಡ್, ಪೋಲೆಂಡ್, ಜೆಕೊಸ್ಲೋವೇಕಿಯಾ ಮುಂತಾದ ದೇಶಗಳಲ್ಲಿ ಒಂದೊಂದು ಯೋಜನೆಮಾಡಿ ವಾಪಸ್ಸು ಕೊಡಲು ಅವಕಾಶವನ್ನು ಕಲ್ಪಿಸಿದ್ದಾರೆ. ಇದಕ್ಕಾಗಿ ನಮ್ಮ ದೇಶದಲ್ಲಿ ಮೈಸೂರು ಸರಕಾರ, ಜನರು ಭೂಮಿ ಕೊಳ್ಳಲು ಹಣಸಿಕ್ಕಲು ಒಂದು ಕ್ರೆಡಿಟ್ ಸೊಸೈಟಿ ಏರ್ಪಾಡು ಮಾಡಬೇಕು. ಇಂಥ ಕ್ರೆಡಿಟ್ ಬ್ಯಾಂಕ್ ಮುಖಾಂತರ ವ್ಯವಸಾಯ ಮಾಡುವವರು ಭೂಮಿಯನ್ನು ಕೊಂಡುಕೊಳ್ಳುವುದಾದರೆ ಭೂಮಿಯ ಮಾಲೀಕರಿಗೆ ಹಣವನ್ನು ಕೊಟ್ಟುಬಿಡುತ್ತೇವೆ ಎಂದು ಹೇಳಬೇಕು. ಆ ಹಣವನ್ನು 50 ವರ್ಷ ಅಥವಾ 20 ವರ್ಷಗಳಲ್ಲಿ ಕಂತುಗಳ ರೂಪದಿಂದ ಭೂಮಿಯನ್ನು ಕೊಂಡುಕೊಳ್ಳುವವರು ವಾಪಸು ಕೊಡಬೇಕೆಂದು ಹೇಳತಕ್ಕದ್ದು. ಈ ತರದ ವ್ಯವಸ್ಥೆಯನ್ನೇನಾದರೂ ಮಾಡತಕ್ಕ ಯೋಚನೆಯನ್ನಾದರೂ ನಾವು ಮಾಡಿದ್ದೇವೆಯೇ? ಏನೂ ಇಲ್ಲ.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಅಮೆರಿಕಾ, ಬೆಲ್ಜಿಯಂ ಮುಂತಾದ ಪ್ರದೇಶಗಳ ವಿಚಾರವನ್ನು ಉದಹರಿಸಿರಿ. ಮೈಸೂರು ದೇಶ ಆ ಮಟ್ಟಕ್ಕೇನಾದರೂ ಬಂದಿದೆಯೇ?

Sri H. M. CHANNABASAPPA.—When you want money, you must obtain it from where it is available. ದುಡ್ಡೆಲ್ಲಿದೆಯೆಂದು ತಾವು ಕೇಳಬಹುದು. ಮನಸ್ಸುಮಾಡಿ, ದುಡ್ಡಿರುವ ಕಡೆಗೆ ಕೈಹಾಕಬೇಕು. ಭೂಮಿಯು ಕೇವಲ ಉತ್ಪಾದನಾಸಾಧನ, ಅಷ್ಟೆ. ಬರಿಯ ಭೂಮಿಯಿಂದೇನೂ ಪ್ರಯೋಜನವಿಲ್ಲ. ದುಡ್ಡಿಲ್ಲದೆ ಭೂಮಿಯಿಂದ ಏನೂ ಪ್ರಯೋಜನವಿಲ್ಲ. ಕೂಲಿ ಮಾಡತಕ್ಕವನು ಸಿಕ್ಕದಿದ್ದರೆ ಏನು ಮಾಡಾನು? ಉಳುವುದಕ್ಕೆ ಎತ್ತುಗಳನ್ನು ಕೊಂಡುಕೊಳ್ಳಲು ದುಡ್ಡಿಲ್ಲದಿದ್ದರೆ ಏನಾದೀತು? ದುಡಿಮೆ ಮಾಡುವವನಿಲ್ಲದಿದ್ದರೆ ಬೆಳೆಯಾದೀತೇ? ಆದ್ದರಿಂದ ಭೂಮಿಗೆ ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯ ಈ ಉತ್ಪಾದನಾ ಸಾಧನಗಳಿಗೂ. ಆದ್ದರಿಂದ ಹಣವಿಲ್ಲದೆ ಬರೀ ಭೂಮಿಯಿಂದ ಏನೂ ಪ್ರಯೋಜನ ಲಭಿಸದು. ಆದ್ದರಿಂದ ರಾಷ್ಟ್ರದ ಹಿತದೃಷ್ಟಿಯಿಂದ ಹಣವನ್ನು ಎಳೆಯತಕ್ಕ ಪ್ರಯತ್ನ ಮಾಡಬೇಕು. ದೇಶದಲ್ಲಿ ಈಗಲೂ ಲಕ್ಷೋಪಲಕ್ಷ, ಕೋಟಿಕೋಟಿಯಷ್ಟು ಹಣ ಬ್ಯಾಂಕುಗಳಲ್ಲಿ ನುಮ್ಮನೆ ಬಿದ್ದಿದೆ. ಇದನ್ನೆಲ್ಲಾ ಉಪಯೋಗಕ್ಕೆ ತರುವ ಪ್ರಯತ್ನ ಮಾಡಿದ್ದೀರಾ? ಅದನ್ನಿಂದು ನಿಮಗೆ ಮುಟ್ಟುವುದಕ್ಕೆ ಧೈರ್ಯವಿಲ್ಲ. ಅದನ್ನು ಮುಟ್ಟದೆ ಹಳ್ಳಿಯಲ್ಲಿ ಕುಳಿತುಕೊಂಡಿರುವ ಬಡಪಾಯಿಯನ್ನು ಹಿಡಿದುಕೊಂಡು ಅಲ್ಲಾಡಿಸುತ್ತಿದ್ದೀರಿ! ಈ ಹೊತ್ತಿನ ದಿವಸ ಹಳ್ಳಿಯಲ್ಲಿರುವ ನಮ್ಮ ಆಸ್ತಿಯನ್ನೆಲ್ಲಾ ಮಾರಿದರೂ ಪಟ್ಟಣದಲ್ಲಿರುವ ಒಂದು ಮನೆಯ ಬೆಲೆಯಾಗು

(SRI H. M. CHANNABASAPPA)

ವುದಿಲ್ಲ. ದೇಶಾದ್ಯಂತ ಧನದ ವ್ಯಾಮೋಹ ಹೆಚ್ಚಿ ಪ್ರಕರಣಗಳು ಹೇಗೆ ಹೋಗುತ್ತಿವೆ ಎಂಬುದನ್ನು ನೀವು ಯೋಚನೆ ಮಾಡಿಲ್ಲ. ಈ ಹೊತ್ತು ನೀವು ಪಟ್ಟಣದಲ್ಲಿ ಮೈ ಬೆವರು ಸುರಿಸದೆ ಲಕ್ಷಗಟ್ಟಲೆ ಸಂಪಾದಿಸುತ್ತಿರುವವರನ್ನು ಬಿಟ್ಟು, ಹಳ್ಳಿಯಲ್ಲಿದ್ದು ಕೊಂಡು ಹಗಲು ರಾತ್ರಿ ಬೆವರು ಸುರಿಸಿ ದುಡಿಯುತ್ತಿರುವವರನ್ನು ಐದೂವರೆ ಅಡಿಯ ಮೇಲೆ ಎದ್ದರೆ ಕತ್ತರಿಸಿ ಹಾಕುತ್ತೇನೆ ಎಂದು ಹೇಳುತ್ತೀರಿ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು)—ತಾವು ಷೇರ್ ಹೋಲ್ಡರುಗಳು ಮತ್ತು ಬ್ಯಾಂಕರುಗಳ ವಿಚಾರ ಹೇಳುತ್ತಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ceiling ಹಾಕುತ್ತಿದ್ದೇವೆಂದು ಹೇಳುತ್ತಿದ್ದೀರಿ. ಯಾವ ceiling limit ಆದರೂ ಹಾಕಿ, ಮುಖ್ಯವಾಗಿ ನಾನು ಮೊದಲೇ ಹೇಳಿದ ಹಾಗೆ, if it could lead to Socialism. ಇತ್ತ Capitalismನ್ನೂ ಇಟ್ಟುಕೊಂಡು ಅತ್ತ Socialismನ್ನೂ ತಂದು ರಾಷ್ಟ್ರ ಕಟ್ಟುತ್ತೇವೆ ಎನ್ನುವುದು ಕನಸಿನ ಮಾತು. ಸೋಷಿಯಲಿಸಂ ಎಂದ ಮೇಲೆ ಹೃದಯಾಂತರಾಳದಿಂದ ಮನಃಪೂರ್ವಕವಾಗಿ ಅದನ್ನು ಕಾರ್ಯಗತ ಮಾಡುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡಿಯೇ ತೀರಬೇಕು. ಈ ಹೊತ್ತು ನಾನು ಹೇಳುತ್ತೇನೆ, ತಾವು ಎಲ್ಲರಿಗೂ ಭೂಮಿ ಕೊಡುತ್ತೇವೆಂದು ಹೇಳುತ್ತಾ ನಾನಾ ಆಸೆ ಪಾಸೆಗಳನ್ನು ಜನರಿಗೆ ತೋರಿಸಿದ್ದೀರಿ. ನಾವು ಆಶ್ವಾಸನೆ ಕೊಟ್ಟುಬಿಟ್ಟಿದ್ದೇವೆಂದು ಹೇಳಿ ಭೂಮಿಯನ್ನು ಹಂಚಿಕೆ ಮಾಡುತ್ತೇವೆನ್ನುವುದು ಸರಿಯಲ್ಲ. ಎಲ್ಲರೂ ಚೆನ್ನಾಗಿರಬೇಕು, ಎಲ್ಲರೂ ಸುಖವಾಗಿರಬೇಕು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಮುಂದುವರಿಯಬೇಕು. ಈಗ ನೀವು ಒಂದು ವೇಳೆ ಭೂಮಿ ಹಂಚಿದರೂ ಅವನಿಗೆ ಅದಕ್ಕೆ ಕೊಡುವುದಕ್ಕೆ ದುಡ್ಡೆಲ್ಲಿಂದ ಬರಬೇಕು; ಆಮೇಲೆ ಎತ್ತಿಗೆ ಎಲ್ಲಿಗೆ ಹೋಗಬೇಕು ? ಎತ್ತಿಲ್ಲದಿದ್ದರೆ ವ್ಯವಸಾಯವಾಗುತ್ತದೆಯೇ ? Money is as important as land. When land is made available, money must be made available. From whatever source you bring money, I do not mind.

[MR. SPEAKER in the Chair].

Mr. SPEAKER.—May I know how much more time the Hon'ble Member would still require ?

Sri H. M. CHANNABASAPPA.—I am almost at the tail end of my speech, Sir.

Sri K. PUTTASWAMY.—Sir, in some cases, the tail itself will be very long (*Laughter*).

Mr. SPEAKER.—I propose that Sri Channabasappa will finish his speech today.

Sri H. M. CHANNABASAPPA.—I do not want to trouble either the Speaker or the Hon'ble Members here. I only want to place certain facts which are very important, if only the House and you can bear with me, Sir. Otherwise I will sit down.

ಒಬ್ಬ ಸದಸ್ಯರು.—ಯಾರೂ ಅವರನ್ನು ತಡೆಗಟ್ಟಬೇಕೆಂದಿಲ್ಲ. ಅವರಿಗೆ ಕೊಟ್ಟಿರುವ ಹಾಗೆ special consideration ನ್ನನ್ನು ಇತರರಿಗೂ ಕೊಡಬೇಕೆಂಬುದೇ ನನ್ನ ಕೋರಿಕೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೀಲಿಂಗ್ ಎಷ್ಟಿರಬೇಕು ಎಂಬ ಪ್ರಶ್ನೆಯನ್ನು ಎತ್ತಿದರು. ಈ ವಿಚಾರದಲ್ಲಿ ನಾನಾ ಕಮಿಟಿಗಳು ನಾನಾ ಸಲಹೆಗಳನ್ನು ಮಾಡಿವೆ. ಫೈನಾನ್ಸ್ ಕಮಿಷನ್ನಿನವರು ಇದೇನೂ ಬೇಕಿಲ್ಲವೆಂದೇ ಹೇಳಿದ್ದಾರೆ. ಕಾಂಗ್ರೆಸ್ ಎಕನಾಮಿಕ್ ಪ್ರೊಗ್ರಾಂ ಕಮಿಟಿಯವರು ತಿಂಗಳೊಂದಕ್ಕೆ 4,000 ರೂಪಾಯಿಗಳ ಉತ್ಪನ್ನವಿರುವಷ್ಟು ಒಂದು ಸೀಲಿಂಗ್ ಇರಬೇಕೆಂದು ಹೇಳಿದ್ದಾರೆ. ಕಾಂಗ್ರೆಸ್ Agrarian ಕಮಿಟಿಯವರು ಮೂರು ಫ್ಯಾಮಿಲಿ ಹೋಲ್ಡಿಂಗ್ ನಷ್ಟು ceiling ಆಗಿ ಇಡಬೇಕೆಂದು ಹೇಳಿದ್ದಾರೆ. ಆದರೆ, ಪ್ರೊಫೆಸರ್ ರಂಗಾಅವರು ಮತ್ತು ರಾಮಸ್ವಾಮಿ ರೆಡ್ಡಿಯಾರ್‌ಅವರು, ಇದು ಸರಿಯಲ್ಲ, ಗ್ರಾಮಾಂತರಗಳಲ್ಲಿ leadership ಬೆಳೆಯಬೇಕಾದರೆ ಜೀವನರಂಗದ ವಿವಿಧ ಭಾಗಗಳಲ್ಲಿ ಒಂದಕ್ಕೊಂದಕ್ಕೆ ತಾರತಮ್ಯವುಂಟುಮಾಡುವುದು ಸರಿಯಲ್ಲ. ಯಾವ ತೆರದ ಸೀಲಿಂಗ್ ಹಾಕಿದರೂ ಅದೇ ಸೀಲಿಂಗ್ ಎಲ್ಲಾ ಕ್ಷೇತ್ರಗಳಲ್ಲೂ ಅನ್ವಯವಾಗಬೇಕು. ಆಮೇಲೆ ಹೈದರಾಬಾದ್ ಕಮಿಟಿಯವರು ಐದರಿಂದ ಹತ್ತು ಫ್ಯಾಮಿಲಿ ಹೋಲ್ಡಿಂಗಿನಷ್ಟಕ್ಕೆ ceiling ಹಾಕಬಹುದು ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಜನ ಸಾಮಾನ್ಯರ ಅಭಿಪ್ರಾಯ, ದೇಶದಲ್ಲಿ ಒಂದು ಕ್ಷೇತ್ರದಲ್ಲಿ ಸೀಲಿಂಗ್ ಹಾಕಿ ಇನ್ನೊಂದು ಕ್ಷೇತ್ರದಲ್ಲಿ ಹಾಗೆಯೇ ಬಿಡುವುದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ; ಜನರಲ್ಲಿ ಅತೃಪ್ತಿ ಅಸಮಾಧಾನಗಳು ಉಂಟಾಗುವುದಕ್ಕೆ ಅವಕಾಶವಾಗುತ್ತದೆ ಎಂಬುದಾಗಿದೆ. Low ceiling fix ಮಾಡಿದ್ದೇ ಆದರೆ, ಗ್ರಾಮಾಂತರಗಳಲ್ಲಿ ವ್ಯವಸಾಯವನ್ನೇ ಅವಲಂಬಿಸಿಕೊಂಡಿರತಕ್ಕ 130-150 ಲಕ್ಷ ಜನ ಈ ಮಾನ್ಯ ಸಭೆಗೆ ಚುನಾಯಿತರಾಗಿ ಬರುವುದಕ್ಕೆ ಅವಕಾಶವಿಲ್ಲದಹಾಗಾಗುತ್ತದೆ. ನಮ್ಮ ಉತ್ಪನ್ನ 5,400 ರೂಪಾಯಿಗಳಿಗೆ ಮೇಲಿರಕೂಡದೆಂದು ಮಾಡಿದರೆನ್ನೋಣ. ಅಲ್ಲಿಗೆ 5,400 ರೂಪಾಯಿಗಳಲ್ಲಿ ತಮ್ಮ ವಿಶಿಷ್ಟ ವ್ಯವಹಾರಗಳನ್ನೂ ನಡೆಸಿ, ಮುಂದಿನ ಐದು ವರ್ಷದ ಚುನಾವಣೆಗಳು ನಡೆಯುವ ಹೊತ್ತಿಗೆ ಕಾನೂನು ಪ್ರಕಾರ ಹೋದರೂ ಸುಮಾರು 6,000 ರೂಪಾಯಿಗಳನ್ನು ಹೊಂದಿಸಿಕೊಳ್ಳಬೇಕೆಂದರೆ, ಅದು ಸಾಧ್ಯದ ಮಾತೇ ? ಇಷ್ಟರಲ್ಲಿ ಮಕ್ಕಳ ವಿದ್ಯಾಭ್ಯಾಸವನ್ನೂ ನಡೆಸಿ, ನಿತ್ಯ ಜೀವನ ಕಳೆದು, ಕೊನೆಗೆ ಚುನಾವಣೆಯಲ್ಲೂ ಹೋರಾಡಿ ಜಯಗಳಿಸಬಲ್ಲೆವೆನ್ನುವ ಜನ ಗ್ರಾಮಾಂತರಗಳಲ್ಲಿ ಇರಬಲ್ಲರೇ ?

ಒಬ್ಬ ಸದಸ್ಯರು.—ಇದೊಂದೇ ಎಲಕ್ಷನ್ನೇ ಅವನು ಹೋರಾಡಬೇಕಾಗಿರುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಳೆ ಬೆಂಗಳೂರಿನಲ್ಲಿರುವವರಿಗೆ ಹೆರಿಯಾಪಟ್ಟಣದಲ್ಲಿ ಕೋ-ಆಪರೇಟಿವ್ ಫಾರಂ ಹಂಚಿಬಿಟ್ಟರೆ ನನ್ನ ಗತಿಯೇನು ? ಇತರ ಕ್ಷೇತ್ರಗಳಲ್ಲಿ ನಮಗೆ ಸಾಧ್ಯವಿಲ್ಲ. ಜನರಿಗೆ ಹೊಟ್ಟೆಗಿಲ್ಲದಿರುವಾಗ ನಾನು 50 ರೂಪಾಯಿ ಕೊಟ್ಟು ವ್ಯವಸಾಯದ ಕೆಲಸ ಮಾಡಿಸಿರಬಹುದು. ಪ್ರಜಾ ಪ್ರಭುತ್ವದಲ್ಲಿ ಗ್ರಾಮಾಂತರಗಳಲ್ಲಿರುವ ಜನ ಧಾನ್ಯ

ವಷ್ಟಾಳಬೇಕೆಂದು ನಿರ್ಧಾರ ಮಾಡಿರುವಾಗ ಈ ದಿವನ ಅದಕ್ಕೆ ಸರಿಯಾದ ಸಮಾಜ ನಿರ್ಮಾಣ ಮಾಡ ಬೇಕು, ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ದಿವನ ಬೇರೆ ದೇಶಗಳಲ್ಲಿ ಯಾವ ರೀತಿ ಮಾಡಿದ್ದಾ ರೆಂಬುದನ್ನು ನೋಡದೆ ಇಷ್ಟಕ್ಕೇ ಕೊನೆಗಾಣಿಸಿದರೆ ಬಹುಭಾಗದ ಗ್ರಾಮಾಂತರ ಜನರಿಗೆ ಕೊಂದರೆ ಯಾಗಿ ಪರಿಸ್ಥಿತಿಯೇನಾಗುತ್ತದೆ, ಪ್ರಜಾಪ್ರಭುತ್ವದ ತತ್ವ ಪರಿಪಾಲನೆಯಾಗುತ್ತದೆಯೆ ಎಂಬುದನ್ನು ನೋಡಬೇಕು. ಬ್ಯೂರೋಕ್ರಾಟಿಕ್ ಸರ್ಕಾರ ವಿದ್ದಾಗ ಯಾವ ಪರಿಸ್ಥಿತಿಯಿತ್ತೋ ಅದು ಮುಂದೆ ಇರಬಾರದು. ಅವಕ್ಕೆ ಅವಕಾಶವಿಲ್ಲದಂತೆ ಎಲ್ಲ ವನ್ನೂ ದೃಷ್ಟಿಯಲ್ಲಟ್ಟು ಸಮಗ್ರವಾಗಿ ಮನುಷ್ಯ ಯನ್ನು ಜಾರಿಗೆ ತಂದು ಕಾರ್ಯಗತ ಮಾಡಬೇಕು. ಯಾರಿಂದಲೂ ಪ್ರತಿಭಟನೆ ಬಾರದಿರುವ ಹಾಗೆ ಜನರಿಗೆ ಅನುಕೂಲವಾಗುವ ಹಾಗೆ ಒಂದು ಸರಿಯಾದ ಮಾರ್ಗವನ್ನನುಸರಿಸಿದರೆ ದೇಶಕ್ಕೆ ಒಳ್ಳೆಯ ದಾಗುತ್ತದೆ.

Sri D. DEVARAJ URS.—I want to know from my friend the number of farmers who will be affected by the ceiling that is suggested in this Report.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಈ ವರದಿ ಯಲ್ಲೇ ಇದೆ. ಎಷ್ಟು ಸೀಲಿಂಗ್ ನಿಗದಿಮಾಡು ತ್ತಾರೋ ಅದರ ಮೇಲೆ ಲೆಕ್ಕ ಹಾಕಬೇಕಾಗುತ್ತದೆ.

Sri J. B. MALLARADHYA.—That is the one thing which is not mentioned in the Report. If the ceiling proposed by the Committee is given effect to, what is the number of holdings based on that ceiling and how many people will be affected ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಷ್ಟು ಲಕ್ಷ ಎಕರೆ ಬಿಡುಗಡೆಯಾಗಬೇಕೆಂದು ಹೇಳಿಲ್ಲ. ಅದು ಸಮಿತಿ ಯವರ ತಪ್ಪಲ್ಲ, ಕಾಲಾವಕಾಶ ಕಡಿಮೆಯಾಗಿತ್ತು, ಅಂಕಿಅಂಶ ಸರ್ಕಾರ ಕೊಟ್ಟಿಲ್ಲ ಎಂಬುದು ನನ್ನ ಊಹೆ.

ದೇಶದಲ್ಲಿ ಅನ್ನದ ಅಭಾವ ಇಷ್ಟು ಹೆಚ್ಚಾಗಿರುವಾಗ ಎಷ್ಟು ಲಕ್ಷ ಎಕರೆ ಸರ್ಕಾರದ ಕೈಲಿದೆಯೋ ಅದರ ಕಡೆ ಗಮನ ಹೋಗಿಲ್ಲ. 35 ಲಕ್ಷ ಎಕರೆ ಹಿಡುವಳಿ ಬಂಜರು ಈ ದಿವಪ ಪಾಳು ಬಿದ್ದಿದೆ; ವ್ಯವಸಾಯಕ್ಕೆ ಕೊಟ್ಟಿರುವ ಜಮೀನುಗಳಲ್ಲಿ ವ್ಯವಸಾಯ ಮಾಡದೆ ಪಾಳು ಬಿದ್ದಿರುವುದು ಈ ದಿವನ ಇಷ್ಟಿದೆ: ಬಿಜಾಪುರ ದಲ್ಲಿ 2,51,300 ಎಕರೆ ಸರ್ಕಾರಿ ಬಂಜರು, ಹಿಡುವಳಿ ಬಂಜರು ಭೂಮಿಯಿದೆ. 15ಲಕ್ಷ ಚಿಲ್ಲರೆ ಎಕರೆ ಸರ್ಕಾರಿ ಬಂಜರು. 51ಲಕ್ಷ ಎಕರೆ ಪಾಳು ಬಿಟ್ಟುಕೊಂಡು ಈ ದಿವನ ದೇಶದಲ್ಲಿ ಉತ್ಪತ್ತಿ ಹೆಚ್ಚಬೇಕೆಂದು ಹೇಳಿದರೆ ಎರಡು ಮಾರ್ಗವಿದೆ, ಒಂದು ಎಕ್ಸ್‌ಟೆನ್ಸಿವ್ ಕಲ್ಟಿವೇಷ್ಟ್, ಇನ್ನೊಂದು ಇಂಟೆನ್ಸಿವ್ ಕಲ್ಟಿವೇಷ್ಟ್. Why have you not done it ?

Sri J. B. MALLARADHYA.—I have a set of figures published by the Government of India called the Agricultural Statistics of the reorganised States. The figures furnished by my friend Sri Channabasappa are not capable of verification so far as Mysore is concerned.

Sri H. M. CHANNABASAPPA.—These are the figures furnished by the Government of Mysore in the year 1957-58.

Sri J. B. MALLARADHYA.—My information is basedon the figures furnished by the All-India Agricultural Statistics of the re-organised States. According to that, the figures furnished by my Hon'ble friend are not correct.

Sri H. M. CHANNABASAPPA.—Then, the Mysore Government has furnished false figures to the Government of India.

Sri J. B. MALLARADHYA.—This is the authenticated figure after the reorganisation of States.

Sri H. M. CHANNABASAPPA.—These are the figures furnished by the Government of Mysore. If you think them to be false, I have nothing to say.

1956ನೆಯ ಇಸವಿ ನವೆಂಬರ್ ಒಂದನೆಯ ತಾರೀಖು ವಿಲೀನೀಕರಣವಾದಮೇಲೆ ನನಗೆ ತಿಳಿದಹಾಗೆ ಬಡವರಿಗೆ ಭೂಮಿ ಹಂಚುವುದು ನಿಂತುಹೋಯಿತು. ಕೊಡುವುದು ನಿಂತುಹೋಗಿ ಒಂದೂವರೆ ವರ್ಷವಾ ಯಿತು. ಮೊದಲು ನಮ್ಮ ಭೂಮಿ ಏನು ಮಾಡಿದ್ದೇ ವೆಂದು ಯೋಚನೆ ಮಾಡದಿದ್ದರೆ ಏನು ಮಾಡಿದ್ದೇ ಹಣವಿಲ್ಲವೆಂದು ಹೇಳಬಹುದು, ಮನಸ್ಸು ಮಾಡಿದರೆ ಎಷ್ಟು ಬೇಕೋ ಅಷ್ಟು ಬರುತ್ತದೆ ಮನಸ್ಸು ಮಾಡುವ ಹಾಗಿಲ್ಲ, ಹಣ ಬರುವಹಾಗಿಲ್ಲ. ಜೊತೆಗೆ ಯೋಜನೆ ಗಳನ್ನು ಹಾಕಬಹುದು. ಬೇಕಾದಷ್ಟು ಟ್ರಾಕ್ಟರು ಗಳಿವೆ. ಈ ಟ್ರಾಕ್ಟರುಗಳಿಂದ ನಾಲ್ಕು ವರ್ಷಗಳಲ್ಲಿ ಸಾಗುವಳಿ ಮಾಡಿರುವುದು ಹನ್ನೊಂದು ಸಾವಿರ ಎಕರೆ. ಇಂಡಿಯಾ ಸರ್ಕಾರದಲ್ಲಿ ಏಳು ಕೋಟಿ ಎಕರೆ ಹಿಡುವಳಿ ಬಂಜರು ಭೂಮಿಯಿದೆ. ಎಲ್ಲಾ ಸೇರಿ ಒಟ್ಟು ಹನ್ನೊಂದು ಕೋಟಿ ಎಕರೆ ಸಾಗುವಳಿ ಬಂಜರುದೆ. ಇದು ಸರ್ಕಾರ ಒದಗಿಸಿರುವ ಅಂಕಿ ಅಂಶ. ಹೀಗಿರು ವುದಕ್ಕೇನು ಕಾರಣ ? This is a very serious matter and I charge the Government with failure to discharge its duty in this respect. The Government is the biggest landlord and it has to put every inch of land in the State to the best possible use. I have no objection to call upon the people to make any sacrifice whatsoever in the national interest. ಯಾವ ರಚನಾತ್ಮಕವಾದ ಮಾರ್ಗಗ ಳನ್ನೂ ನೀವು ಅನುಸರಿಸುತ್ತಿಲ್ಲ. ನೀವು ಮಾಡು ತ್ತಿರುವ ಕಾನೂನುಗಳಿಂದ ಆಗುತ್ತಿರುವುದೇನು ? All the tenancy laws have been a failure. It is an admitted fact. The Bombay Tenancy Act, however progressive it may be, has also been a failure.

Mr. SPEAKER.—The Hon'ble Member need not make a reference to the Bombay Tenancy Act here.

Sri H. M. CHANNABASAPPA.—The question has been referred to in the Report.

6 P.M.

What guarantee is there that we are going to succeed? The lines which have been proposed cannot be implemented. Therefore my suggestion is that whatever the House may determine.....

Sri K. PUTTASWAMY.—May I know the date for wiping out the tenants?

Sri H. M. CHANNABASAPPA.—How best the existing land could be put to use must be considered. The pressure of the people on the land must be relieved and not increased.

Sri S. D. KOTHAVALE.—Even in a capitalist manner?

Sri H. M. CHANNABASAPPA.—Subject to over-all consideration you must do justice as you think best.

Sri C. J. MUCKANNAPPA.—How long are we sitting, Sir?

Mr. SPEAKER.—Anyway, the Hon'ble Member Sri Channabasappa must finish his speech today.

Sri J. B. MALLARADHYA.—Let us prepare ourselves. (*Laughter*).

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದನ್ನು ಬಿಟ್ಟುಬಿಟ್ಟು ನೀವು ಹೇಳುವ ರೀತಿಯಲ್ಲಿ ಊರಿಗೆಲ್ಲಾ ಹಂಚಿಬಿಟ್ಟರೆ, ಕೇಳಿದವರಿಗೆಲ್ಲಾ ಭೂಮಿ ಕೊಟ್ಟುಬಿಟ್ಟರೆ ಅದು ಸಮಾಧಾನಕರವಾಗುವುದಿಲ್ಲ. ಕೋ-ಆಪರೇಟಿವ್ ಫಾರ್ಮಿಂಗ್ ಒಂದರ ಮೇಲೆ ಮಹತ್ತರವಾದ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಇಂಡಿಯಾ ಸರ್ಕಾರದವರು, ಮೈಸೂರು ಸರ್ಕಾರದವರು ಒಂದು ಪ್ರೋಗ್ರಾಂ ಹಾಕಿದ್ದಾರೆ. ಇದಕ್ಕೆ ಅಲ್ಟಿಮೇಟ್ ಎಂಡ್ ಎಲ್ಲಿದೆ? ಕೋ-ಆಪರೇಟಿವ್ ವಿಲೇಜ್ ಮ್ಯಾನೇಜ್‌ಮೆಂಟ್ ವಿಚಾರದಲ್ಲಿ ನಾನು ಬಹಳ ಭಕ್ತಿಯಿಂದಲೂ ಮತ್ತು ಪಶ್ಚಾತ್ತಾಪದಿಂದಲೂ ಹೇಳುತ್ತಿದ್ದೇನೆ. ನಮ್ಮಲ್ಲಿ ಪೆಸೆಂಟ್ ಪ್ರೊಪ್ರೈಟರ್‌ಷಿಪ್ ಮತ್ತು ಪೆಸೆಂಟ್ ಕಲ್ಟಿವೇಟರ್‌ಷಿಪ್ ಒಪ್ಪಿಕೊಂಡಮೇಲೆ it is miserable. Any amount that we have invested so far is a criminal waste.

Sri T. D. MARANNA (Magadi).—Can an Hon'ble Member speak in many languages?

Mr. SPEAKER.—The point is whenever the Hon'ble Member Sri Channabasappa gets into heat he will express himself in English (*Laughter*). I do not say it is his weakness, it is also my weakness.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಮ್ಮ ಭರತಖಂಡದಲ್ಲಿ ಹಾಗೂ ಮೈಸೂರಿನಲ್ಲಿ ಕೋ-ಆಪರೇಟಿವ್ ಸೊಸೈಟಿಗಳೂ, ಫಾರಮಿಂಗ್ ಸೊಸೈಟಿಗಳೂ ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ? ನಾನು ಮಂತ್ರಿಯಾಗಿದ್ದಾಗ ಖುದ್ದಾಗಿ ಹೋಗಿ ಅವುಗಳ ಕೆಲಸವನ್ನು ಪರಿಶೀಲನೆ ಮಾಡಿದ್ದೇನೆ.

ಭರತಖಂಡದಲ್ಲಿ ಇರತಕ್ಕಂಥ ಕೋ-ಆಪರೇಟಿವ್ ಫಾರ್‌ಮಿಂಗ್ ಪರಿಶೀಲನೆಮಾಡಿ ಇಂಡಿಯನ್ ಕೋ-ಆಪರೇಟಿವ್ ಯೂನಿಯನ್ ಅವರು ಒಂದು ವರದಿ ಕೊಟ್ಟಿದ್ದಾರೆ. ಅದರಲ್ಲಿ ಕೋ-ಆಪರೇಟಿವ್ ಫಾರ್‌ಮಿಂಗ್‌ನಲ್ಲಿ ಯಾವ ಯಾವ ಆಶಾಭಾವನೆ ಇಟ್ಟು ಕೊಂಡಿದ್ದೆವೋ ಅದಕ್ಕಾಗಿ ಪಶ್ಚಾತ್ತಾಪಪಡಬೇಕಾಗಿದೆ ಎಂದು ಹೇಳಿದ್ದಾರೆ. They are all a miserable failure. ನಮಗೆ ಈ ಕೋ-ಆಪರೇಟಿವ್ ಫಾರ್‌ಮಿಂಗ್ ಅಥವಾ ವಿಲೇಜ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಅತ್ಯಾವಶ್ಯಕವಲ್ಲ. ಇದು ನದ್ಯಕ್ಕೆ ಅನಾವಶ್ಯಕ, ಮುಂದಕ್ಕೆ ಯಾವಾಗಲಾದರೂ ಇದನ್ನು ಮಾಡಿಕೊಳ್ಳೋಣ. ನಿಮ್ಮೆಲ್ಲರ ಅನುಭವದಲ್ಲಿ ಇದು ಒಂದು ಫ್ಯಾಡ್ ಆಗಿದೆ. ಚೈನಾದಲ್ಲಿ ಕೋ-ಆಪರೇಟಿವ್ ಫಾರ್‌ಮಿಂಗ್ ನಡೆಯುತ್ತಾ ಇದ್ದ ಪಕ್ಷದಲ್ಲಿ ಅಲ್ಲಿರ ತಕ್ಕಂಥ ಪೊಲಿಟಿಕಲ್ ಸೆಟ್‌ಅಪ್ ಅದಕ್ಕೆ ಬಹಳ ಸಹಾಯಕವಾಗಿದೆ. ನಾಳೆ ಆ ಪೊಲಿಟಿಕಲ್ ಸೆಟ್ ಅಪ್ ಅಲ್ಲಿ ಹೋಗಿಬಿಟ್ಟರೆ ಈ ಕೋ-ಆಪರೇಟಿವ್ ಫಾರ್‌ಮಿಂಗ್ ಏನಾಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಈ ಕೋ-ಆಪರೇಟಿವ್ ಫಾರ್‌ಮಿಂಗ್ ಮತ್ತು ಕೋ-ಆಪರೇಟಿವ್ ವಿಲೇಜ್ ಮ್ಯಾನೇಜ್‌ಮೆಂಟ್ ವಿಷಯಗಳಲ್ಲಿರುವ ಚಳವಳಿಗಳನ್ನು ಕೆಲವು ಕಾಲ ಕೊಂಚ ಷೆಲ್ವ್ ಮಾಡಿದರೆ ಉತ್ತಮ.

ಸರ್ಕಾರ ಮೈಸೂರಿನಲ್ಲಿ ಒಂದು ಲ್ಯಾಂಡ್ ಬ್ಯಾಂಕ್ ಮಾಡಬೇಕು. ಈ ಭೂಬ್ಯಾಂಕ್ ಕೆಲಸ ಮಾಡುವುದರ ಜೊತೆಗೆ ನಮ್ಮ ಮೈಸೂರಿನಲ್ಲಿ ಸ್ಟೇಟ್ ಬ್ಯಾಂಕುಗಳು ಕೆಲಸ ಮಾಡಲಿ. ಭೂಮಿಯನ್ನು ಕೇಳತಕ್ಕವರಿಗೆ, ಬಡವರಿಗೆ, ಹಣವನ್ನು ನಂಪೂರ್ಣವಾಗಿ, ಎಂದರೆ ಭೂಮಿಯ ಫುಲ್ ವ್ಯಾಲ್ಯು (ಶೇಕಡ 90ರಷ್ಟಾದರೂ) ಕೊಡುವುದಕ್ಕೆ ಈ ಭೂ ಬ್ಯಾಂಕುಗಳಲ್ಲಿ ವ್ಯವಸ್ಥೆ ಮಾಡಬೇಕು. ಇವತ್ತು ಹೊಲ ಉಳತಕ್ಕವನಿಗೆ ಯಾವ ಬ್ಯಾಂಕಿನಲ್ಲಿ ಒಂದು ರೂಪಾಯಿ ಸಾಲ ಸಿಕ್ಕುತ್ತದೆ, except Land Mortgage Bank ಅದು ಹೋಗಲಿ, ಕಮರ್ಷಿಯಲ್ ಬ್ಯಾಂಕುಗಳು ಅವನಿಗೆ ಎಲ್ಲಿಯಾದರೂ ಸಾಲ ಕೊಡುತ್ತವೆಯೇ? ಎರಡು ಆಣೆ ಸಹ ಕೊಡುವುದಿಲ್ಲ, ಕ್ರೆಡಿಟ್-ವರ್ತಿನೆಸ್ ಇಲ್ಲದೆ ಹೋದರೆ ಇವನು ವ್ಯವಸಾಯ ಮಾಡುವುದು ಏನು? ಯಾವ ಮಾರ್ಗದಲ್ಲಿ ವ್ಯವಸಾಯವನ್ನು ರಿವೈಟಲೈಸ್ ಮಾಡಬೇಕು? ಒಂದೇ ಮಾತಿನಲ್ಲಿ ಅವನು ಭೂಮಿಯ ಒಡೆಯನಾಗುವುದು ಹೇಗೆ? ದುಡ್ಡು ಎಲ್ಲಿದೆ? ಅವನ ಹತ್ತಿರ ಒಂದೂವರೆ ಆಣೆ ಇಲ್ಲ. ಅವನಿಗೆ ಸಾಯಂಕಾಲಕ್ಕೆ ಊಟಕ್ಕೆ ಇಲ್ಲ. ಶಾಸನವನ್ನು ಬರೆದುಬಿಟ್ಟರೆ ಅವನಿಗೆ ಭೂಮಿ ಹೋಯ್ತೇನು?

ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಗೌರ್ನಮೆಂಟ್ ಗ್ಯಾರಂಟಿ ಕೊಟ್ಟು ಲಕ್ಷೋಪಲಕ್ಷ ರೂಪಾಯಿ ಕೊಟ್ಟಿದ್ದಾರೆ. ನಾನು ಕೈಗಾರಿಕಾ ಮಂತ್ರಿಯಾಗಿದ್ದಾಗ್ಗೆ ನಾನೇ ಹಾಗೆ ಹಣ ಕೊಟ್ಟಿದ್ದೇನೆ. ಗೌರ್ನಮೆಂಟ್

ಗ್ಯಾರಂಟಿ ಕೊಟ್ಟು ಕೈಗಾರಿಕೆಗಳಿಗೆ ಬ್ಯಾಂಕುಗಳಲ್ಲಿ ಸಾಲ ಕೊಡಿಸುತ್ತಾ ಇದ್ದಾರೆ. ಜಪಾನನ್ನು ಉತ್ತಮ ದರ್ಜೆಗೆ ತರಬೇಕು.

ಆದುದರಿಂದ ಆ ಮಾರ್ಗದಲ್ಲಿ ಕೈಗಾರಿಕೋದ್ಯಮಗಳಿಗೆ ಯಾವ ರೀತಿಯಲ್ಲಿ ಸಾಲಗಳನ್ನು ಸರ್ಕಾರದ ಗ್ಯಾರಂಟಿ ಮೇಲೆ ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರೋ ಅದೇ ರೀತಿ ಸರ್ಕಾರದ ಗ್ಯಾರಂಟಿ ಮೇಲೆ ಗೇಣಿದಾರರಿಗೆ, ಭೂಮಿಯನ್ನು ಪಡೆದಿರುವವರಿಗೆ ಮತ್ತು ವ್ಯವಸಾಯ ಮಾಡಬೇಕೆಂಬ ಇಚ್ಛೆ ಇರತಕ್ಕವರೆಲ್ಲರಿಗೂ ಕೂಡ ಭೂಮಿಯ full value ಎಷ್ಟಿದೆ ಅಷ್ಟನ್ನು, ರಿಜಿಸ್ಟರ್‌ಮಾಡಿ ಬಾಂಡನ್ನು ಕೊಟ್ಟರೆ ಎಲ್ಲ ಬ್ಯಾಂಕುಗಳಲ್ಲಿಯೂ ಹಣವನ್ನು ಕೊಡುವ ಏರ್ಪಾಡು ಮಾಡಬೇಕು. ಆ ರೀತಿ ಕೊಟ್ಟ ಹಣವನ್ನು 20-30 ವರ್ಷಗಳಲ್ಲಿ ಕಂದಾಯದ ಜೊತೆಗೆ 1/20 ದಾಮಾಷಾ ಪ್ರಕಾರ ವಸೂಲ್ಮಾಡಬೇಕೆಂದು ಹೇಳುತ್ತೇನೆ. ಇದಾಗಬೇಕು. ಇಲ್ಲದಿದ್ದರೆ ದೇಶದಲ್ಲಿ ನಾವು ರಚನಾತ್ಮಕವಾಗಿ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ. ಒಂದುವೇಳೆ ಈ ಶಾಸನವನ್ನು ನಾವ ಪಾಸ್ ಮಾಡಬಹುದು, ನಮ್ಮ ಸ್ನೇಹಿತರು ದೂರಾಲೋಚನೆ ಮಾಡಬಹುದು. ಆದರೆ ಇದರಿಂದ ಜನಗಳಿಗೆ ಪ್ರಯೋಜನವಾಗುತ್ತದೆಂದು ಯಾರಾದರೂ ನಂಬಿಕೆಯನ್ನಿಟ್ಟುಕೊಂಡಿದ್ದರೆ ಅದನ್ನು ದಯವಿಟ್ಟು ಮರೆತುಬಿಡಿ. ಈಗ ಬೊಂಬಾಯಿ ಕಾನೂನು ಯಾವರೀತಿಯಲ್ಲಿದೆ. ಆದುದರಿಂದ ಈ ವ್ಯವಸ್ಥೆಯನ್ನು ಮಾಡುತ್ತೇವೆಂದು ಯಾವ ಕಾಲಕ್ಕೂ ತಿಳಿದುಕೊಳ್ಳಬೇಡಿ. ಈಗ ಬೇರೆ ಕಾನೂನುಗಳೆಲ್ಲ ಯಾವರೀತಿ ineffective ಆಗಿವೆಯೋ ಅದೇರೀತಿ ಮುಂದೆ ಇದೂ ಆಗುತ್ತದೆ. ನಾನು ಬಿಜಾಪುರ, ಕಾರವಾರ ಮುಂತಾದ ಭಾಗಗಳಿಂದ ಬಂದಂಥ ವ್ಯವಸಾಯಗಾರರನ್ನು ಅಲಾಯಿದಾ ಕರೆದುಕೊಂಡು ಹೋಗಿ ವಿಚಾರಿಸಿದ್ದೇನೆ. ಅವರ ಕಡೆಯಲ್ಲಿ ಕಾನೂನು ಹೇಗೆ ನಡೆಯುತ್ತಿದೆ ಎಂದು ಕೇಳಿದ್ದೇನೆ. ಈ ಕಾನೂನಿನಿಂದ ಏನಾಗಿದೆ ಎಂಬುದನ್ನು ಅವರು ಹೇಳಿದರು. ಕರಣೀಕರಾದವರಿಗೆ ಒಂದು ಗ್ರಾಮದಲ್ಲಿ ಎರಡು ಸಾವಿರ, ಮೂರು ಸಾವಿರ, ನಾಲ್ಕು ಸಾವಿರ—ಹೀಗೆ ಉತ್ಪತ್ತಿ ಸಂಬಳ ಬಂದಹಾಗೆ ಬರುತ್ತದೆಂದು ಹೇಳಿದರು. ಹೆಸರಿಗೆ ಮಾತ್ರ ಇಂಥ ಭೂಮಿಯನ್ನು ಇಂಥವನೇ ಸ್ವತಃ ಬೇಸಾಯ ಮಾಡುತ್ತಾನೆ ಎಂದು ಬರೆಯುತ್ತಾರೆ. ವಾಸ್ತವವಾಗಿ ಆ ಭೂಮಿಯನ್ನು ಗುತ್ತಿಗೆಗೆ ಕೊಟ್ಟು ವ್ಯವಸಾಯ ನಡೆಯುತ್ತಿರುತ್ತದೆ. ಆ ಗುತ್ತಿಗೆಯನ್ನು ಸಹ ಪೂರ್ವದಲ್ಲಿದ್ದಂತೆ ಅವನು ಬೆಳೆಯನ್ನು ಬೆಳೆದ ಮೇಲೆ ಕೊಡುವುದಿಲ್ಲ, ಅವನು ಸಾಲ ಸೋಲ ಮಾಡಿ ಹೆಂಡತಿಯ ತಾಳಿಯನ್ನು ಅಡವಿಟ್ಟು ಹಣ ತೆಗೆದು ಕೊಂಡು ಬಂದು ಭೂಮಿದಾರನಿಗೆ ಗುತ್ತಿಗೆಯನ್ನು ವರ್ಷದ ಮೊದಲನಲ್ಲಿಯೇ ಕೊಡಬೇಕು. ಒಂದು ವರ್ಷ ಮುಂಚೆ ಕೊಡಬೇಕು.

Mr. SPEAKER.—Those are not the full facts. Somebody has misinformed you about it.

Sri H. M. CHANNABASAPPA.—I have told you what the information is that may has been given to me.

Mr. SPEAKER.—I do not think Report there are any such facts. There be a small percentage like that.

Sri H. M. CHANNABASAPPA.—Unfortunately, Jatti Committee's Report says that it is thoroughly a failure. What can I do ?

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಶ್ಯಾನುಭೋಗರಿಗೆ ದುಡ್ಡು ಕೊಟ್ಟು ನಾವೇ personal cultivation ಮಾಡುತ್ತೇವೆಂದು ಬರೆಸಿಕೊಳ್ಳುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು. Personal cultivation ಮಾಡತಕ್ಕವರಿಗೆ ceiling fix ಮಾಡಬಾರದೆಂದು ಆ ದೃಷ್ಟಿಯಿಂದ ಹೇಳಿದರೇ, ಸ್ವಾಮಿ?

Sri H. M. CHANNABASAPPA.—I am telling you what has been brought to my notice. ಇದರಿಂದ ಏನಾಗುತ್ತದೆ ಎಂದರೆ ಈ ಕಾನೂನುಗಳನ್ನು ಈ ರೀತಿ ಮಾಡುವುದರಿಂದ ಅವರುಗಳಿಗೆಲ್ಲ ಆದಾಯಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ವಾಸ್ತವವಾಗಿ ಬಡವನಾದ ವನಿಗೆ ಅನುಕೂಲವಾಗುವುದಿಲ್ಲ. ಈ ವ್ಯವಹಾರಗಳಲ್ಲಿ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆ ಎನ್ನುವುದು ನನ್ನ ದೃಷ್ಟಿಗೆ ಬಂದಿದೆ; ತಮ್ಮ ದೃಷ್ಟಿಗೂ ಬಂದಿದೆ ಎಂದು ನನ್ನ ಭಾವನೆ. ಈ ರೀತಿಯಾಗುವುದಕ್ಕೆ ಅವಕಾಶ ಕೊಡಬೇಡಿ. ಇಂಥ ಕಾನೂನುಗಳನ್ನು ಆದಷ್ಟು ಸರಳವಾಗಿ ಮಾಡಬೇಕು ಎಂದು ನಾನು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಸೀಲಿಂಗ್ ಎಷ್ಟಿರಬೇಕು ಎಂದು ಎಲ್ಲರೂ ಕೇಳುತ್ತಿದ್ದಾರೆ. ಸೀಲಿಂಗ್ ಫಿಕ್ಸ್ ಮಾಡುವಾಗ ಧಾರಾಳವಾಗಿ ಒಂದು ತೀರ್ಮಾನ ಮಾಡಬೇಕು. ಆ ಸೀಲಿಂಗ್ ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗಬೇಕು. ಇವೊತ್ತೇ ಅದನ್ನು ಮಾಡಲು ಆಗಲಾರದು, ಆ ರೀತಿ ಆಗುವವರೆಗೂ ತಡೆಯಬೇಕು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಯಾವುದಾದರೂ ಒಂದು ಕ್ಷೇತ್ರದಲ್ಲಿ ಇದನ್ನು ಮೊದಲು ಪ್ರಾರಂಭಮಾಡಬೇಕು. ವ್ಯವಸಾಯ ಕ್ಷೇತ್ರದಲ್ಲಿ ಪ್ರಾರಂಭಮಾಡಿದರೂ I have no objection. ಸೀಲಿಂಗ್ ಎಷ್ಟಿರಬೇಕು ಎನ್ನುವುದನ್ನು ತೀರ್ಮಾನ ಮಾಡುವಾಗ ಬರೀ ವ್ಯವಸಾಯ ಕ್ಷೇತ್ರವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಮಾಡಬಾರದು. ವ್ಯಾಪಾರ ಮಾಡುವವರು, ಲೇವಾದೇವಿ ಮಾಡತಕ್ಕವರು, ಲಾಯರುಗಳು-ಹೀಗೆ ಎಲ್ಲ ಕ್ಷೇತ್ರಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕು. ಹೀಗೆ ಎಲ್ಲ ಕ್ಷೇತ್ರಗಳನ್ನೂ ಸಮಗ್ರವಾಗಿ ತೆಗೆದುಕೊಂಡು ಇಲ್ಲಿ ಏನು ಸೀಲಿಂಗ್ ಇರಬೇಕೆಂದು suggest ಮಾಡುತ್ತೀರೋ ಆ ಸೀಲಿಂಗ್ ಎಲ್ಲರಿಗೂ ಅನ್ವಯವಾಗಬೇಕು. ಈ ರೀತಿಯಲ್ಲಿ ಒಂದು ಸೀಲಿಂಗ್ ಎಷ್ಟಿರಬೇಕೆಂದು ಹೇಳಿದರೆ ಆಗ ನಾವೆಲ್ಲರೂ ಕೈ ಎತ್ತಿ ಬೆಂಬಲವನ್ನು ಕೊಡುತ್ತೇವೆ. ಹಾಗೆ ಮಾಡದೆ ಸುಮ್ಮನೆ higgle haggle ಮಾಡಿ ಏನೋ ಒಂದನ್ನು ಈಗ ನಮ್ಮ ಮುಂದೆ ತಂದು ಉಳಿದುದನ್ನು ಅನಂತರ ನೋಡೋಣವೆಂದರೆ ಅದನ್ನು ಒಪ್ಪಲು ಸಾಧ್ಯವಿಲ್ಲ. You please look to para three or four of the Planning Commission Report of the First Five-Year Plan. They have said it. ಇಲ್ಲಿ ಇದನ್ನು ಮೊದಲು ಮಾಡೋಣ, ಮುಂದಕ್ಕೆ ನೋಡೋಣವೆಂದು ಹೇಳುತ್ತಾರೆ. ಇದು Central subject ಆಗುವುದಿಲ್ಲ. ಪ್ಲಾನಿಂಗ್ ಕಮಿಷನವರು 'as also in other sectors' ಎಂದು ಹೇಳಿದ್ದಾರೆ. ಅವರು ಬೇಡವೆಂದು

(SRI H. M. CHANNABASAPPA)

ಎಲ್ಲಿಯೂ ಹೇಳಿಲ್ಲ. ಒಂದು ವೇಳೆ ಅವರು ಬೇಡವೆಂದು ಹೇಳುವ ಕಾಲಕ್ಕೆ ಏನು ಆರ್ಗ್ಯುಮೆಂಟ್ ಕೊಡುತ್ತಾರೆಯೋ ನೋಡೋಣ.

Mr. SPEAKER.—What powers have we to put ceilings in other spheres ?

Sri H. M. CHANNABASAPPA.—When we possess powers to put a ceiling limit on agriculture, which commands seventy per cent, don't you think we should have a right to fixing ceiling limits in other spheres ?

Mr. SPEAKER.—I want to know whether we have the power under the Constitution. We are legislating only in respect of land, which is a State subject. In other respects it is the Centre who have the power.

Sri H. M. CHANNABASAPPA.—But it is within our power to suggest.

Mr. SPEAKER.—That is a different thing.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಬಿಟ್ಟು ನಾಳೆ ನೋಡೋಣ ನಾಳೆದ್ದು ನೋಡೋಣವೆಂದರೆ ಯಾರಿಗೋಸ್ಕರ ನಾವು ಹೆದರಬೇಕು? Are we afraid of the capitalists ?

ಅಧ್ಯಕ್ಷರು.—ನಮಗೋಸ್ಕರ ನಾವು ಹೆದರೋಣ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಬ್ಬರಿಗೊಂದು ಒಬ್ಬರಿಗೊಂದು ಮಾಡುವುದಕ್ಕೆ ಹೊರಟರೆ ರಾಜ್ಯಾಂಗಕ್ಕೆ ವಿರೋಧವಾಗುವುದಲ್ಲದೆ, ದೇಶದಲ್ಲಿ ಅಸ್ಥಿರತೆಯನ್ನು ಹೆಚ್ಚಿಸಿ ಗ್ರಾಮಾಂತರಗಳಲ್ಲಿರತಕ್ಕ ಜನರ ಮನಸ್ಸನ್ನು ಕೆಡಿಸುತ್ತದೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ.

We have fixed a ceiling. I go one step further. Fix a ceiling for all incomes in other sectors also. If it is not accepted in other sectors, you should remove this ceiling here also. Do you approve of it ?

Sri J. B. MALLARADHYA.—Does the view expressed by my Hon'ble friend Sri H. M. Channabasappa reflect the view of the entire Congress Party in Mysore ?

Sri K. PUTTASWAMY.—My Hon'ble friend Sri Mallaradhya will have occasion to hear the opinion of the party tomorrow or the day after.

Sri J. B. MALLARADHYA.—I only wanted to know whether it is his individual view or whether it is his party view. I am quite prepared to listen to every one of you.

Sri H. M. CHANNABASAPPA.—We are still discussing these points and we are likely to come to a conclusion in one or two days and we will place it before you.

ಅವರು ಯಾವ ಯಾವ ವಿಷಯಗಳನ್ನು ಹೇಳಿದ್ದಾರೋ ಸ್ವಲ್ಪ ಹೆಚ್ಚುಕಡಮೆ ಅವೆಲ್ಲವನ್ನೂ ಪ್ರಸ್ತಾಪ ಮಾಡಿದ್ದೇನೆ. ಕೊನೆಯದಾಗಿ ನನ್ನ ಅರಿಕೆ ಇಷ್ಟೆ. ಕರಡು ಮಸೂದೆಯನ್ನು ತಯಾರುಮಾಡಿ ಮುಂದಿನುವಾಗ, ಬೊಂಬಾಯಿ ಕಾನೂನಿನಲ್ಲಿ ಅಥವ ಬೇರೆ ಕಡೆ ಆ ರೀತಿ ಇದೆ, ಅದನ್ನು ಇಲ್ಲಿ ಸೇರಿಸಿದ್ದೇವೆ ಎಂದು ಹೇಳಬಾರದು. ನಮ್ಮ ಗುರಿಯನ್ನು ನಾವು ನೇರವಾಗಿ ಮುಟ್ಟಬೇಕು. ರೈತರಿಗೆ ತೊಂದರೆ ಯಾಗಬಾರದು, ವ್ಯವಸಾಯಕ್ಕೆ ಧಕ್ಕೆ ಬರಬಾರದು, ಜನರು ವಕೀಲರಲ್ಲಿಗೆ ಹೋಗುವ ಕಷ್ಟವನ್ನು ಅನುಭವಿಸಬಾರದು, ದೇಶದಲ್ಲಿ ಅಶಾಂತಿ ಆಗಬಾರದು, ಇದನ್ನೆಲ್ಲಾ ಗಮನದಲ್ಲಿಟ್ಟು ಮಾಡುವುದು ಮುಖ್ಯ. ನಾನು ಕೊಟ್ಟಿರುವ ಸಲಹೆಗಳನ್ನು ಕಾರ್ಯಗತಮಾಡುವುದು ಸುಲಭ. ಕೆಲವರಿಗೆ ತೊಂದರೆಯಾಗಬಹುದು ಇವುಗಳನ್ನು ಸ್ವಲ್ಪ ಸುಧಾರಣೆಮಾಡಿ ಜಾರಿಗೆ ಕೊಡಬಹುದು. ಇದಕ್ಕಿಂತ ಸುಲಭವಾದ ಮಾರ್ಗ ಬೇರೆ ಇಲ್ಲ. ಹೆಚ್ಚುವರಿ ಜಮೀನನ್ನು ಬೇರೆಯವರಿಗೆ ಕೊಡಿ ಎಂದು ಹೇಳಿದರೆ ಕೊಡುತ್ತಾರೆ. ಆದರೆ ಅದಕ್ಕೆ ತಕ್ಕಷ್ಟು ಹಣವನ್ನು ಕೊಡದೆ ಹೀಗೆ ಮಾಡಿದರೆ ಒಬ್ಬ ಬಡವನಿಗೂ ಒಂದು ಅಂಗುಲ ಭೂಮಿ ಸಿಕ್ಕುವುದಿಲ್ಲವೆಂದು ನಾನು ಸ್ಥೂಲವಾಗಿ ಸೂಚನೆ ಕೊಟ್ಟಿದ್ದೇನೆ.

ಅಧ್ಯಕ್ಷರು.—ಸ್ವಲ್ಪ ರಚನಾತ್ಮಕವಾದ ಸಲಹೆಗಳಿದ್ದರೆ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೇಳಿದಾಗ ತಾವಿರಲಿಲ್ಲ.

ಅಧ್ಯಕ್ಷರು.—ನಾನು ಇಲ್ಲದ್ದಾಗ ತಾವು ಹೇಳಲಿಲ್ಲ.

Sri H. M. CHANNABASAPPA.—My constructive suggestions are these :—
1. Prescribe a date after which all absentee landlords shall be removed except in the case of some class of people who are disabled, women and certain others. Say that all lands not cultivated by the owner will vest in the Government as from that date. ಆರು ತಿಂಗಳು ಅಥವಾ ಮೂರು ತಿಂಗಳು ಕಾಲಾವಕಾಶ ಕೊಡಲಿ.

ಎರಡನೆಯದಾಗಿ, ಯಾರು ಯಾರು ಸ್ವತಃ ಭೂಮಿಯನ್ನು ವ್ಯವಸಾಯ ಮಾಡುವುದಿಲ್ಲವೋ ಅವರು ಭೂಮಿಯನ್ನು ಹೊಂದುವುದಕ್ಕೆ ಅವಕಾಶವಿಲ್ಲ. ಮೂರನೆಯದಾಗಿ ಪರಮಾವಧಿ ಮಟ್ಟದ ಪರಿಮಿತಿಯನ್ನು ಹಾಕಬೇಕೆಂದು ಅಭಿಪ್ರಾಯಪಟ್ಟರೆ, ಸ್ವತಃ ಸಾಗುವಳಿ ಮಾಡತಕ್ಕವರಿಗೆ ಪರಮಾವಧಿ ಖುಷ್ಕಿ ಇಪ್ಪತ್ತರಿ ಇಪ್ಪತ್ತು ಎಂದು ಗೊತ್ತುಮಾಡಿ ಅದಕ್ಕಿಂತ ಹೆಚ್ಚಾಗಿರುವ ಜಮೀನನ್ನು ಇಂಥ ತಾರೀಖಿನೊಳಗೆ ಬಿಡಬೇಕು, ಯಾರಿಗಾದರೂ ಆ ಹೆಚ್ಚುವರಿ ಜಮೀನನ್ನು ಕೊಡಿ, ಉಳುವವನಿಗೆ ಕೊಡಬೇಕು ಎಂದು ಹೇಳಬೇಕು. ಯಾರಿಗೆ ಆ ಜಮೀನನ್ನು ಕೊಟ್ಟರು ಎನ್ನುವುದನ್ನು ತಾಲ್ಲೂಕು ಕಚೇರಿಯಲ್ಲಿ ನೋಡಿ ತಿಳಿದುಕೊಳ್ಳಬಹುದು. ಹೀಗೆ ಮಾಡಿದರೆ ಅವರವರೇ ಕುಳಿತುಕೊಂಡು ಪರಸ್ಪರ ಸರಿಮಾಡಿಕೊಳ್ಳುತ್ತಾರೆ.

ಇನ್ನು ಹಣದ ಪ್ರಶ್ನೆ ಅವರಿಗೆ ಹಣವನ್ನು ಕೊಡಬೇಕು. ಗೇಣಿದಾರರ ಕೊಂಡುಕೊಳ್ಳಬೇಕಾದರೆ

ಸರ್ಕಾರ ಲ್ಯಾಂಡ್ ಬ್ಯಾಂಕ್ ಎಂದಿಡಬೇಕು. ಇತರ ಬ್ಯಾಂಕುಗಳಿಂದಲೂ ಸರ್ಕಾರದ ಗ್ಯಾರಂಟಿಯಮೇಲೆ ಗೇಣಿದಾರರೂ ಕೂಲಿಗಾರರೂ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆಮಾಡಬೇಕು. ದರ ಗಳನ್ನು ಅವರವರೇ ನಿರ್ಧಾರ ಮಾಡಿಕೊಳ್ಳುತ್ತಾರೆ. ಬ್ಯಾಂಕಿನವರೇನಿದ್ದರೂ ಹಣವನ್ನು ಕೊಡಬೇಕು. ಪ್ರತಿವರ್ಷವೂ ದಾಮಾಷಾ ರೇಟಿನಂತೆ ಆ ಹಣವನ್ನು ಅವರಿಂದ ಕಂದಾಯದ ರೂಪದಲ್ಲಿ ವಸೂಲು ಮಾಡ ಬೇಕು.....

ಶ್ರೀ ಡಿ. ದೇವರಾಜ ಅರಸ್.—ಶ್ರೀಮಾನ್ ಚನ್ನ ಬಸಪ್ಪನವರು ಕೊಡುವ ಸಲಹೆಯ ಸಂಬಂಧದಲ್ಲಿ ಒಂದು ವಿಷಯವನ್ನು ತಿಳಿಯಬೇಕು. ಜಿತ್ತ ಸಮಿ ತಿಯ ವರದಿಯಲ್ಲಿ ಕೊಟ್ಟಿರುವ personal cultivation ಎಂಬುದರ ವಿವರಣೆಯನ್ನು ಒಪ್ಪಿಕೊಂಡಿದ್ದಾರೆ. ಯಾರಾದರೂ ಜಮೀನನ್ನು ಕೊಂಡುಕೊಳ್ಳಲು ಅವ ಕಾಶ ಕೊಡಬೇಕು, ಇದೇನೋ ಸರಿ. ಯಾವುದಾ ದರೂ ಬೇರೆ ಉದ್ಯಮದಲ್ಲಿರುವವರು, ಅಥವ ವ್ಯಾಪಾರ ಮಾಡುವವರು ಜಮೀನನ್ನು ಕೊಂಡು ಕೊಂಡರೂ ಸಹ ಅವರು ಜಮೀನನ್ನಿಟ್ಟುಕೊಳ್ಳಲು ಅವಕಾಶವಿದೆ. ಇಂಥವರಿಗೆ ಜಮೀನು ದೊರೆಯು ವುದು ನ್ಯಾಯ ಎಂದು ಹೇಳುತ್ತಾರೆಯೆ? ಅಥವ ಬೇರೆ ರೀತಿಯಲ್ಲಿ ಸಂಪಾದನೆ ಮಾಡಲು ಅವಕಾಶ ವಿರುವವರು under the pretence of personal cultivation ಜಮೀನನ್ನಿಟ್ಟುಕೊಳ್ಳಲು ಅವಕಾಶವಿದೆಯೆ ಎಂಬುದನ್ನು ಅವರು ಹೇಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಕೇಳಿ ದುದು ಸರಿ. ಒಬ್ಬ ಡೆಪ್ಯುಟೀ ಕಮೀಷನರು, ನಾವಿರ ರೂಪಾಯಿ ಸಂಬಳ ಪಡೆಯುವವನು ಪರ್ಸನಲ್ ಕಲ್ಟಿವೇಷ್ಟಿಗೆಂದು ಗುಮಾನ್ತರನ್ನಿಟ್ಟು ನನಗೆ ಜಮೀನು ಬೇಕೆಂದು ಹೇಳಿ ಪಡೆದು ಇಟ್ಟುಕೊಳ್ಳ ಬಹುದು. ಇಂಥದಕ್ಕೆ ಅವಕಾಶ ಕೊಡುವುದು ಒಳ್ಳೆಯದಲ್ಲ. ಎಲ್ಲರಿಗೂ ಕೆಲಸ ದೊರಕಬೇಕು, ದುಡಿಮೆ ಮಾಡುವುದಕ್ಕೆ ಅವಕಾಶವಿರಬೇಕೆನ್ನುವಾಗ ಅವನು ಗೇಣಿದಾರನಾಗಿರಲಿ, ಬೇರೆಯವನಾಗಿರಲಿ, ಬೇರೆ ಉತ್ಪತ್ತಿಗೆ ಮಾರ್ಗವಿದ್ದರೂ ಎಲ್ಲವೂ ನನಗಿರ ಲೆಂದು ಭೂಮಿಯನ್ನು ಪಡೆಯಲು ಅವಕಾಶವಿರ ಬಾರದು. ಅಧಿಕಾರ, ಭೂಮಿ, ಬಸ್ಸು ಸರ್ವಿಸು ಎಲ್ಲವೂ ತಮಗಿರಬೇಕೆಂದು ಕೇಂದ್ರೀಕೃತ ಮಾಡಿ ಕೊಳ್ಳಲು ಸೋಷಿಯಲಿಸ್ಟಿಕ್ ಸ್ಟೇಟ್‌ನಲ್ಲಿ ಅವಕಾಶ ವಿರಬಾರದು.

ಅಷ್ಟು ಹಣವನ್ನು ಒದಗಿಸಬೇಕಾದರೆ ಹಣ ಎಲ್ಲಿಂದ ಬರಬೇಕು? ಈಗ ಇರುವ ಹಣ ಸಾಲುತ್ತದೆಯೇ? ಈ ವಿಚಾರದಲ್ಲಿ ಒಂದು ರಚನಾತ್ಮಕ ಸಲಹೆಯನ್ನು ನಾನು ಕೊಡುತ್ತೇನೆ. ಮೊಟ್ಟಮೊದಲು ಎಷ್ಟು ಹಣಬೇಕಾಗ ಬಹುದು ಎಂಬುದನ್ನು ಅಂದಾಜುಮಾಡಬೇಕು. ಎಷ್ಟೋಹಣ ನುಮ್ಮನೆ ಸರಕಾರದ ಹತ್ತಿರ ಬದ್ದು ಕೊಂಡಿದೆ, ಧೈರ್ಯದಿಂದ ನಮ್ಮ ಗುರಿಯನ್ನು ಸಾಧಿಸುವುದಕ್ಕಾಗಿ ಬಾಂಡ್‌ರೂಪದಿಂದ ಹಣವನ್ನು ಕೊಟ್ಟುಬಿಡೋಣ. ನಾವು ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ ಎಂಬ ಒಂದು ಸಮಾಧಾನವು ಇರಲಿ. ಏನೇ ಪರಿಸ್ಥಿತಿ ಬರಲಿ ಅದನ್ನು ನಾವು ಧೈರ್ಯದಿಂದ ಎದುರಿಸುತ್ತೇವೆಂಬ ಭರವಸೆಯಿರಲಿ. ಭೂಮಿಯನ್ನು ಕೊಂಡುಕೊಳ್ಳುವಾಗ ಅದಕ್ಕೆ ಪ್ರತಿಫಲವನ್ನು ಬಾಂಡ್ ರೂಪದಲ್ಲಿ ಕೊಡೋಣ. ಫ್ಯಾಮಿಲಿ ಹೋಲ್ಡಿಂಗ್ ಎಷ್ಟು ಇರಬೇಕೆಂಬುದನ್ನು ಮೊದಲು ನಿರ್ದಿಷ್ಟಪಡಿಸಿ ಅದರ ವಿವರಣೆಕೊಡಬೇಕು. ಈ ಒಂದು ವ್ಯವಸ್ಥೆ ಯನ್ನು ಮೊದಲುಮಾಡಬೇಕಾಗಿದೆ. ಎಂದರೆ ಮುಂದೆ ಕೋ-ಆಪರೇಟಿವ್ ಫಾರ್ಮಿಂಗ್ ಮಾಡುವುದಕ್ಕೆ ಅನು ಕೂಲವಾಗುವುದು. ಈಗಾಗಲೇ ಹಿಡುವಳಿಯಲ್ಲಿ ಇಟ್ಟುಕೊಂಡಿರತಕ್ಕಂಥ 35 ಲಕ್ಷ ಎಕರೆ ಭೂಮಿಯಲ್ಲಿ ಸರಿಯಾಗಿ ಉತ್ಪತ್ತಿಯಾಗುತ್ತಿದೆಯೇ ಎಂಬುದನ್ನು ಯೋಚನೆಮಾಡಬೇಕು. ಅದರಲ್ಲಿಯ 15 ಲಕ್ಷ ಎಕರೆ ಭೂಮಿಯು ಸಾಗುವಳಿಯಾಗುವಂತೆ ಇನ್ನೂ ಒಂದು ವ್ಯವಸ್ಥೆಮಾಡಬೇಕಾಗಿದೆ. ಸಾಗುವಳಿಮಾಡುವುದಕ್ಕೆ ಭೂಮಿಯಿಲ್ಲದೆ ಇರುವ ಬಡವರಿಗೆ ಭೂಮಿಯನ್ನು ಕೊಟ್ಟು ಸಾಗುವಳಿಯಾಗುವಂತೆ ಮಾಡಲು ಸಾಧ್ಯ ವಿಲ್ಲವೇ? ಆದರೆ ಒಂದು ವಿಚಾರ ಭೂಮಿಯನ್ನು ತೆಗೆದುಕೊಳ್ಳಲು ಬಡವರ ಹತ್ತಿರ ದುಡ್ಡು ಎಲ್ಲಿಂದ ಬರಬೇಕು? ಅದುದರಿಂದ ಒಂದು ಸ್ಕೀಮು ತಯಾರು ಮಾಡಬೇಕಾಗಿದೆ. ಸರಕಾರ ಅಷ್ಟು ಒಂಡವಾಳ ಹಾಕಿದರೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ನೋಡಬಹುದು. ಅಂಥ ಭೂಮಿಯಲ್ಲಿ ಹತ್ತಿಪ್ಪತ್ತು ಭಾಗಗಳನ್ನು ಮಾಡಬೇಕು. ಕೋ-ಆಪರೇಟಿವ್ ಸೊಸೈಟಿ ಏರ್ಪಾಡುಮಾಡಿ ಭೂಮಿಯನ್ನು ಕೊಡ ಬೇಕು. ಹತ್ತಿಪ್ಪತ್ತು ಬ್ಲಾಕ್‌ಗಳನ್ನು ಮಾಡಿ ಅದಕ್ಕೆ ಬೇಕಾಗುವ ದುಡ್ಡನ್ನು ಸರಕಾರ ಒದಗಿಸಬೇಕು. ನಾನು ಹಿಂದಕ್ಕೆ ಮಂತ್ರಿಯಾಗಿದ್ದಾಗ ಇದನ್ನೆಲ್ಲಾ ಲೆಖ್ಖ ಹಾಕಿದ್ದೇನೆ. ಒಂದು ಸ್ಕೀಮು ತಯಾರುಮಾಡಿ ದ್ದೇನೆ. ಈ ಪ್ರಕಾರಮಾಡಿ ಸಾಗುವಳಿಮಾಡಲು ಸೊಸೈಟಿ ಮುಖೇನ ಭೂಮಿಯನ್ನು ಕೊಡಬೇಕು. ಎಂದರೆ ಭೂಮಿಯು ಸಾಗುವಳಿಗೆ ಬರುತ್ತದೆ. ಭೂಮಿಯಿಲ್ಲದವರಿಗೆ ಸಾಗುವಳಿಮಾಡಲು ಭೂಮಿ ದೊರೆಯುತ್ತದೆ. ನಾನು ತಯಾರುಮಾಡಿದ ಈ ಸ್ಕೀಮು ಸರಕಾರದ ರಿಕಾರ್ಡ್ಸ್‌ನಲ್ಲಿ ಇದೆ. ಒಂದು ಇಂಚು ಭೂಮಿಯು ಕೂಡ ಸಾಗುವಳಿಯಾಗದೆ ಉಳಿ ಯದು. ಹಾಗೂ ಉತ್ತಮ ರೀತಿಯಿಂದ ಸಾಗುವಳಿ ಯಾಗುವಂತೆ ಒಂದು ವ್ಯವಸ್ಥೆಯಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ತಮ್ಮ ಆ ಸ್ಕೀಮಿನ ಪ್ರಕಾರ ಗೊಟ್ಟಿಗೆರೆ, ಬೈರಾಪುರ ಕಾಲನಿ ಸ್ಕೀಮು ಗಳ ಪರಿಣಾಮವೇನಾಯಿತು?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮಂಥವರ ಕೈಯಲ್ಲಿ ಆ ಸ್ಕೀಮು ಸಿಕ್ಕಿಬಿಟ್ಟಿದ್ದರಿಂದ ಹಾಗೆ ಆಯಿತು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನನ್ನ ಕೈಯಲ್ಲಿ ಆ ಸ್ಕೀಮು ಸಿಕ್ಕಿದ್ದರೆ ಬೇರೆತರಹ ಮಾಡಲಾಗು ತ್ತಿತ್ತು. I am sure my Hon'ble friend is under a big maya.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮಂಥವರ ಕೈಯಲ್ಲಿ ಸಿಕ್ಕಿ ಬೇರೆ ತರಹವಾಯಿತು. ಈ ರೀತಿ ಸ್ಕೀಮುಗಳನ್ನು ಕಾರ್ಯಗತಮಾಡುವದಕ್ಕೆ ಒಂದು ಸರಿಯಾದ ವ್ಯವಸ್ಥೆಮಾಡದಿದ್ದರೆ ಅವುಗಳ ಪರಿಣಾಮ ಹೀಗಾಗುವುದು. The Agricultural Minister at the Centre has said that he would create a land army of legislators, lawyers and workers.

An HON'BLE MEMBER.—Just as a ceiling on land is proposed, let there be a ceiling on time also.

Mr. SPEAKER.—I request the Hon'ble Member to finish his speech within a short time.

Sri H. M. CHANNABASAPPA.—Sir, you asked me to give concrete proposals and I am doing that. I do not want to take much time of the House. I would appeal to the Hon'ble Members of this House to consider this issue as not a sectional issue either of tenants or of labourers or of landlords but to consider it as a national question. I would request them to keep in mind some of the ideas I have mentioned here and also the primary question, namely, that the majority of the people that we are dealing with are the illiterate people who do not know law. We must design a scheme by which the land will pass on to the persons who cultivate the land and not merely cultivate but cultivate efficiently. We must not be carried away by any political slogans. Production is of primary importance.

ಅಧ್ಯಕ್ಷರು.—ಯಾರಾದರೂ ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತುವ ಮೊದಲೇ ನಾನು ನಿಮಗೆ ಹೇಳುವದೇನೆಂದರೆ ತಾವು ಭಾಷಣವನ್ನು ಯಾವ ಭಾಷೆಯಲ್ಲಿ ಪ್ರಾರಂಭಿಸಿರುವಿರೋ ಅದೇ ಭಾಷೆಯಲ್ಲಿ ಎಂದರೆ ಕನ್ನಡ ಭಾಷೆಯಲ್ಲಿ ಮಾತನಾಡಿ ಭಾಷಣ ಮುಕ್ತಾಯಗೊಳಿಸಬೇಕು ಎಂದು ಸೂಚಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದ್ದರಿಂದ ಯಾಪುದೇ ಒಂದು ಭಾಗದ ಜನರ ದೃಷ್ಟಿಯಿಂದ ಈ ಶಾಸನವನ್ನು ಮಾಡುವದು ಬೇಡ. ದೇಶದಲ್ಲಿ ಉತ್ಪನ್ನಕ್ಕೆ ಧಕ್ಕೆತರುವಂಥ ಶಾಸನವನ್ನು ಅಂಗೀಕಾರ ಮಾಡುವುದು ಬೇಡ. ಉತ್ಪನಕ್ಕೆ ಧಕ್ಕೆ ಬಂದರೂ ಚಿಂತೆಯಿಲ್ಲ, ಭೂಮಿಯನ್ನು ಎಲ್ಲರಿಗೂ ಹಂಚಬೇಕು ಎನ್ನುವದು ಸರಿಯಲ್ಲ. ಸಣ್ಣಪುಟ್ಟ ಹಿಡುವಳಿಗಳು ಹೆಚ್ಚಾದರೆ ದೇಶಕ್ಕೇ ಹಾನಿ. ಇವುಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಶಾಸನಮಾಡಬೇಕೆಂದು ನಾನು ಸೂಚನೆಮಾಡುತ್ತೇನೆ.

Sri J. B. MALLARADHYA.—It would be very useful, if the House agrees with me, that if Sri Jatti who happens to be a member of this House is given an opportunity to speak on the very first occasion tomorrow because it will facilitate...

Mr. SPEAKER.—I would be very happy to hear Sri Jatti if he can speak tomorrow.

Sri A. V. NARASIMHA REDDY (Bangalore South).—It is better that Sri Jatti as Chairman of the Committee replies to the debate after all the members express their views.

Mr. SPEAKER.—The point is that Sri Jatti should take part in the debate.

The House will now rise and meet tomorrow at 1 P.M.

The House adjourned at Forty Minutes past Six of the Clock to meet again at One of the Clock on Tuesday, the 11th March 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. (B) 4742
ದಿನಾಂಕ Date.....

WD 122—GPB—900—15-7-58